Sri T. MARIAPPA.—Sir, I beg to move that the time fixed for the presentation of the report of the Select Committee to consider the Mysore Agricultural Income Tax Bill, 1957, be extended and the report presented before the end of the current session of the Assembly.

Mr. SPEAKER.—Motion moved:

"That the time fixed for the presentation of the report of the Select Committee to consider the Mysore Agricultural Income Tax Bill, 1957, be extended and the report presented by the end of the current session of the Assembly."

The motion was adopted.

BUDGET FOR 1957-58—DEMANDS FOR GRANTS.

Demands Nos. 1, 3, 4, 7 and 8.

(*Discussion Continued.*)

Sri M. C. NARASIMHAN (Kolar Gold Fields).—Sir, I had asked for a copy of the memorandum submitted to the Finance Commission. So far, it has not been made available.

Sri T. MARIAPPA (Minister for Finance).—It is ready, Sir. I will place it on the Table of the House.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಸ್ವಾಮಿ, ಈ ದಿವಸ ಸ್ಟ್ಯಾಂಪ್ ಮತ್ತು ಇತರ ಎಕ್ಸೈಜ್ ಡ್ಯೂಟಿಗಳಿಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ತೃಪ್ತಿಕರವಾದ ರೀತಿಯಲ್ಲಿ ನಮ್ಮ ಮುಂದಿಟ್ಟಿದ್ದಾರೆಯೆ ಎಂದರೆ, ನಿಜವಾಗಿಯೂ ಇಲ್ಲ.

[MR. DEPUTY SPEAKER (Sri L. H. Thimma Bovi) in the Chair.]

ಶ್ರೀ ಜಿ. ವೆಂಕಟೇಗೌಡ.—ಮಾನ್ಯ ನರಸಿಂಹಯ್ಯನವರು ಭಾಷಣ ಮಾಡುತ್ತ ಸ್ಟ್ಯಾಂಪ್ ಡ್ಯೂಟಿಯನ್ನು ಹೆಚ್ಚು ಮಾಡಿದರೆ ಅನೇಕ ವಿಧವಾದ ಸಮಸ್ಯೆಗಳನ್ನೂ ವಿವಾದಗಳನ್ನೂ ಜನರು ಕೋರ್ಟಿಗೆ ತೆಗೆದುಕೊಂಡು ಹೋಗುವುದು ಕಡಮೆಯಾಗುತ್ತದೆಂದು ಹೇಳಿದರು. ಆ ವಾದವನ್ನು ನಾನು ಒಪ್ಪುವುದಿಲ್ಲ. ಹಾಗೆ ಮಾಡಿದರೆ, ಯಾರು ಹಣವಂತರೋ, ಅವರಿಗೆ ನ್ಯಾಯ ದೊರಕುತ್ತದೆಯೇ ಹೊರತು ಬಡವರಿಗೆ ನಿಜವಾಗಿಯೂ ನ್ಯಾಯ ದೊರಕುವುದಿಲ್ಲ. ಆದುದರಿಂದ ಈಗ ಸ್ಟ್ಯಾಂಪ್ ಡ್ಯೂಟಿ ಆದಷ್ಟು ಕಡಮೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಈಗ ಈ ಬಾಬಿನಿಂದ 1,30,39,000 ರೂಪಾಯಿ ಉತ್ಪತ್ತಿಯಾಗುತ್ತಿದೆ. ಇದರಲ್ಲಿ ಹೆಚ್ಚು ಭಾಗವನ್ನು ಕೊಡುವವರು ನಮ್ಮ ಸಂಸ್ಥಾನದಲ್ಲಿರುವ ಸಾಮಾನ್ಯ ವರ್ಗಗಳಿಗೆ ಸೇರಿದವರು. ಯಾವುದಾದರೂ ವ್ಯವಹಾರವಾಗಬೇಕಾದರೆ ಸಾಮಾನ್ಯ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಸ್ಟ್ಯಾಂಪ್ ಡ್ಯೂಟಿ ಕೊಡುವವರು. ಸ್ವತ್ತುಗಳನ್ನು ಮಾರುವವರು, ಆಧಾರ, ಭೋಗ್ಯ ಮುಂತಾದುವುಗಳನ್ನು ಮಾಡುವವರು ಸಾಮಾನ್ಯ ವರ್ಗದ ಜನರು. ಈ ಬಾಬಿನಿಂದ ಬರುವ ವರಮಾನ ಈ ವರ್ಗದವರಿಂದ ಬರುತ್ತದೆ. ಸಾಮಾನ್ಯ ವರ್ಗದವರಿಂದ ವಸೂಲು ಮಾಡುವ ವಿಧಾನವನ್ನು ಸರ್ಕಾರ ಅನುಸರಿಸುವುದು ಒಳ್ಳೆಯದಲ್ಲವೆಂದು ತಮ್ಮ ಮೂಲಕ ಎಚ್ಚರಿಕೆ ಕೊಡಬೇಕಾಗಿದೆ. ಸ್ವತ್ತನ್ನು ಕೊಂಡುಕೊಳ್ಳುವವನು ಲಾಭ ಪಡೆಯುತ್ತಾನೆ. ಯಾರಿಗೆ ಲಾಭ ಬರುತ್ತದೆಯೋ ಅವನು ಈ ತೆರಿಗೆಯನ್ನು ವಹಿಸಬೇಕೇ ವಿನಾ ಸ್ವತ್ತನ್ನು ಕಳೆದುಕೊಳ್ಳುವವರಿಂದ ಈ ತೆರಿಗೆ ಪಡೆಯಬಾರದು. ಹೆಚ್ಚು ಜನರಿಗೆ ಮಾರುವ ಮನೋಭಾವ ಬಾರದಂತೆ ಮಾಡಬೇಕೆಂದು ಶ್ರೀ ನರಸಿಂಹಯ್ಯನವರು ಹೇಳಿದರು. . . .

Sri T. MARIAPPA.—Sir, I would like to intervene for a minute. Even on the last day, I noticed the same thing. No distinction is made between the judicial and non-judicial stamps. By the trend of the argument, it is clear that they want to put together the judicial and non-judicial, stamps and try to say that the Government is making a lot of money in the administration of justice.

Sri G. VENKATAI GOWDA.—I am not saying that the Government is making a lot of money by administration.

ನಾನು ತಮ್ಮ ಮುಂದಿಡಬೇಕೆಂದಿರುವುದಿಷ್ಟೆ: ಹೆಚ್ಚಾಗಿ ಸಾಮಾನ್ಯವರ್ಗದ ಜನರೂ ಬಡವರೂ ಕೊಡುವ ರೀತಿಯಲ್ಲಿರಬಾರದು ; ಯಾರು ವ್ಯವಹಾರದಲ್ಲಿ ಲಾಭಪಡೆಯುತ್ತಾರೋ ಅವರು ಕೊಡುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ. ಕೋರ್ಟುಫೀ ಹೆಚ್ಚುಮಾಡಿದರೆ ಕೋರ್ಟು ವ್ಯವಹಾರಗಳು ಕಡಮೆಯಾಗುತ್ತವೆಂದು ಹೇಳಿದರು; ಹೀಗೆ ಮಾಡಿದರೆ ಬಡವರಿಗೆ ನ್ಯಾಯ ದೊರಕುವುದಿಲ್ಲ. ಸಾಮಾನ್ಯವಾಗಿ ಅನೇಕ ಬಡವರೇ ಕಷ್ಟಕ್ಕೆ ಸಿಕ್ಕುತ್ತಾರೆ; ಇದರಿಂದ ಕೋರ್ಟಿಗೆ ಹೋಗುತ್ತಾರೆ. ಇಂಥವರಿಗೆ ನ್ಯಾಯ ಸುಲಭವಾಗಿ ಸಿಕ್ಕಬೇಕು. ಈ ತೆರಿಗೆಯನ್ನು ಅವರಿಂದ ಹೆಚ್ಚುಪಡೆಯಬಹುದೆಂದು ಸರ್ಕಾರ ಭಾವಿಸಬಾರದು.

ಮೂರನೆಯದಾಗಿ, ಪಾನ ನಿರೋಧದ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ಪಾನನಿರೋಧ ಕಾರ್ಯವನ್ನು ಸುಮಾರು ಹತ್ತು ವರ್ಷಗಳಿಂದಲೂ ನೋಡುತ್ತಿದ್ದೇವೆ. ಈ ಕಾರ್ಯ ಸಮರ್ಪಕವಾಗಿ, ಯಶಸ್ವಿಯಾಗಿ ಆಗಿಲ್ಲ. ಅನೇಕರಿಗೆ ಇದು ಅನುಭವವಾಗಿದ್ದರೂ ತಮ್ಮ ಮನಸ್ಸನ್ನು ಬಿಚ್ಚಿಹೇಳುತ್ತಿಲ್ಲ. ಪ್ರತಿಯೊಬ್ಬರೂ ನೋಡಿದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಯೋಚಿಸಬೇಕು. ಪಾನನಿರೋಧವನ್ನು ಪೂರ್ತಿಯಾಗಿ ಸಂಸ್ಥಾನಾದ್ಯಂತ ಸಮರ್ಪಕವಾಗಿ ಜಾರಿಗೆ ತರದೇ ಇರುವುದರಿಂದ ಇಲ್ಲಿಯವರೆಗೂ ಇದು ಯಶಸ್ವಿಯಾಗಿಲ್ಲವೆಂಬುದು ಸ್ಪಷ್ಟವಾಗಿದೆ. ಇದನ್ನು ಸ್ಪಷ್ಟವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಎಲ್ಲಿಯವರೆಗೆ ಪೂರ್ತಿಯಾಗಿ ಜಾರಿಗೆ ತರುವುದಿಲ್ಲವೋ ಅಲ್ಲಿಯವರೆಗೆ ಇದು ಯಶಸ್ವಿಯಾಗುವುದಿಲ್ಲ. ಪೋಲೀಸರು ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಲ್ಲ. ಕುಡಿಯುವವರೂ ಮನುಷ್ಯರು, ಇದನ್ನು ತಪ್ಪಿಸಲು ಹೊರಟಿರುವವರೂ ಮನುಷ್ಯರು.

2-30 P.M.

ಇದರಲ್ಲಿ ಜನರ ಮನೋಭಿಪ್ರಾಯ, ಅವರ ಮನೋಭಾವನೆಗಳು ಬದಲಾಗದ ಹೊರತು ಈ ಪಾನನಿರೋಧ ಯಶಸ್ವಿಯಾಗಲಾರದೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತರತಕ್ಕ ಬಗ್ಗೆ ಪೋಲೀಸಿನವರನ್ನು ನೇಮಕಮಾಡಿಕೊಂಡಿದ್ದಾರೆ. ಆದರೆ ಈ ಇಲಾಖೆಯವರಿಂದ ಇದನ್ನು ಜಾರಿಗೆ ತರಲು ಖಂಡಿತ ಸಾಧ್ಯವಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರಿಗೆ ಖಂಡಿತವಾಗಿಯೂ ಪಾನನಿರೋಧವನ್ನು ದೇಶದಲ್ಲಿ ಯಶಸ್ವಿಗೊಳಿಸಬೇಕಾಗಿದ್ದರೆ—ಯೂತ್‌ಲೀಗ್ ಅಥವಾ ಸೇವಾದಳಗಳಿಗೆ ಈ ಕಾರ್ಯವನ್ನೊಪ್ಪಿಸಿದರೆ ಆಗೇನಾದರೂ ಸ್ವಲ್ಪ ಪ್ರಯೋಜನವಾಗಬಹುದು. ಅವರೂ ಸಹ ಮೊದಲು ಜನರ ಮನೋಭಿಪ್ರಾಯವನ್ನು ಬದಲಾವಣೆಮಾಡದಿದ್ದರೆ ಇದು ಯಶಸ್ವಿಯಾಗುವುದಿಲ್ಲವೆಂಬ ಅಂಶವನ್ನು ನಾನೀಗ ಸರ್ಕಾರದವರ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರ ನೀತಿ ಕೂಡ ಅಷ್ಟು ಸರಿಯಾಗಿದ್ದಂತೆ ಕಾಣುವುದಿಲ್ಲ. ಕಾರಣವೇನೆಂದರೆ ಕೇಂದ್ರ ಸರ್ಕಾರದವರು ಕೇರಳ ಸರ್ಕಾರದವರಿಗೆ ಪ್ರೊಹಿಬಿಷನ್ ವಿಚಾರದಲ್ಲಿ ಮುಂದುವರಿಸಬೇಡಿ ಎಂಬುದಾಗಿ ತಿಳಿಸಿದ್ದಾರೆಂಬ ಸುದ್ದಿಯನ್ನು ಕೇಳುತ್ತಿದ್ದೇನೆ. ಅವರ ಭಾವನೆ ಹೀಗಿರುವಾಗ ಅವರು ಯಾವ ವರ್ಷ ಪಾನನಿರೋಧವನ್ನು ದೇಶಾದ್ಯಂತವೂ ಜಾರಿಗೆ ತರುತ್ತಾರೆಂಬುದನ್ನೇ ಜನರು ತಿಳಿಯುವಂತಿಲ್ಲ. ಹೀಗಾಗಿ ರಾಜ್ಯದಲ್ಲಿ ಸಾರ್ವಜನಿಕರಿಗೆ ಈ ವಿಚಾರದಲ್ಲಿ ತುಂಬ ಬೇಜಾರಾಗಿದೆ. ಮೊದಲೇನು ಈಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಮದರಾಸ್ ಕಾಂಗ್ರೆಸ್‌ಸರ್ಕಾರ ಉದ್ದೇಶಪಟ್ಟಿತೋ ಆಗ ಇದನ್ನು ಸೇಲಂ ಜಿಲ್ಲೆಯಲ್ಲಿ ಪ್ರಾರಂಭಮಾಡಲಾಯಿತು. ಆಗ ಜನರೆಲ್ಲ ಇದಕ್ಕೆ ತುಂಬಾ ಬೆಂಬಲ ನೀಡಿದರು. ಅದರಿಂದ ಮೊದಮೊದಲು ಇದು ಯಶಸ್ವಿಯಾಗತಕ್ಕ ಚಿಹ್ನೆಗಳು ಅಲ್ಲಲ್ಲೇ ಕಂಡು ಬಂದುವು. ಆದರೆ 1947ರಿಂದೀಚೆಗೆ ಇದರ ಬಗ್ಗೆ ಸಾರ್ವಜನಿಕರ ಬೆಂಬಲ ಕಳೆದುಹೋಯಿತು. ಅಲ್ಲಿಂದೀಚೆಗೆ ಸರ್ಕಾರದವರು ಈ ಬಾಬಿನಲ್ಲಿ ನಗೆಗೀಡಾಗಿದ್ದಾರೆ. The Government has become an object of ridicule in the eyes of the public. ಮೇಲಾಗಿ ಈ ಸರ್ಕಾರಗಳು ಆ ಅಗರವಾಲಾ ಸಮಿತಿ ಅವರ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರತಕ್ಕ ಬಗ್ಗೆ ಯಾವ ಪ್ರಯತ್ನಗಳನ್ನೂ ಮಾಡಲಿಲ್ಲ. ಈಗ ಪಾನನಿರೋಧವನ್ನು ಸಮರ್ಪಕವಾದ ರೀತಿಯಲ್ಲಿ ಜಾರಿಗೆ ತಂದು ಇದನ್ನು ಯಶಸ್ವಿಗೊಳಿಸಬೇಕಾಗಿದ್ದರೆ ಕಾಂಗ್ರೆಸ್ಸಿನವರೇ ಆಗಲೀ ಇನ್ನೊಬ್ಬರೇ ಆಗಲಿ ಅವರು ಮೊದಲು ಜನರ ಹೃದಯಪರಿವರ್ತನೆ ಮಾಡಬೇಕಾಗಿದೆ. ಹಾಗಿಲ್ಲದೆ ಇದನ್ನು ಕೇವಲ ಒಂದು ಕಾನೂನು ಬಲದ ಮೇಲೆ ಜಾರಿಗೆ ತರುತ್ತೇವೆಂದು ತಾವು ಹೇಳುವುದಾದರೆ ಅದು ಖಂಡಿತ ಸಾಧ್ಯವಾಗುವುದಿಲ್ಲ. ಸಾರ್ವಜನಿಕರ ಬೆಂಬಲ ಪಡೆಯದೆ ದೇಶದಲ್ಲಿ ಜನರ ನೈತಿಕಮಟ್ಟವನ್ನೂ ಆರ್ಥಿಕಮಟ್ಟವನ್ನೂ ಹೆಚ್ಚಿಸಲು ಸಾಧ್ಯವಿಲ್ಲ. ಈಗಲೂ ಸಹ ನಮ್ಮ ಸರ್ಕಾರ ಅಗರವಾಲಾ ಸಮಿತಿಯವರ ವರದಿಯಲ್ಲಿ ಸೂಚಿಸಿರುವಂತೆ ಪಾನನಿರೋಧವನ್ನು ದೇಶಾದ್ಯಂತವೂ ಸಂಪೂರ್ಣವಾಗಿ 1958ನೆಯ ಮಾರ್ಚಿಯೊಳಗಾಗಿ ಜಾರಿಗೆ ತಂದರೆ ಆದರೆ ಇದು ಯಶಸ್ವಿಯಾಗುತ್ತದೆ ಇಲ್ಲದಿದ್ದರೆ ಇಲ್ಲಎಂಬ ಅಂಶವನ್ನು ನಾನು ತಮ್ಮಮೂಲಕ ಸರ್ಕಾರದವರಿಗೆ ತಿಳಿಸುತ್ತೇನೆ. ಈಗಾಗಲೇ ದೇಶದಲ್ಲಿರತಕ್ಕ ದೊಡ್ಡ ದೊಡ್ಡ ಮನುಷ್ಯರು ಪಾನನಿರೋಧ ಇಂಡಿಯಾ ದೇಶದಲ್ಲಿ ಯಶಸ್ವಿಯಾಗುತ್ತಿಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದಾರೆ. ಆದರೆ ಈ ಹಿಂದೆ ಮಾತನಾಡಿದ ಶ್ರೀ ಎಂ. ಸಿ. ನರಸಿಂಹನ್ ಅವರು ಪಾನನಿರೋಧವನ್ನು ಸಂಪೂರ್ಣವಾಗಿ ವಜಾ ಮಾಡಿಬಿಡಿ ಎಂದು ಹೇಳಿದರು. ಆದರೆ ನಾವು ಇದಕ್ಕೆ ಒಪ್ಪುವುದಿಲ್ಲ. ಇದನ್ನು ಆದಷ್ಟುಬೇಗ ಮೈಸೂರು ರಾಜ್ಯದ್ಯಾಂತವೂ ಜಾರಿಗೆ ತರಬೇಕೆನ್ನತಕ್ಕವರಲ್ಲಿ ನಾನೊಬ್ಬ. ಅಷ್ಟೇ ಅಲ್ಲದೆ ಮಾನ್ಯ ಗೃಹಸಚಿವರೂ ಸಹ ಈ ಪಾನನಿರೋಧ ಸಂಪೂರ್ಣವಾಗಿ ಯಶಸ್ವಿಯಾಗುತ್ತದೆಂಬ ವಿಚಾರದಲ್ಲಿ ನನಗಂತೂ ಅಷ್ಟು ಬಲವಾದ ನಂಬಿಕೆಯಿಲ್ಲವೆಂದೂ, ಅತಿಶೀಘ್ರದಲ್ಲೇ ಈ ಪಾಲಿಸಿ ಬದಲಾದರೂ ಆಗಬಹುದೆಂಬ ಅಂಶವನ್ನು ವ್ಯಕ್ತಪಡಿಸಿದ ಹಾಗೆ ಪತ್ರಿಕೆಯಲ್ಲಿ ಓದಿದೆನು.

ಶ್ರೀ ಎಂ. ಸಿ. ನರಸಿಂಹನ್.—ಗೃಹಸಚಿವರು ಹೀಗೆ ಹೇಳಿದರೆಂದು ಮಾನ್ಯಸದಸ್ಯರು ಹೇಳುತ್ತಿದ್ದಾರೆ. ಆ ರೀತಿ ಸಚಿವರು ಹೇಳಿದ್ದಾರೆಯೇ ?

He is making a statement that the Home Minister has stated that he had lost faith in the prohibition. Is it true ? That is what I want to know.

Sri G. VENKATAI GOWDA.—I did not say that. I stated that it was reported so in the Press.

Sri C. M. POONACHA (Minister for Home Affairs and Industries).—I might submit that I am grossly misquoted.

Sri T. MARIAPPA.—I rise to a point of order. Usually on the floor of the House newspaper reports should not be quoted.

ಶ್ರೀ ಜಿ. ವೆಂಕಟೇಗೌಡ.—ನಾವೀದಿವಸ ಜನಸಾಮಾನ್ಯರ ಆರ್ಥಿಕ-ನೈತಿಕಮಟ್ಟವನ್ನು ಹೆಚ್ಚಿಸಬೇಕೆಂದೂ ದೇಶದಲ್ಲಿ ಸಮಾಜವಾದಿ ಸಮತಾವಾದ ಸಮಾಜವನ್ನು ಜಾರಿಗೆ ತರಬೇಕೆಂದೂ ಹೇಳುತ್ತಿದ್ದೇವೆ. ಬಡವರಿಗೂ-ಶ್ರೀಮಂತರಿಗೂ ಇರುವ ಅಂತರವನ್ನು ಕಡಮೆಮಾಡಬೇಕೆಂದಿದ್ದೇವೆ. ಆದುದರಿಂದ ಈ ಬದಲಾವಣೆಗಳಾಗಬೇಕಾಗಿದ್ದರೆ ಈ ರೀತಿಯ ಪಾಲಿಸಿಗಳನ್ನು ಜರೂರಾಗಿ ಜಾರಿಗೆತರತಕ್ಕದ್ದು ಅತ್ಯಗತ್ಯ ಮತ್ತು ಆಡಳಿತಪಕ್ಷದವರ ಆದ್ಯಕರ್ತವ್ಯವೆಂದು ಹೇಳಿ ನನಗೆ ಈ ನಾಲ್ಕು ಮಾತುಗಳನ್ನಾಡಲು ಅವಕಾಶವಿತ್ತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸ್ವಾಮಿ, ಈಗ ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡ್‌ಗಳನ್ನು ಸ್ವಾಗತಿಸುತ್ತ ಸರ್ಕಾರದವರ ಅವಗಾಹನೆಗೆ ಕೆಲವು ಅಂಶಗಳನ್ನು ತರಲಿಚ್ಛಿಸುತ್ತೇನೆ.

ಈಗಾಗಲೇ ವಿರೋಧಪಕ್ಷದ ಸದಸ್ಯರು ಕೆಲವರು ಪಾನನಿರೋಧದ ವಿಚಾರದಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಆ ಪೈಕಿ ಕೆಲವು ಅಂಶಗಳಲ್ಲಿ

(ಶ್ರೀ ಜಿ. ಶಿವಪ್ಪ.)

ತಿರುಳಿಲ್ಲದೆ ಇಲ್ಲ; ತಿರುಳಿದೆ. ಆದರೆ ಈ ಸ್ಟೇಜಿನಲ್ಲಿ ಇದನ್ನು ಕೈಬಿಡುವುದಕ್ಕೆ ಬದಲಾಗಿ ಈಹಿಂದೆ ಘನ ಸರ್ಕಾರದವರು ಏನು ಒಂದು ಘನೋದ್ದೇಶದಿಂದ ಪಾನನಿರೋಧವನ್ನು ಜಾರಿಗೆ ತಂದರೋ—ಆಉದ್ದೇಶ ದಿಂದಲೇ ಈಗ ಇದನ್ನು ಕ್ರಮಕ್ರಮವಾಗಿ ಮತ್ತು ಜರೂರಾಗಿ ಮುಂದುವರಿಸಿಕೊಂಡು ಹೋಗತಕ್ಕದ್ದು ಸೂಕ್ತವೆಂದು ಹೇಳುತ್ತೇನೆ. ಮತ್ತು ಸರ್ಕಾರದವರಲ್ಲಿ ಬಿನ್ನವಿಸಿ ಕೊಳ್ಳುತ್ತೇನೆ. ದೇಶದಲ್ಲಿ ಇತ್ತೀಚೆಗೆ ಕಳ್ಳ ಭಟ್ಟಿಸಾರಾಯಿಯ ಹಾವಳಿ ವಿಪರೀತವಾಗುತ್ತಿದೆ. ಆದರೆ ಇಂಥ ಅಕೃತ್ಯಗಳನ್ನು ತಡೆಗಟ್ಟುವ ನನ್ನಂಥ ಒಬ್ಬಸದಸ್ಯನಿಗಾದರೆ ತೊಂದರೆ ಇದೆ ಎಂದು ಹೇಳ ಬಹುದು. ಆದರೆ ಸರ್ಕಾರಕ್ಕೆ ಅಂಥ ತೊಂದರೆ ಏನೂ ಇರಲಾರದು; ಕಷ್ಟವೂ ಇರಲಾರದು. ಆದರೆ ಪಾನನಿ ರೋಧವು ಯಶಸ್ವಿಯಾಗದಿರುವುದಕ್ಕೆ ಅನೇಕ ಕಾರಣಗಳಿವೆ. ದೇಶದಲ್ಲಿ ಸಾಕಷ್ಟು ಪ್ರಚಾರವಿಲ್ಲ. ಇಲಾಖೆಯವರು ತೀವ್ರಗಮನಕೊಡುತ್ತಿಲ್ಲ. ಮೊನ್ನೆ ತಾನೆ ನಮ್ಮಮಂತ್ರಿಗಳು ಚಿತ್ರದುರ್ಗಜಿಲ್ಲೆಗೆ ಬಂದಿ ದ್ದಾಗ್ಗೆ ಅವರ ಗಮನಕ್ಕೆ ಈ ಸಂಬಂಧವಾಗಿ ಅನೇಕ ವಿಚಾರಗಳನ್ನು ತಂದಿದ್ದೇವೆ. ಇದರಿಂದ ದೇಶದಲ್ಲಿ ಜನರ ನೀತಿ ಕೆಡಲು ಒಂದು ಕಾರಣವಾಗಿದೆ. ದೇಶ ದಲ್ಲಿ ಅಕೃತ್ಯಗಳು ಜಾಸ್ತಿಯಾಗುತ್ತಿವೆ. ಆದ್ದರಿಂದ ಸರ್ಕಾರದವರು ಈ ಬಾಬನ್ನು ಆದಷ್ಟು ಬಿಗಿಯಾಗಿ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಸರ್ಕಾರ ಸೂಕ್ತಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕಾಗಿದೆ. ಇರತಕ್ಕ ಕಾನೂನುಗಳನ್ನು ಅತಿ ಬಿಗಿಯಾಗಿ ಕೆಲಸ ನಡೆಸಲು ಸಾಧ್ಯವಾಗುವಂತೆ ತಿದ್ದುಪಡಿಮಾಡಿಕೊಳ್ಳಬೇಕಾದ್ದೂ ಸಹ ಅತ್ಯಗತ್ಯ.

ಇದರ ಬಗ್ಗೆ ನಾನು ಮತ್ತೊಂದು ವಿಚಾರ ತಿಳಿಸ ಬೇಕಾಗಿದೆ. ಸ್ಪಿರಿಟ್—ಲಿಕ್ಕರ್‌ಗಳ ಮಾರಾಟಕ್ಕಾಗಿ ವಿಶೇಷವಾಗಿ ಲೈಸೆನ್ಸುಗಳನ್ನು ಕೊಡಲಾಗುತ್ತಿದೆ. ಅದನ್ನೆಲ್ಲಾ ಕೂಡಲೇ ನಿಲ್ಲಿಸಬೇಕೆಂದು ಹೇಳುತ್ತೇನೆ. ಮಾನ್ಯ ಗೃಹ ಸಚಿವರು ಮೊನ್ನೆ ನಮ್ಮಜಿಲ್ಲೆಗೆ ಬಂದಿ ದ್ದಾಗ್ಗೆ ಅವರಿಗೆ ಈ ಸ್ಪಿರಿಟ್ ಮಾರಾಟ ಮಾಡುವ ವಿಚಾರ ತೋರಿಸಬೇಕೆಂದಿದ್ದೆವು. ಆದರೆ ಆ ವೇಳೆಗೆ ಆ ಸ್ಪಿರಿಟ್ ಅಂಗಡಿಯುವನು ಅಂಗಡಿ ಮುಚ್ಚಿದ್ದನು; ಸಾಧ್ಯವಾಗಲಿಲ್ಲ. ಅದರಲ್ಲಿ ಕಂಡ ಹಾಗೆ ಶೇಕಡ 60 ರಷ್ಟು 70ರಷ್ಟು ಆಲ್ಕೋಹಾಲಿನ ಪ್ರಮಾಣವಿರುವುದಾಗಿ ಲೇಬಲ್‌ಹಾಕಿ ಮಾರಾಟಮಾಡುತ್ತಿದ್ದಾರೆ. ಇದನ್ನು ಅಲ್ಲಿಯ ಜನರು "ಟಿಂಚರ್ ಬಚ್ಚ" ಎಂದು ಕರೆ ಯುತ್ತಾರೆ.

ಈ ಬಗ್ಗೆ ತೀವ್ರಕಾರ್ಯಕ್ರಮ ತೆಗೆದುಕೊಳ್ಳ ಬೇಕೆಂದು ನಾನು ಎಷ್ಟೋಆವರ್ತಿ ಹೇಳಿದ್ದೇನೆ. ಎಷ್ಟು ಹೇಳಿದರೂ ತೀರದು. ಕೇಂದ್ರ ಸರ್ಕಾರದವರಿಗೆ ಇದು ನಮ್ಮಲ್ಲಿ ಜಯಪ್ರದವಾಗಿಲ್ಲ ಎಂದು ಬರೆದು ಒಂದು ತೀರ್ಮಾನಕ್ಕೆ ಬರೋಣ. ಇದೇ ರೀತಿ ಮುಂದುವರಿಯು ವುದರಲ್ಲಿ ಅರ್ಥವಿಲ್ಲ ಎಂದು ಸರ್ಕಾರದವರನ್ನು ಒತ್ತಾ ಯಪಡಿಸುತ್ತೇವೆ. ಈರೀತಿ ಅನೇಕ ವರ್ಷಗಳಿಂದ ಕೇಳಿಕೊಂಡು ಬಂದಿದ್ದೇವೆ. ಅವರು ಹೇಳುವ ಕಾರ ಣಗಳೆಲ್ಲಾ ನಮಗೆ ಗೊತ್ತಿದೆ. ಇಷ್ಟುಮಾತ್ರ ತಾವು ಖಚಿತ ಮಾಡಿಕೊಳ್ಳಿ. ನಿಜವಾಗಿಯೂ ಈ ತತ್ತ್ವ ಏನಿದೆ, ಇದರಿಂದ ದೇಶಕ್ಕೆ ಅನುಕೂಲವಾಗುತ್ತಿದೆಯೇ, ಜನರ ಆರೋಗ್ಯ ಉತ್ತಮವಾಗುತ್ತಿದೆಯೇ ಎಂಬುದನ್ನು ವಿಚಾರಮಾಡಿ. ಕೇರಳ ಸರ್ಕಾರದವರೂ ಕೂಡ ಇದನ್ನು ಪೂರ್ಣವಾಗಿ ಇವತ್ತು ಸ್ಕ್ರ್ಯಾಪ್ ಮಾಡಿಲ್ಲ. ಏನುಮಾಡ ಬೇಕೆಂಬುದನ್ನು ವಿಚಾರಮಾಡುತ್ತಾ ಇದ್ದಾರೆ. ಮುಂದು ವರಿಸಿಕೊಂಡು ಹೋಗಬೇಕೆಂದು ಹೇಳುತ್ತಾ ಇದ್ದಾರೆ. ತಾವೂ ಸಹ ಇದನ್ನು ಮುಂದುವರಿಸುವಾಗ ಎಷ್ಟು ಮಟ್ಟಿಗೆ ಉತ್ತಮವಾಗಿ ಮುಂದುವರಿಯಬೇಕೆಂಬು ದದ್ದು ತೀವ್ರವಾಗಿ ಯೋಚನೆ ಮಾಡಬೇಕೆಂದು ಮಾನ್ಯ ಹೋಂ ಮಿನಿಸ್ಟರವರಿಗೂ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೂ ಹೇಳುತ್ತೇನೆ.

ಆಮೇಲೆ ರೋಡ್‌ಟ್ರ್ಯಾನ್ಸ್‌ಪೋರ್ಟ್ ವಿಚಾರದಲ್ಲಿ ಒಂದೆರಡು ಮಾತು ಹೇಳಬೇಕಾಗಿದೆ. ಈ ರೋಡ್ ಟ್ರ್ಯಾನ್ಸ್‌ಪೋರ್ಟ್ ಮೈಸೂರು ಸಂಸ್ಥಾನದಲ್ಲಿ ಪ್ರಥ ಮತಃ ಸ್ಥಾಪನೆಯಾದದ್ದು ಶ್ರೀಮಾನ್ ಮರಿಯಪ್ಪ ಅವರ ಕಾಲದಲ್ಲಿ. ಇತ್ತೀಚೆಗೆ ನಮ್ಮ ಹಳೆಯ ಮೈಸೂರಿ ನಲ್ಲಿ ನಾಲ್ಕೈದು ವರ್ಷ ಬಹಳ ಚೆನ್ನಾಗಿ ಕೆಲಸ ನಡೆಯಿತು ಎಂದು ಹೇಳುತ್ತೇನೆ. ಕೊನೆಯವರ್ಷ ಎಂದರೆ ನಮ್ಮ ಸಂಸ್ಥಾನ ದೊಡ್ಡದಾಗುವುದಕ್ಕೆ ಮುಂಚೆ ಖರ್ಚೆಲ್ಲಾ ಕಳೆದು ಶೇಕಡಾ 36ರಷ್ಟು ಆದಾಯ ಬಂತು. ಇವತ್ತು ಆ ಮಟ್ಟದಲ್ಲಿ ಆದಾಯ ಬರುತ್ತಾ ಇಲ್ಲ. ಆ ಮಟ್ಟದ ಆದಾಯ ಬರತಕ್ಕ ರೀತಿಯಲ್ಲಿ ಕೆಲಸಮಾಡ ಬೇಕೆಂದು ನಾನು ಹೇಳು ತ್ತೇನೆ. ಅದಕ್ಕೆ ಏನು ಕುಂದು ಕೊರತೆ ಇದೆ ಏನು ಮಾಡಬೇಕೆಂಬುದನ್ನು ಸರ್ಕಾರದ ವರು ಯೋಚನೆಮಾಡಬೇಕಾಗಿದೆ. ಅಷ್ಟೇ ಅಲ್ಲದೆ ಖಾಸಗೀ ಬಸ್ಸುಮಾಲೀಕರು ಎಷ್ಟೋಹಣ ಸಂಪಾದನೆ ಮಾಡುತ್ತಿರುವಾಗ, ಸರ್ಕಾರದವರು ಎಲ್ಲಾ ಅನು ಕೂಲ,ಸಿಬ್ಬಂದಿ ಖರ್ಚು ಕಡಮೆ ಇರುವಾಗ ಸರ್ಕಾರದ ವರಿಗೆ ಹೆಚ್ಚಿನ ಆದಾಯ ಬರಬೇಕು ಎಂದು ಕೇಳಿಕೊ ಳ್ಳುತ್ತೇನೆ.

Sri M. RAJASEKHARA MURTHY (T.-Narsipur).—On a point of order, Sir. ಮೋಟಾರ್ ವೆಹಿಕಲ್ಸ್ ವಿಚಾರ ಮಾತ ನಾಡಬೇಕೇ ಹೊರತು ರೋಡ್ ಟ್ರ್ಯಾನ್ಸ್‌ಪೋರ್ಟ್ ವಿಚಾರ ಮಾತನಾಡುವುದು ಸರಿಯಲ್ಲ.

ಶ್ರೀ ಜಿ. ಶಿವಪ್ಪ.—ನಾನು ಹೇಳುವುದು ಇಷ್ಟೆ. ರೋಡ್‌ಟ್ರ್ಯಾನ್ಸ್ ಪೋರ್ಟ್ ಆಡಳಿತ ವಿಲೀನ ವಾಗಿರತಕ್ಕ ಪ್ರದೇಶದಲ್ಲಿ ಯಾವ ರೀತಿ ಇದೆ, ಅದೇರೀತಿ ನಡೆಸಬೇಕು. ಅನೇಕ ಮಟ್ಟವಾದ ರಸ್ತೆಗಳು ಇವೆ. ಅವುಗಳನ್ನು ಸಹ ತೆಗೆದುಕೊಂಡು ಸರಕಾರಿ ಬಸ್ಸುಗ ಳನ್ನು ಹಾಕಿದರೆ ಹೆಚ್ಚಿನ ಆದಾಯ ಬರುತ್ತದೆ. ಚಿತ್ರ ದುರ್ಗದಿಂದ ಶಿವಮೊಗ್ಗ, ಚಿತ್ರದುರ್ಗದಿಂದ ಬಳ್ಳಾರಿ ಈ ರೀತಿ ಅನೇಕ ರೂಟ್‌ಗಳನ್ನು ತೆಗೆದುಕೊಂಡು ಬಸ್ಸುಓಡಿಸಬೇಕು. ಹೈದರಾಬಾದು ಕರ್ನಾಟಕ ಬೊಂಬಾಯಿ ಕರ್ನಾಟಕದಲ್ಲಿ ಇದರ ವ್ಯಾಪ್ತಿ ಹೆಚ್ಚಿ ಯಾವ ರೀತಿ ಹೆಚ್ಚಿನ ಸೌಕರ್ಯ ಇದೆಯೋ ಮತ್ತು ಖಾಸಗೀ ಜನರು ಯಾವ ರೀತಿ ಹೆಚ್ಚು ಸೌಕರ್ಯ ಕೊಡುವುದಕ್ಕೆ ಪ್ರಯತ್ನಪಡುತ್ತಾರೋ ಅದೇ ರೀತಿ ಸರ್ಕಾರಿ ಬಸ್ಸುಗಳಲ್ಲೂ ಹೆಚ್ಚು ಸೌಕರ್ಯ ದೊರೆಯು ವಂತಾಗಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಸ್ಟ್ಯಾಂಪ್ ವಿಚಾರದಲ್ಲಿ ಎರಡು ಮಾತು ಹೇಳಬೇಕಾಗಿದೆ. ಕೋ-ಆಪರೇಟಿವ್ ಸೊಸೈ ಟಿಗಳಿಗೆ ಸ್ಟ್ಯಾಂಪ್ ಎಕ್ಸಂಪ್ಷನ್ ಕೊಡಬೇಕೆಂದು ಕೇಳುತ್ತಾಇದ್ದೇವೆ. ಮೊನ್ನೆ ಒಂದು ಸರ್ಕಾರಿ ಆಜ್ಞೆ ಮಾಡಿದಿರಿ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕು ಗಳಿಗೆ ಎಕ್ಸಂಪ್ಷನ್ ಕೊಟ್ಟಿರಿ. ಹೋದ ಅಸೆಂಬ್ಲಿ ಯಲ್ಲೂ ಸಹ ತಮ್ಮ ಗಮನಕ್ಕೆ ತಂದೆ. ಅನೇಕ ಸಂದರ್ಭದಲ್ಲಿ ಸರ್ಕಾರಿ ಆಜ್ಞೆ ಎಂದು issue ಆಗ ಬೇಕೋ ಅಂದು ಆಗದೆ ಎರಡು-ಮೂರು ತಿಂಗಳ ಮೇಲೆ ಆಗುವುದರಿಂದ ಅದರಿಂದ ಸಿಕ್ಕತಕ್ಕ ಅನುಕೂಲ ಜನತೆಗೆ ಇಲ್ಲದಂತಾಗುತ್ತದೆ. ನಾನು ಅರಿಕೆ ಮಾಡುವುದೇನೆಂದರೆ ಸರ್ಕಾರದ ಆಡಳಿತದಲ್ಲಿ ದಕ್ಷತೆ

ತೋರಿಸುವುದಕ್ಕಿಂತಲೂ ಅಲಕ್ಷ್ಯತೆ ಹೆಚ್ಚಾಗಿ ಕಂಡು ಬರುತ್ತಿದೆ ಎನ್ನುವ ರೀತಿಯಲ್ಲಿ ಭಾಸವಾಗುತ್ತಿದೆ. ಇಂಥ ಸರ್ಕಾರಿ ಅರ್ಜಿಗಳು ಅನೇಕವು ಇವೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ಸ್ಟ್ಯಾಂಪ್ ಎಕ್ಸಂಪ್ಷನ್ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಲಿಂಗೇಗೌಡ (ಕನಕಪುರ).—ನಮ್ಮ ಮುಂದೆ ಇರುವ ಡಿಮ್ಯಾಂಡುಗಳ ಪೈಕಿ ಕೆಲವನ್ನು ಅನೇಕ ಸದಸ್ಯರು ಕಟುವಾಗಿ ಟೀಕೆ ಮಾಡಿದ್ದಾರೆ; ಮತ್ತೆ ಕೆಲವರು ಸರ್ಕಾರದವರಿಗೆ ಕೆಲವು ಸೂಚನೆ ಗಳನ್ನು ಕೊಟ್ಟಿದ್ದಾರೆ. ನನಗಾದರೂ ಅನಿಸುತ್ತದೆ, ಈ ಎಕ್ಸೈಜ್ ಬಾಬಿನಲ್ಲಿ ಪಾನನಿರೋಧದ ವಿಷಯ ವಾಗಿ ಮಾತನಾಡುವಾಗ ಎಲ್ಲರೂ ಅವರ ಮನಸ್ಸನ್ನು ಶೋಧನೆ ಮಾಡಿಕೊಂಡು ಮಾತನಾಡಿದರೆ ಉತ್ತಮ ಎಂದು. ಪಾನನಿರೋಧವನ್ನು ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ಹೇಳಿ ಒಳ್ಳೆಯ ಉದ್ದೇಶ ದಿಂದ ಕೆಲವು ಕಡೆ ಜಾರಿಗೆ ತಂದರು. ಜಾರಿಗೆ ತರು ವಾಗಲೇ ಸಂಪೂರ್ಣವಾಗಿ ಸಂಸ್ಥಾನದಲ್ಲೆಲ್ಲಾ ಜಾರಿಗೆ ತಂದಿದ್ದರೆ ಅದು ಯಾವ ರೀತಿ ಪರಿಣಮಿ ಸುತ್ತಾ ಇತ್ತೋ ಅರ್ಥವಾಗುವುದಿಲ್ಲ. ಕೆಲವು ಭಾಗ ಗಳಲ್ಲಿ ತಂದು ಕೆಲವು ಭಾಗಗಳಲ್ಲಿ ಉಳಿಸಿಕೊಂಡಿದ್ದ ರಿಂದ, ಪಾನನಿರೋಧ ಬಂದ ಕಡೆ ಕಳ್ಳಭಟ್ಟಿ ಸಾರಾಯಿ ಗೃಹಕೈಗಾರಿಕೆ ಆಯಿತು. ಅವರಿಗೆ ಒಂದು ಔನ್ಸ್‌ಗೆ ಎರಡೂವರೆ ಆಣೆ ಬೀಳುತ್ತದೆ, ಏಳೂವರೆ ಆಣೆಗೆ ಮಾರುತ್ತಾರೆ. ಅವರಿಗೆ ಉತ್ಪನ್ನ ಒಂದು ಕಡೆ ಆಯಿತು. ಅವರ ಸ್ವಂತಕ್ಕೆ ಏನಾದರೂ ಆಗಲಿ, ಜನ ತೆಯ ಆರೋಗ್ಯ ಬಹುಮಟ್ಟಿಗೆ ಕೆಡುತ್ತದೆ. ಒಟ್ಟಿನಲ್ಲಿ ನೋಡುವುದಾದರೆ ಪಾನನಿರೋಧವನ್ನು ಜಾರಿಗೆ ತಂದು ಜನಗಳಿಗೆ ಉಪಕಾರ ಮಾಡುವುದಕ್ಕೆ ಬದಲಾಗಿ ಅಪಕಾರ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಪಾನ ನಿರೋಧವು ಜಾರಿಗೆ ಬಂದ ಮೇಲೆ ದೊಡ್ಡದೊಡ್ಡವರು ಹೊಸದಾಗಿ ಕುಡಿಯುವುದನ್ನು ಕಲಿಯುತ್ತಿದ್ದಾರೆ. ಪಾನನಿರೋಧವನ್ನು ದೇಶದಲ್ಲಿ ಜಾರಿಗೆ ತರುವುದಕ್ಕೆ ಮುಂಚೆ ದೊಡ್ಡ ನಗರಗಳಲ್ಲಿ ಎಷ್ಟು ಬಾರ್‌ಗಳಿದ್ದುವು, ಈಗ ಎಷ್ಟಿವೆ ಎನ್ನುವುದನ್ನು ಲೆಕ್ಕ ಹಾಕಿದರೆ ಒಂದಕ್ಕೆ ಐವತ್ತರಷ್ಟು ಹೆಚ್ಚಾಗಿವೆ ಎಂದು ನನಗೆ ಭಾಸವಾಗು ತ್ತದೆ. ಇದಕ್ಕೆ ಕಾರಣ ನಾವು ಹೆಚ್ಚು civilised ಜನಗಳು, ನಾಗರಿಕರು ಎಂದು ಹೇಳಿಕೊಳ್ಳತಕ್ಕ ಜನ ಗಳು ಹೊಸದಾಗಿ ಕುಡಿಯುವುದಕ್ಕೆ ಪ್ರಾರಂಭ ಮಾಡಿ ರುವುದು. ಇದರಿಂದ ಇಷ್ಟು ಹೆಚ್ಚಿಗೆ ಬಾರ್‌ಗಳಾಗಿವೆ ಎಂದು ನಾನು ಖಚಿತವಾಗಿ ಅಭಿಪ್ರಾಯಪಡುತ್ತೇನೆ. ಇದಕ್ಕೆ ಯಾರು ಯಾರು ಸೇರಿದ್ದಾರೆನ್ನುವುದನ್ನು ಈ ಸಭೆಯಲ್ಲಿ ಹೇಳತಕ್ಕದ್ದು ಲಾಯಕ್ಕಲ್ಲ. ಒಟ್ಟಿನಲ್ಲಿ ಎಲ್ಲರೂ ತಮ್ಮ ಮನಸ್ಸನ್ನು ಶೋಧನೆ ಮಾಡಿಕೊಂಡು ಪಾನ ನಿರೋಧವನ್ನು ಮುಂದುವರಿಸಬೇಕೇ ಅಥವಾ ನಿಲ್ಲಿಸ ಬೇಕೇ ಎಂದು ಯೋಚನೆ ಮಾಡಬೇಕು. ನನ್ನ ಅಭಿ ಪ್ರಾಯದಲ್ಲಿ ಪಾನನಿರೋಧದಿಂದ ಖಂಡಿತ ಪ್ರಯೋ ಜನವಾಗುವುದಿಲ್ಲವಾದ್ದರಿಂದ ಅದನ್ನು ನಿಲ್ಲಿಸಿಬಿಡ ಬೇಕು ಎಂದು ಹೇಳುತ್ತೇನೆ. ನೀವು ಏನೇ ಮಾಡಿ, ಪಾನನಿರೋಧವನ್ನು ಎಷ್ಟು ದಿವಸವಾದರೂ ಜಾರಿ ಯಲ್ಲಿಡಿ, ಕುಡಿತವನ್ನು ಮಾತ್ರ ನಿಲ್ಲಿಸುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ತಮಗೆಲ್ಲರಿಗೂ ಇದು ಗೊತ್ತಿದೆ. ಇಂಡಿಯಾ ಸರ್ಕಾರದವರಿಗೂ ಗೊತ್ತಿದೆ. ಸಂಸ್ಥೆಯ ಹೆಸರಿನಲ್ಲಿ ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿರುವುದರಿಂದ ಈಗ ಹಿಂದಕ್ಕೆ ಹೆಜ್ಜೆಯನ್ನು ಹೇಗೆ ಇಡೋಣವೆಂದು ಹಿಂದುಮುಂದು ನೋಡುತ್ತಿದ್ದೀರಿ. ಆ ರೀತಿ ನೋಡಬೇಡಿ. ಒಳ್ಳೆಯ ಉದ್ದೇಶದಿಂದ ಒಂದು ಕಾರ್ಯಸಾಧನೆಯನ್ನು ಮಾಡಬೇಕೆಂದು ಹೋಗುತ್ತೇವೆ. ಆದರೆ ಅದರಲ್ಲಿ ಯಶಸ್ವಿಗಳಾಗುವು ದಿಲ್ಲ. ಆಗ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧರಾಗಿ ರಬೇಕು. ಪಾನನಿರೋಧವನ್ನು ಖಂಡಿತ ಜಾರಿಗೆ ತರುವುದಕ್ಕಾಗುವುದಿಲ್ಲ. ಆದುದರಿಂದ ನಾವು ಪಾನ ನಿರೋಧವನ್ನು ಜಾರಿಗೆ ತಂದಿದ್ದೇವೆ ಎಂದು ಹೇಳಿ ಕೊಂಡು ಕಳ್ಳಭಟ್ಟಿ ಸಾರಾಯಿಯನ್ನು ಜನಗಳಿಗೆ ಕುಡಿ ಸುವುದಕ್ಕೆ ಬದಲಾಗಿ, ಸರ್ಕಾರಕ್ಕೂ ಸಹ ಉತ್ಪತ್ತಿ ಯನ್ನು ತರತಕ್ಕಂಥ ಹಿಂದಿನಿಂದಲೂ ಇದ್ದಂತೆ ಹೆಂಡ ವನ್ನು ಕುಡಿಯುವುದಕ್ಕೆ ಅವಕಾಶ ಕೊಡಬೇಕು. ಹೆಂಡ ಕುಡಿಯುವುದು ಜನತೆಯ ಆರೋಗ್ಯಕ್ಕೆ ಒಳ್ಳೆಯ ದೆಂದು ಹೆಂಡವನ್ನು ಕುಡಿಯುತಕ್ಕವರು ಹೇಳುತ್ತಾರೆ. 70 ವರ್ಷ, 80 ವರ್ಷ, 100 ವರ್ಷ ಬದುಕಿರತಕ್ಕ ವರು ಹೆಂಡವನ್ನು ಮಾತ್ರ ಕುಡಿಯುತ್ತಾರೆ, ಸಾರಾಯಿ ಕುಡಿಯುವುದಿಲ್ಲ. ಸರ್ಕಾರಕ್ಕೆ ಹಣ ಬೇಕು. ಹಣ ಬೇಕಾದರೆ ಉತ್ಪತ್ತಿ ಮಾರ್ಗವನ್ನು ಹುಡುಕಬೇಕು. ಇದಕ್ಕೆ ತೆರಿಗೆಯನ್ನು ಹಾಕುತ್ತಿದ್ದಾರೆ. ತೆರಿಗೆಯನ್ನು ಹಾಕಿದರೆ ಅದನ್ನು ಕೊಡೋಣ, ಕುಡಿತದಿಂದ ಬರುವ ಹಣ ಕೆಟ್ಟ ಹಣ ಎಂದು ಹೇಳುತ್ತಾರೆ. ಇದನ್ನು ಸರ್ಕಾರದವರು ತೆಗೆದುಕೊಳ್ಳದೆ ಇರಬಹುದು. ಆದರೆ ಇತರ ಜನಗಳು ತಗೆದುಕೊಳ್ಳದೆ ಇಲ್ಲ. ಬೆಂಗಳೂರಿ ನಲ್ಲಿ ಎಷ್ಟು ಜನ ಕಂಟ್ರಾಕ್ಟರುಗಳಿದ್ದಾರೆ, ಎಷ್ಟು ಜನ ಬೆಂಗಳೂರಿನಲ್ಲಿ ಕುಡಿಯುವುದಕ್ಕೆ ಹೊರಗಡೆಯಿಂದ ಬರುತ್ತಾರೆ ಎಂಬುದನ್ನು ತಿಳಿಯಬೇಕು. ಯಾರಿಗಾ ದರೂ interest ಇದ್ದರೆ ಬೆಂಗಳೂರಿನ ಹೋಟಲುಗ ಳಿಗೆ ಹೋಗಿ ನೋಡಿದರೆ ಎಷ್ಟು ಜನ ಹೊರಗಡೆಯಿಂದ ಬಂದು, ಇಲ್ಲಿ camp ಮಾಡಿ ಕುಡಿಯುತ್ತಿದ್ದಾರೆನ್ನು ವುದು ಅರ್ಥವಾಗುತ್ತದೆ. ಆದುದರಿಂದ ಬೆಂಗಳೂರಿ ನಲ್ಲಿ ಪಾನಮಾಡುವುದನ್ನು ಇಟ್ಟುಕೊಂಡು, ಅದರ ಸುತ್ತಲೂ ಅದನ್ನು ತೆಗೆದುಹಾಕಿದರೆ, ಅದರಿಂದ ಬೆಂಗ ಳೂರಿನ ಕಂಟ್ರಾಕ್ಟರಿಗೆ ಅನುಕೂಲವಾಗುತ್ತದೆ. ಈ ಭಾರಿಭಾರಿ ಕಂಟ್ರಾಕ್ಟರುಗಳಿಗೆ ಸರ್ಕಾರವನ್ನು ತಲೆಕೆ ಳಗು ಮಾಡುವ ಶಕ್ತಿ ಇದೆ. ಈ ವರ್ಷ ಎಕ್ಸೈಸ್ ಬಾಬಿ ನಲ್ಲಿ 40 ಲಕ್ಷ ರೂಪಾಯಿಗಳಷ್ಟು ನಮಗೆ ನಷ್ಟವಾಗಿರು ವುದು. ಈ ದೊಡ್ಡ ಕಂಟ್ರಾಕ್ಟರುಗಳ ಪ್ರಭಾವದಿಂದ ಎಂದು ನಾನು ಹೇಳುತ್ತೇನೆ. ಇವರಿಂದ ಸಣ್ಣಸಣ್ಣ ಕಂ ಟ್ರಾಕ್ಟರುಗಳು ಯಾರೂ ಉಳಿಯುವ ಹಾಗಿಲ್ಲ. ಇವರು ಸಂಸ್ಥಾನದಲ್ಲಿ ಎಲ್ಲಿ ಬೇಕಾದರೂ ಹೋಗಿ ಬಿಡ್ ಮಾಡು ತ್ತಾರೆ. ಹೀಗೆ ಮಾಡುವಾಗ ಅವರವರ ಹೆಸರಿನಲ್ಲಿಯೇ ಅಂಗಡಿಗಳನ್ನಿಟ್ಟುಕೊಂಡರೆ ವರಮಾನ ತೆರಿಗೆಗೆ ಸಿಕ್ಕಿ ಕೊಳ್ಳುತ್ತೇವೆಂದು ಬೇರೆಯವರ ಹೆಸರಿಗೆ ಮಾಡು ತ್ತಾರೆ. ಹರಾಜಿನಲ್ಲಿ ಕೂಗುವವರು ಅವರು, ಕಡೆ ಯಲ್ಲಿ ನಿಲ್ಲಿಸುವುದು ಬೇರೆಯವರ ಹೆಸರಿಗೆ. ಇದರಿಂದ ವರಮಾನ ತೆರಿಗೆಗೆ ಸಿಕ್ಕುವುದಿಲ್ಲ. ಇವರು ಬಿಡ್ ಮಾಡುವವರಿಗೆ ಒಳಗೊಳಗೇ ದುಡ್ಡು ಕೊಟ್ಟು ಅವರು ಬಿಡ್ ಮಾಡದಂತೆ ನೋಡಿಕೊಂಡು ಸರ್ಕಾರಕ್ಕೆ ನಷ್ಟ ಮಾಡುತ್ತಿದ್ದಾರೆ. ಇಂಥವರ ಪ್ರಭಾವ ಜಾಸ್ತಿ ಯಾಗುತ್ತಿದೆ. ಆದಕಾರಣ ಸರ್ಕಾರದವರು ಇದಕ್ಕೆಲ್ಲ watchful ಆಗಿ ಇರಬೇಕು. ಜನರ ಮೇಲೆ ಹೆಚ್ಚಿಗೆ ತೆರಿಗೆಗಳನ್ನು ನೀವು ಹಾಕುತ್ತ ಇರುತ್ತೀರಿ, ಅವರು ಕೊಡಬೇಕಾಗಿ ಬರುತ್ತದೆ. ಆದಕಾರಣ ಈ ಕಂಟ್ರಾ ಕ್ಟರುಗಳ ವಿಷಯದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳ ಬೇಕು.

ಅಬ್ಕಾರಿ ಬಾಬಿನಲ್ಲಿ ವಸೂಲುಮಾಡದೆ ಇರುವುದು ಬೇಕಾದಷ್ಟಿದೆ. ಇದನ್ನು ವಸೂಲ್ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಇರುವುದು ಸರಿ

(ಶ್ರೀ ಎಂ. ಲಿಂಗೇಗೌಡ)

ಯಲ್ಲ. ದಾಕ್ಷಿಣ್ಯ ಸ್ವಭಾವದಿಂದ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದೆಇದ್ದೀರಿ ಎಂದು ಖಂಡಿತವಾಗಿ ಹೇಳುತ್ತೇನೆ. ಅಧಿಕಾರಿಗಳೇನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟು, ಬಹಳ strict ಆಗಿ ಕೆಲಸ ಮಾಡುವುದಕ್ಕೆ ಹೋದರೆ, ಸರ್ಕಾರಕ್ಕೆ ಬಾಕಿ ಇರುವವರು ಯಾರೋ ಒಬ್ಬರನ್ನು ಜೊತೆಯಲ್ಲಿ ಕರೆದುಕೊಂಡುಬಂದು ಮನವಿಯನ್ನು ಸಲ್ಲಿಸಿದರೆ ಅದರ ಮೇಲೆ stay order ಆಗುತ್ತದೆ. ದಾಕ್ಷಿಣ್ಯವನ್ನು ಳಿಸಿಕೊಳ್ಳುವುದು ಮಂತ್ರಿಗಳಿಗೆ ಬಹಳ ಸುಲಭ. ಆದರೆ ಅದರಿಂದ ಸಂಸ್ಥಾನಕ್ಕೆ ಬಹಳ ನಷ್ಟವಾಗುತ್ತದೆ. ಸಂಸ್ಥಾನದ ಆಡಳಿತ ನಡೆಸತಕ್ಕವರು ಖಂಡಿತವಾಗಿ ಈ ದಾಕ್ಷಿಣ್ಯ ಸ್ವಭಾವವನ್ನು ಬಿಟ್ಟುಬಿಡಬೇಕು. ಹಾಗಿಲ್ಲದೆ ಇದ್ದರೆ ದೇಶ ಉದ್ಧಾರವಾಗುವುದಿಲ್ಲ. ಇದರಿಂದಲೇ ಇಷ್ಟು ಹಣ ಬಾಕಿ ಇರಬಹುದು. ಅಷ್ಟು ಹಣವನ್ನು ಆದಷ್ಟು ಜಾಗ್ರತೆ ವಸೂಲ್ಮಾಡಬೇಕು. ರೆಮಿಷರ್ಷ ಕೊಡುವುದಕ್ಕೆ, ಅಥವ ವಜಾ ಮಾಡುವುದಕ್ಕೆ ಯಾವ ರಿಕಾರ್ಡೂ ಆಗದಿರಲಿ ಎಂದು ನಿಮಗೆ ನಾನು ಎಚ್ಚರಿಕೆ ಕೊಡುತ್ತೇನೆ. ಏಕೆಂದರೆ, ಅನೇಕ ಸಂದರ್ಭಗಳಲ್ಲಿ ಯಾರ ಯಾರ ಹೆಸರಿಗೋ ನಿಲ್ಲಿಸಿರುತ್ತಾರೆ. ಅವರು ಪಾಪರಾಗಿರುತ್ತಾರೆ. ಕ್ರಮ ತೆಗೆದುಕೊಳ್ಳುವುದಕ್ಕೆ ಅವರಲ್ಲಿ ಏನೂ ಇಲ್ಲ, ಅವರು ನಿರ್ಗತಿಕರಾಗಿರುತ್ತಾರೆ ಎಂದು ರಿಕಾರ್ಡುಗಳು ಬರಬಹುದು. ಅದಕ್ಕೆ ಮೂಲಕಾರಣ ಯಾರು, ಯಾರ ಮುಖೇನ ಇಷ್ಟೆಲ್ಲ ಆಗಿದೆ ಎಂದು ಸರಿಯಾಗಿ ಪರಿಶೋಧನೆ ಮಾಡಿ ಕಾರ್ಯಕ್ರಮಗಳನ್ನು ತೆಗೆದುಕೊಂಡು ಉಳಿದಿರುವ ಬಾಕಿಯನ್ನು ವಸೂಲ್ಮಾಡಿ.

ಪಾನನಿರೋಧವನ್ನು ಜಾರಿಗೆ ತರಬೇಕೇ ಬಿಡಬೇಕೇ ಎನ್ನುವುದು ತಮಗೆಲ್ಲ ಗೊತ್ತಿದೆ. ನಾನಾಗಲೇ ಹೇಳಿದಂತೆ ಕುಡಿತವನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆ ಕಾರಣ ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಲಿಕ್ಕೆ ಸಾಧ್ಯವಾಗಲಿಲ್ಲವೆಂದು ಧೈರ್ಯವಾಗಿ ಹೇಳಿಬಿಡಿ. ದೇಶದಲ್ಲಿ ಎಲ್ಲೆಲ್ಲಿ ಪಾನನಿರೋಧವಿತ್ತೋ ಅಲ್ಲೆಲ್ಲ ಅದನ್ನು ವಾಪಸು ತೆಗೆದುಕೊಂಡು ಪುನಃ ಮಾಮೂಲಿನಂತೆ ಪಾನಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆಂದು ಧೈರ್ಯದಿಂದ ಮುಂದೆ ಬಂದು ಹೇಳಿ ಕೆಲಸ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆಮಾಡಿ ನೀವು ನಿಜವಾದ ನೀತಿಯನ್ನು ಎಲ್ಲಿಯುವರೆಗೆ ಹೇಳುವುದಿಲ್ಲವೋ ಅಲ್ಲಿಯುವರೆಗೆ ನೀವು ಇಟ್ಟಿರತಕ್ಕ ಡಿಮ್ಯಾಂಡನ್ನು ನಾವು ವಿರೋಧಿಸಬೇಕಾಗಿ ಬರುತ್ತದೆ.

3 P.M.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ನಮ್ಮ ಮುಂದೆ ಇಟ್ಟಿರುವಂಥ ಡಿಮ್ಯಾಂಡ್ ನಂಬರ್ಸ್ 4, 8, 9, 12 ಮತ್ತು 13ನ್ನೂ ಸ್ವಾಗತಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿರುವಂತೆ ಪಾನನಿರೋಧವು ಕೆಲವು ಕಡೆ ಜಾರಿಗೆ ಬಂದಿದೆ, ಕೆಲವು ಕಡೆ ಇನ್ನೂ ಉಳಿದಿದೆ. ಕೆಲವು ಕಡೆ ಜಾರಿಗೆ ಇದ್ದು ಕೆಲಸ ಯಶಸ್ವಿಯಾಗಿಲ್ಲವೆಂದು ಎಷ್ಟೋ ಜನ ಸದಸ್ಯರ ಗಮನಕ್ಕೆ ಬಂದಿದೆ. ಆ ರೀತಿ ಯಶಸ್ವಿಯಾಗದೆ ಇರುವುದಕ್ಕೆ ಕೆಲವು ಕಾರಣಗಳಿವೆ. ಮೊದಲನೆಯದಾಗಿ ಹೇಳಬೇಕಾದರೆ ಎಕ್ಸೈಜ್ ಡಿಪಾರ್ಟ್‌ಮೆಂಟ್ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್ ಇವು ದಕ್ಷತೆಯಿಂದ ಕೆಲಸಮಾಡಲಾರದೆ ಇರುವುದು ಒಂದು ಕಾರಣ. ಎರಡನೆಯದು ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವವರಿಗೆ ಕೊಡತಕ್ಕಂಥ ಶಿಕ್ಷೆ ಬಹಳ ಕಡಮೆಯಾಗಿರುವಕಾರಣ ಅವರು ಪದೇ ಪದೇ ಆ ಕೆಲಸಕ್ಕೆ ಕೈಹಾಕುತ್ತಾರೆ. ಇದನ್ನು ತಡೆಗಟ್ಟುವುದಕ್ಕೆ ಅವರಿಗೆ ಕೊಡತಕ್ಕ ಶಿಕ್ಷೆ ಇನ್ನೂ ಸ್ಥೂಲವಾಗಿರಬೇಕು. ಅವರುಗಳು ಇನ್ನೊಂದು ಸಾರಿ ಇಂಥ ಕೆಲಸ ಮಾಡಬಾರದು ಎಂದು ಮನವರಿಕೆಯಾಗಲು ಅವರಿಗೆ ಹೆಚ್ಚು ಉಗ್ರವಾದ ಶಿಕ್ಷೆ ವಿಧಿಸಬೇಕು. ಮೂರನೆಯದೇನೆಂದರೆ ಒಂದು ಕಡೆ prohibition ಇದೆ, ಇನ್ನೊಂದು ಕಡೆ ಇಲ್ಲ. ಹೀಗಿರುವುದರಿಂದ ಜನರು ಪಾನನಿರೋಧ ಜಾರಿಯಲ್ಲಿರುವ ಕಡೆಯಿಂದ ಪಾನದ ಅಂಗಡಿಗಳಿರುವ ಪ್ರದೇಶಕ್ಕೆ ಬಂದು ಪಾನ ಮಾಡುತ್ತಾರೆ. ಇದರಿಂದಲೂ ಪಾನನಿರೋಧವು ಅಯಶಸ್ವಿಯಾಗುವುದಕ್ಕೆ ಅವಕಾಶವಿದೆ. ಕಡೆಯದಾಗಿ ಹೇಳಬೇಕೆಂದರೆ ಸಾಯಂಕಾಲವಾದ ಕೂಡಲೆ ಕೂಲಿಕಾರರಿಗೆ ಆರು ಘಂಟೆಗೆ ಕುಡಿಯುವ ಅಭ್ಯಾಸವಿರುತ್ತದೆ, ಮನುಷ್ಯನ ಈ ಅಭ್ಯಾಸವನ್ನು ತಪ್ಪಿಸಬೇಕಾದರೆ, ಆ ಸ್ಥಳಗಳಲ್ಲಿ ಕೆಲವು ಮನರಂಜನೆಯ ಕಾರ್ಯಕ್ರಮಗಳನ್ನು (recreation clubs) ಉಚಿತವಾಗಿ ಕಲ್ಪಿಸಿ, ಅವರ ಗಮನವನ್ನು ಕುಡಿಯುವುದರ ಕಡೆಯಿಂದ ತಪ್ಪಿಸಿ, ಈ ಒಳ್ಳೆಯ ಕೆಲಸದ ಕಡೆಗೆ ಸೆಳೆಯುತಕ್ಕ ಏರ್ಪಾಡುಗಳನ್ನು ಸರ್ಕಾರದವರು ಮಾಡಬೇಕು.

ಈಗಾಗಲೇ ಹೈದರಾಬಾದ್ ಕರ್ಣಾಟಕದಲ್ಲಿ Sales ಪ್ರಾರಂಭವಾಗುವುದರಲ್ಲಿದೆ. ಆ Sales ಮಾಡುವುದಕ್ಕೆ ಮುಂಚೆ ಕೆಲವು ವಿಷಯಗಳನ್ನು ತಿಳಿಸಬೇಕೆಂದಿದ್ದೇನೆ. ಈಗಾಗಲೇ ನಮ್ಮಲ್ಲಿ 20 ವರ್ಷಗಳಿಂದ ಎಕ್ಸೈಜ್ ಬಾಬ್ತು ಬಾಕಿಗಳು ಇವೆಯೆಂದು ಮಾನ್ಯ ಎಕ್ಸೈಜ್ ಸಚಿವರು ಹೇಳಿದಂತೆ ಬಹಳವಾಗಿ ಇವೆ. ಆ ಸಾಲಗಳನ್ನು ಆದಷ್ಟು ತೀವ್ರವಾಗಿ ಸರ್ಕಾರದವರು ವಸೂಲ್ಮಾಡಬೇಕು. ಈ ರೀತಿ ಬಾಕಿ ಉಳಿದಿರುವುದು ಸಣ್ಣವರ ಕಡೆಯಲ್ಲ, ದೊಡ್ಡವರ ಕಡೆಗೇ ಉಳಿದಿದೆ ಎಂದು ನನ್ನ ಅಭಿಪ್ರಾಯ. ಸರ್ಕಾರದ ಅಧಿಕಾರಿಗಳು ದಕ್ಷಕೆಯಿಂದ ಕೆಲಸಮಾಡದೆ ಇರುವುದರಿಂದ ಈ ರೀತಿ ಸಾಲ ಉಳಿದಿದೆ. ಆದಷ್ಟು ತೀವ್ರವಾಗಿ ಈ ಸಾಲಗಳನ್ನು ನೀವು ವಸೂಲ್ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಇನ್ನೊಂದು ಏನೆಂದರೆ, Sales ಕೊಡುವುದಕ್ಕೆ ಮುಂಚೆ ಸಾಲವಿದ್ದವರಿಗೆ Sales ಕೊಡಲೇಕೂಡದು ಎಂದು ನನ್ನ ಅಭಿಪ್ರಾಯ.

ಆ ಮೇಲೆ group sales ಎಂದರೆ ಒಂದು ತಾಲ್ಲೂಕು ಅಥವಾ ಒಂದು ಜಿಲ್ಲೆಯಲ್ಲಿರುವ ಅಂಗಡಿಗಳನ್ನು ಒಬ್ಬರಿಗೆ ಒಟ್ಟಿಗೆ ಕೊಡುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. 50-60 ಸಾವಿರ ರೂಪಾಯಿ ಬರತಕ್ಕ ಕಡೆ ಆರೇಳು ಸಾವಿರ ರೂಪಾಯಿ ಮಾತ್ರ ಬರುತ್ತದೆ. ಜಿಲ್ಲೆಯಲ್ಲಿನ ಅಥವಾ ತಾಲ್ಲೂಕಿನಲ್ಲಿನ ಅಂಗಡಿಗಳನ್ನೆಲ್ಲ ಒಬ್ಬರೇ ತೆಗೆದುಕೊಂಡು, ಅನಂತರ sub-sales ಮಾಡುತ್ತಾರೆ. ತಮಗೆ 50 ರೂಪಾಯಿ ಬಿದ್ದಿರುವ ಅಂಗಡಿಯನ್ನು ಮತ್ತೊಬ್ಬರಿಗೆ 500-600 ರೂಪಾಯಿಗಳಿಗೆ ಕೊಟ್ಟು ಅದರಿಂದ ಬರುವ ಲಾಭವನ್ನು ಅವರೇ ವಿನಿಯೋಗಿಸಿಕೊಳ್ಳುತ್ತಾರೆ. ಇದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ. Group systemನಿಂದ ಸರ್ಕಾರಕ್ಕೆ ಬರುವ ಆದಾಯ ಕಡಮೆಯಾಗುತ್ತದೆ ಮತ್ತು ಸಣ್ಣ ಕಂಟ್ರಾಕ್ಟುದಾರರುಗಳನ್ನು ಹಾಳುಮಾಡಿದ ಹಾಗಾಗುತ್ತದೆ. Group system ತಪ್ಪಿಸುವುದರಿಂದ ಸರ್ಕಾರಕ್ಕೆ ದೊಡ್ಡ ಲಾಭ ಬರುತ್ತದೆ ಎಂದು ನನ್ನ ಅಭಿಪ್ರಾಯ.

ನಮ್ಮಲ್ಲಿ ಮಾಮೂಲ್ ಎಂದು ಒಂದು ಪದ್ಧತಿ ಇದೆ. ಒಬ್ಬ ಸಣ್ಣ ಕಂಟ್ರಾಕ್ಟರು ನೂರು ರೂಪಾಯಿಗಳಿಗೆ

ಒಂದು ಅಂಗಡಿ ಹಿಡಿದನೆಂದರೆ ಇನ್ನೂರು ರೂಪಾಯಿಗಳಿಗೆ ಅಂಗಡಿ ತೆಗೆದುಕೊಂಡಿದ್ದೇನೆಂದು ಅವನ ಅಭಿಪ್ರಾಯ. ಅವನು ಪ್ರತಿ ತಿಂಗಳಿನಲ್ಲಿಯೂ ಮೇಲ್ಪಟ್ಟವರಿಗೆ ಮಾಮೂಲು ಕೊಟ್ಟುಕೊಂಡುಹೋಗುತ್ತ ಇರಬೇಕು. ಮೊದಲನೆಯ ತಿಂಗಳಿನಲ್ಲಿ ದುಡ್ಡು ಕಟ್ಟಲು ಬಂದಾಗ ಆ ದುಡ್ಡನ್ನು ತಮ್ಮ ಮಾಮೂಲಿಗೆ ಉಪಯೋಗಿಸಿಕೊಂಡು, ಎರಡನೆಯ ತಿಂಗಳು ಕಟ್ಟುವುದಕ್ಕೆ ಬಂದಾಗ ಬಡ್ಡಿಸಹಿತ ತೆಗೆದುಕೊಂಡುಬಿಡುತ್ತಾರೆ. ಈ ರೀತಿ ಮಾಮೂಲು ಕೊಡುವುದು ತಪ್ಪಬೇಕಾದರೆ ಸರ್ಕಾರದವರು ದಕ್ಷತೆಯನ್ನು ವಹಿಸಿ, ಸಿ.ಐ.ಡಿ. ಗಳನ್ನು ಇಟ್ಟು, ಈ ಪದ್ಧತಿಯನ್ನು ನಿರ್ಮೂಲ ಮಾಡಬೇಕೆಂದು ನನ್ನ ಅಭಿಪ್ರಾಯ.

ಈ ವರ್ಷ ಹೈದರಾಬಾದ್ ಕರ್ಣಾಟಕದಲ್ಲಿ ಅತಿವೃಷ್ಟಿಯಿಂದ ಕೆಲವರಿಗೆ ಬಹಳ ನಷ್ಟವಾಗಿದೆಯಾದ್ದರಿಂದ ಈ ಸಲದ ಮಾರಾಟದಲ್ಲಿ ಸ್ವಲ್ಪ ಕಡಮೆಯಾಗಿ Sales ಕಡಮೆ ಆಗಬಹುದು. ಹಿಂದಿನ ವರ್ಷ ಬಹಳ ನಷ್ಟವಾಗಿರುತ್ತದೆ. ಅದನ್ನು ಸಮನ್ವಯಗೊಳಿಸುವ ಸಲುವಾಗಿ ಈ ಸಲ group system ತಪ್ಪಿಸಿ ಸೇಲ್ಸ್ ಮಾಡಿದರೆ ಸರಿಹೋಗುತ್ತದೆಂದು ನನ್ನ ಅಭಿಪ್ರಾಯ.

ಹೈದರಾಬಾದ್ ಮೋಟಾರ್ ವೆಹಿಕಲ್ ಟ್ಯಾಕ್ಸೇಷನ್, 1955ರ ಪ್ರಕಾರ ನಮ್ಮ ಹೈದರಾಬಾದು ಕರ್ಣಾಟಕದಲ್ಲಿ ಒಂದು ಸೀಟಿಗೆ, ಒಂದು ಕ್ವಾರ್ಟರಿಗೆ, ಮೂರು ರೂಪಾಯಿ ಇತ್ತು. ಈಗ ಅದನ್ನು 30 ರೂಪಾಯಿ ಮಾಡಿದ್ದಾರೆ. ಅಲ್ಲಿ ಕಚ್ಚಾ ರೋಡುಗಳೆಂದು ಕೆಲವು ರಸ್ತೆಗಳಿವೆ, ಗದ್ವಾಲ್—ರಾಯಚೂರು ರಸ್ತೆ, ಮಾನ್ವಿ—ಮಟಮರಿ ರಸ್ತೆ, ಕುಷ್ಟಗಿ-ಕೊಪ್ಪಳ ರಸ್ತೆ, ಮಸ್ಕಿ—ಕಾತಾಳ್ ರಸ್ತೆ, ಯಲಬುರ್ಗಿ-ಕೊಪ್ಪಳ ರಸ್ತೆ, ತಾವರಗೇರಿ—ಗಂಗಾವತಿ ರಸ್ತೆ—ಈ ರಸ್ತೆಗಳು, ಮತ್ತು ಕೆಲವು ಹೋಬಳಿ ಸ್ಥಳಗಳನ್ನೂ ಕೂಡಿಸತಕ್ಕ ಅಪ್ರೋಚ್ ರೋಡ್ಸ್ ಇವೆ. ಇವು ಬರಿಯ ಮಣ್ಣಿನ ರಸ್ತೆಗಳು. ಎಂದರೆ ಮೆಟಲ್ ಹಾಕಿಲ್ಲದೆ ಇರತಕ್ಕ ರಸ್ತೆಗಳು. ಇವು ಸಿಮೆಂಟ್ ಹಾಕಿರುವ ರಸ್ತೆಗಳಲ್ಲ; ಮತ್ತು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಸೇರಿದ ರಸ್ತೆಗಳಲ್ಲ. ಇಂಥ ರಸ್ತೆಗಳ ಮೇಲೆ, ಕೆಲವು ಕಚ್ಚಾ ರಸ್ತೆಗಳ ಮೇಲೆ ಸ್ವಂತ ಜನರು ವೆಹಿಕಲ್ಸ್ ನಡೆಸುತ್ತಿದ್ದಾರೆ. ಅವರು ಮೂವತ್ತು ಜನರು ಕೂಡುವ ಒಂದು ಮೋಟಾರಿಗೆ ವರ್ಷಕ್ಕೆ 3,600 ರೂಪಾಯಿ ಟ್ಯಾಕ್ಸ್ ಕಟ್ಟಲಕ್ಕೆಬೇಕು. ಈ ರೀತಿ ಅವರಿಗೆ ಅನೇಕ ಕಷ್ಟಗಳಿವೆ. ಐದು ತಿಂಗಳ ಕಾಲ ಅವರು ಮೋಟಾರುಗಳನ್ನು ನಿಲ್ಲಿಸಬೇಕಾಗುತ್ತದೆ. ಈ ರಸ್ತೆಗಳಲ್ಲಿ ಮೋಟಾರುಗಳಿಗೆ ಹೆಚ್ಚು ಪೆಟ್ರೋಲ್ ಬೇಕಾಗುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ರಸ್ತೆಗಳಲ್ಲಿ ಮೈಲೇಜ್ ಬಂದಹಾಗೆ ಈ ಕಚ್ಚಾ ರಸ್ತೆಗಳಲ್ಲಿ ಬರುವುದಿಲ್ಲ. ಅವರಿಗೆ ಹೆಚ್ಚು ರಿಪೇರಿ ಚಾರ್ಜುಗಳು ಬೀಳುತ್ತವೆ. ಐದು ತಿಂಗಳು ಗಾಡಿಯನ್ನು ನಿಲ್ಲಿಸಿರುವಾಗಲೂ ಸಹ establishment charges ಕೊಡಬೇಕು. ಇಷ್ಟೇ ಅಲ್ಲದೆ ಇನ್ನೂ ಕೆಲವು ಖರ್ಚುಗಳಿರುತ್ತವೆ. ಈ ಎಲ್ಲ ಕಾರಣಗಳಿಂದ ಖಾಸಗಿಯವರು ಒಂದು ಸಂದರ್ಭದಲ್ಲಿ ಮೋಟಾರುಗಳನ್ನು ನಿಲ್ಲಿಸುವ ಪರಿಸ್ಥಿತಿ ಬರಬಹುದು. ಸರ್ಕಾರದವರು ಒಂದು uniformity ಮಾಡುವ ಉದ್ದೇಶವನ್ನಿಟ್ಟುಕೊಂಡಿರುತ್ತಾರೆ. ಆದ್ದರಿಂದ ಆಯಾ ಊರುಗಳಿಗೆ ಸಂಬಂಧಪಟ್ಟ ರಸ್ತೆಗಳ ಮೇಲೆ ನಮ್ಮ ಸ್ಟೇಟ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ಓಡಿಸುವುದಕ್ಕೆ ಏರ್ಪಾಡು ಮಾಡಿಕೊಡಬೇಕು. ಇಲ್ಲವೆ ಅವರಿಗೆ exemption ಕೊಡಬೇಕೆಂದು ಹೇಳಿ ಈ ಡಿಮ್ಯಾಂಡುಗಳನ್ನು ನಾನು ಅಂಗೀಕರಿಸುತ್ತೇನೆ.

Mr. DEPUTY SPEAKER.—The House will now rise and meet again at 3-35 P.M.

The House adjourned for Lunch at Five Minutes past Three of the Clock and re-assembled at Thirty-five Minutes past Three of the Clock.

[MR. SPEAKER in the Chair.]

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ನಮ್ಮ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಮಾತನಾಡಿ ಸರಕಾರದ ಗಮನವನ್ನು ಸೆಳೆದಿದ್ದಾರೆ. ನಾನೂ ಸಹ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಬಿಚ್ಛಿಸುತ್ತೇನೆ. ಮೊದಲನೆಯದಾಗಿ ಎಕ್ಸೈಜು ವಿಷಯದಲ್ಲಿ ಹಿಂದಕ್ಕೆ ನಮ್ಮ ಮಾನ್ಯ ಕಾಂಗ್ರೆಸ್ ಸದಸ್ಯರು ವಿರೋಧ ಪಕ್ಷದಲ್ಲಿ ಇರುವಾಗ ಹೇಳಿದ್ದಾರೆ ಮತ್ತು ರಾಜ್ಯದಾಡಳಿತ ಕೈಯಲ್ಲಿ ಬಂದ ಮೇಲೆ ಸಹ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ಬಡ ಜನರಿಗೆ ನಷ್ಟವನ್ನು ಉಂಟುಮಾಡತಕ್ಕಂಥ ಮದ್ಯಪಾನವನ್ನು ಬಡಜನರ ಹಿತದ ಸಲುವಾಗಿ ಕಾಂಗ್ರೆಸ್ಸಿಗರು ಅಧಿಕಾರಕ್ಕೆ ಬಂದ ತಕ್ಷಣ ತೆಗೆದು ಹಾಕಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದ್ದರು. 1958ರ ಒಳಗಾಗಿ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದರು. ಆದರೆ ಹಾಗೆ ಹೇಳಿದಂತೆ ಕಾರ್ಯಗತ ಮಾಡುವುದರಲ್ಲಿ ಸರಕಾರ ಹಿಂದೆ ಉಳಿದಿದೆ. ಅವರಲ್ಲಿ ಶಕ್ತಿ ಇಲ್ಲದಂತಾಗಿದೆ. ಇದಕ್ಕೆ ಕಾರಣವೇನೆಂದರೆ ಎಕ್ಸೈಜ್ ಕಂಟ್ರಾಕ್ಟರ್ ಆದವರಿಗೆ ಬೆಂಬಲನೀಡುವ ಉದ್ದೇಶದಿಂದ ಪಾನನಿರೋಧ ಜಾರಿಗೆ ತರುವುದನ್ನು ಸರಕಾರದವರು ಪ್ರತಿವರ್ಷ ಮುಂದಕ್ಕೆ ತಳ್ಳುತ್ತಾ ಬರುತ್ತಿದ್ದಾರೆ. ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಬೆಂಗಳೂರ ಸಿಟಿಯಲ್ಲಿ ಪ್ರತಿವರ್ಷ ಅದರಲ್ಲೂ ವಿಶಾಲ ಮೈಸೂರ ರಾಜ್ಯವಾದಮೇಲೆ ಕಾರ್ಮಿಕರ ಸಂಖ್ಯೆ, ಕುಡಿಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ಒಂದು ಪಾಲಿಸಿ ಮುಂದಿಟ್ಟುಕೊಂಡು Group excise sales ಮಾಡಿ ಹೆಚ್ಚಿನ ಮೊಬಲಗನ್ನು ಪಡೆಯುತ್ತಿದ್ದರು. ಗ್ರೂಪು ಹರಾಜು ಆಗತಕ್ಕಂಥ ಪದ್ಧತಿಯನ್ನು ನೀವು ತಪ್ಪಿಸುತ್ತಿದ್ದೀರಿ. ಒಟ್ಟಿಗೆ ಹರಾಜು ಮಾಡುವುದರಿಂದ ಸರಕಾರಕ್ಕೆ ಸುಮಾರು 40 ಲಕ್ಷ ರೂಪಾಯಿ ನಷ್ಟವಾಗಿದೆ. ಸ್ವಾಮಿ, ಒಂದು ಕಡೆ ರೈತರಮೇಲೆ ಟ್ಯಾಕ್ಸ್ ಹಾಕಬೇಕು ಎನ್ನುತ್ತಾರೆ. ಇನ್ನೊಂದು ಕಡೆ ವ್ಯಾಪಾರದ ಮೇಲೆ ಟ್ಯಾಕ್ಸ್ ಹಾಕತಕ್ಕಂಥ ಕಾಲದಲ್ಲಿ ಸರಕಾರವು ತನ್ನ ಆದಾಯವನ್ನು ಕಳೆದುಕೊಳ್ಳುತ್ತಿರುವ ಪದ್ಧತಿಯನ್ನು ಅನುಸರಿಸುತ್ತಿರುವುದರ ಅರ್ಥವೇನು ಎಂಬುದನ್ನು ಯೋಚಿಸಬೇಕು.

ಈ ಪಾನನಿರೋಧವನ್ನು ಕೆಲವು ಕಡೆಗಳಲ್ಲಿ ಜಾರಿಗೆ ತಂದಿರುವುದು, ಕೆಲವುಕಡೆ ತರದಿರುವುದು ಇವನ್ನೆಲ್ಲಾ ನಾವು ಕೂಲಂಕಷವಾಗಿ ನೋಡುವುದಾದರೆ ನಿಜವಾ

(ಶ್ರೀ ಎನ್. ಜಿ. ನರಸಿಂಹೇಗೌಡ).

ಗಿಯೂ ಪಕ್ಕದ ಡಿಸ್ಟ್ರಿಕ್ಟುಗಳಲ್ಲಿರತಕ್ಕ ಬಡಜನಗಳು ಮುಖ್ಯವಾಗಿ ಕುಡಿಯತಕ್ಕ ಪದ್ಧತಿಯನ್ನಿಟ್ಟಿರುವ ಜನಗಳು, ತಾವೇ ಸ್ವಂತವಾಗಿ ಮದ್ಯಪಾನವನ್ನು ತಯಾರು ಮಾಡಿ, ತಾವು ಒಬ್ಬರು ಕುಡಿಯುವುದರ ಜೊತೆಗೆ ಇಡಿಯ ಸಂಸಾರವೇ ಕುಡಿದು ಅನಾರೋಗ್ಯಕ್ಕೀಡಾಗಿರುತ್ತಾರೆ. ಸರ್ಕಾರ ಇವೊತ್ತಿನ ದಿವಸ ನಮ್ಮ ಜನಗಳಲ್ಲಿ ಆರೋಗ್ಯ ಹೇಗಿದೆಯೆಂಬುದನ್ನು ತಿಳಿಯಲು ಪಾನವನ್ನು ಕುಡಿದವರ ಆರೋಗ್ಯವನ್ನು ಪರಿಶೀಲಿಸುವುದಕ್ಕಾಗಿ ಒಂದು ಕಮಿಟಿಯನ್ನು ಮಾಡಲಿ. ಇವೊತ್ತಿನ ದಿವಸ ಬಡಜನಗಳ, ಕಾರ್ಮಿಕರ ಮತ್ತು ಮದ್ಯಪಾನ ಪದ್ಧತಿಯನ್ನು ಇಟ್ಟುಕೊಂಡಿರುವ ಜನಗಳ ಆರೋಗ್ಯ ದೃಷ್ಟಿ ಯಾವ ಮಟ್ಟದಲ್ಲಿದೆ, ಯಾವರೀತಿ ಬೆಳೆಯುತ್ತಿದೆ ಎನ್ನುವುದನ್ನು ನಮ್ಮ ಸರ್ಕಾರದವರು ಮೊದಲು ಯೋಚನೆ ಮಾಡಬೇಕು. ಈ ವಿಷಯವನ್ನು ನಿಜವಾದ ದೃಷ್ಟಿಯಿಂದ ಯೋಚನೆ ಮಾಡುವುದಾದರೆ, ಪ್ರತಿವರ್ಷವೂ ಜನರಲ್ಲಿ ಇದರಿಂದ ಅನಾರೋಗ್ಯಪರಿಸ್ಥಿತಿ ಉಲ್ಬಣವಾಗುತ್ತಿದೆ. ಆದ್ದರಿಂದ ಜನರ ಆರೋಗ್ಯ ದೃಷ್ಟಿಯನ್ನು ಪೂರ್ಣವಾಗಿ ಮನಸ್ಸಿನಲ್ಲಿಟ್ಟುಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಸಂಬಂಧಪಟ್ಟ ಮಂತ್ರಿಗಳು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಎರಡನೆಯದಾಗಿ ಅಕ್ಕಪಕ್ಕದ ಡಿಸ್ಟ್ರಿಕ್ಟುಗಳಲ್ಲಿ ಮದ್ಯಪಾನೀಯಗಳನ್ನು ಮಾರತಕ್ಕವರ ಮೇಲೆ ಕ್ರಮತೆಗೆದುಕೊಳ್ಳಬೇಕು. ಒಬ್ಬ ಬಡಕಾರ್ಮಿಕ ಒಂದುಕಡೆ ದೂರ ಹೋಗಿ ಎಲ್ಲಿ ಮದ್ಯಪಾನ ತಯಾರಾಗುತ್ತಿದೆಯೋ ಅಲ್ಲಿ ಕುಡಿದು ಹೊರಗಡೆ ಬಂದರೆ, ಅವನನ್ನು ಹಿಡಿದು ಕೇಸು ಹಾಕುತ್ತಾರೆ. ಇದು ನಿಜವಾಗಿಯೂ ಅನ್ಯಾಯ. ಏಕೆಂದರೆ, ಅವನು ಬೆಳಗಿನಿಂದ ಸಂಜೆಯವರೆಗೂ ಕೆಲಸಮಾಡಿ 8 ಆಣೆ ಕೂಲಿಯಲ್ಲಿ 3 ಆಣೆ, 4 ಆಣೆ ಪಾನವನ್ನು ಸೇವಿಸುವುದರ ಮೂಲಕ, ತಾನು ಕಷ್ಟಪಟ್ಟು ಮಾಡಿದ ಕೆಲಸದ ಶ್ರಮವನ್ನು ಕಡಮೆಮಾಡಿಕೊಳ್ಳುವುದಕ್ಕೆ ಹೋದರೆ, ಅವನನ್ನು ಹಿಡಿದುಹಾಕಿ ಸುಮಾರು 50-100 ರೂಪಾಯಿಗಳನ್ನು ಫೈನ್ ಹಾಕುವುದು ಯಾವ ಧರ್ಮ? ಒಂದುಕಡೆ ಮದ್ಯಪಾನದಿಂದ ಕಾರ್ಮಿಕರಿಗೆ ಅನುಕೂಲ ಮಾಡಬೇಕೆಂದು ಹೇಳುತ್ತಾರೆ. ಆದರೆ ಅವರು ಹಾಳಾಗಿ ಹೋಗುತ್ತಿದ್ದಾರೆ. ಅವರ ಆರೋಗ್ಯ ಕೆಡುತ್ತಿದೆ. ಇನ್ನೊಂದುಕಡೆ ಅವರ ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕೆಂದು ಹೇಳುವುದು, ಆದರೆ ಮದ್ಯಪಾನ ಮಾಡಿದವನನ್ನು ಹಿಡಿದರೆ ಅವನಿಗೆ ಕೋರ್ಟಿನಲ್ಲಿ 50ರೂಪಾಯಿಗಳ ಫೈನ್ ಹಾಕುವುದು. ಇದು ಬಹಳ ತಪ್ಪು. ಪೂರ್ತಿಯಾಗಿ ಪಾನನಿರೋಧವನ್ನು ಜಾರಿಗೆ ತಂದರೆ ಜನಗಳ ಆರೋಗ್ಯ ಇನ್ನೂ ಉತ್ತಮವಾಗುತ್ತದೆ. ಪಾನನಿರೋಧವನ್ನು ಜಾರಿಗೆ ತರುತ್ತೇವೆಂದು ಏತಕ್ಕೋಸ್ಕರ ಈ ಬೇಡಿಕೆಯನ್ನು ಇಟ್ಟಿದ್ದಾರೋ ನನಗಂತೂ ಗೊತ್ತಾಗಲಿಲ್ಲ. ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವಾಗ ಇದನ್ನು ಖಂಡಿತವಾಗಿ ತೆಗೆದುಹಾಕುತ್ತೇವೆ ಎಂಬ ಭರವಸೆಯನ್ನು ಕೊಟ್ಟು ಪಾನ ನಿರೋಧವನ್ನು ಜಾರಿಗೆ ತರಲು ಮಾಡಿರುವ ನಿರ್ದಿಷ್ಟವಾದ ತೀರ್ಮಾನವನ್ನು ಮತ್ತು ಖಚಿತವಾದ ಅಭಿಪ್ರಾಯವನ್ನು ತಿಳಿಸಬೇಕೆಂದು ಹೇಳುತ್ತೇನೆ. ಹೊರಗಡೆಯವರು, ನಮ್ಮ ಮೈಸೂರು ಸಂಸ್ಥಾನದಲ್ಲಿ ಇನ್ನೂ ಪಾನ ನಿರೋಧವನ್ನು ಜಾರಿಗೆ ತರದೇ ಇರುವುದನ್ನು ನೋಡಿ, ಏತಕ್ಕೋಸ್ಕರ ಮೈಸೂರು ಸರ್ಕಾರದವರು ಈ ಪಾನ ನಿರೋಧವನ್ನು ಪೂರ್ತಿಯಾಗಿ ತೆಗೆಯಲಿಲ್ಲವೋ ಎಂದು ನಮ್ಮ ಸಂಸ್ಥಾನದ ಆಡಳಿತದ ವಿಷಯವಾಗಿ ಆಡಿಕೊಳ್ಳುತ್ತಿದ್ದಾರೆ. ಮಹಾತ್ಮ ಗಾಂಧಿಯವರೂ, ಕೇಂದ್ರ ಮಂತ್ರಿಗಳೂ, ತಜ್ಞರೂ ಹೇಳಿದ ಹಾಗೆ, ಇನ್ನೂ ಯಶಸ್ವಿಗೊಳಿಸದಿರುವುದು ಬಹಳ ಅನ್ಯಾಯ. ಅಕ್ಕಪಕ್ಕದ ನೆರೆಹೊರೆಯವರು ಇರತಕ್ಕ ಸ್ಥಿತಿ, ಅವರು ಈ ಪಾನನಿರೋಧವನ್ನು ಜಾರಿಗೆ ತರಲುಮಾಡಿದ ಏರ್ಪಾಡುಗಳು ಇವುಗಳನ್ನು ತಿಳಿದು ಜಾಗ್ರತೆಯಾಗಿ ಯೋಚನೆ ಮಾಡಿ ಇದಕ್ಕೆ ಏನಾದರೂ ತಕ್ಕ ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಕೂಡಲೆ ತೆಗೆದುಕೊಳ್ಳಬೇಕೆಂದು ನಾನು ವಿನಯದಿಂದ ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಈ ಬಾಬಿನ ಉತ್ಪತ್ತಿಯಲ್ಲಿ ಈ ವರ್ಷ ಸುಮಾರು 40 ಲಕ್ಷ ರೂಪಾಯಿಗಳು ಕಡಮೆ ಬಂದಿವೆಯೆಂದು ಹೇಳುತ್ತಿದ್ದಾರೆ. ಬೆಂಗಳೂರು ಜಿಲ್ಲೆ ಮತ್ತು ಇತರ ಜಿಲ್ಲೆಗಳಲ್ಲಿಯೂ ಎಕ್ಸೈಜು ಏಲೇ ಮಾಡುವ ಪದ್ಧತಿಯನ್ನು ನೋಡಿದರೆ, ಪ್ರತಿವರ್ಷವೂ ಹೋಲ್ ಸೇಲಾಗಿ ಒಂದು ಡಿಸ್ಟ್ರಿಕ್ಟಿನ ದೊಡ್ಡ ದೊಡ್ಡ ಕಂಟ್ರಾಕ್ಟುದಾರರಿಗೆಯೇ ಎಕ್ಸೈಜು ಕಂಟ್ರಾಕ್ಟನ್ನು ಕೊಡುತ್ತಿರುವುದರಿಂದ ಆದಾಯ ಕಡಮೆಯಾಗಿರಬೇಕೆಂದೆನಿಸುತ್ತದೆ. ನಿಮಗೆ ಆದಾಯ ಇನ್ನೂ ಹೆಚ್ಚು ಬೇಕು. ಬಡ ಕಂಟ್ರಾಕ್ಟುದಾರರಿಗೂ ಇದರಲ್ಲಿ ಅವಕಾಶ ಕೊಡಿ. ಐಶ್ವರ್ಯವಂತರು ಹೋಲ್ ಸೇಲಾಗಿ ಈ ಕಂಟ್ರಾಕ್ಟನ್ನು ತೆಗೆದುಕೊಂಡು ಎಲ್ಲರಿಗೂ ಚಿಲ್ಲರೆ ಚಿಲ್ಲರೆಯಾಗಿ ಹಂಚಿ ಇನ್‌ಕಂಟ್ಯಾಕ್ಸನ್ನು ಸರಿಯಾಗಿ ಕೊಡುತ್ತಿಲ್ಲ. ಯಾವಾಗ ಹೋಲ್ ಸೇಲಾಗಿ ಒಬ್ಬರೇ ಈ ಕಂಟ್ರಾಕ್ಟನ್ನು ತೆಗೆದುಕೊಳ್ಳುತ್ತಾರೋ, ಅಂತಹವರೇ ಇನ್‌ಕಂಟ್ಯಾಕ್ಸ್ ಕೊಡುವುದಕ್ಕೂ ಸಹ ಹಿಂದೇಟು ಹಾಕುತ್ತಿದ್ದಾರೆ. ಒಂದು ಸಂಪ್ರದಾಯದ ದೃಷ್ಟಿಯಿಂದ ಆ ಕಂಟ್ರಾಕ್ಟುದಾರರ ಹೆಸರನ್ನು ಈ ಸಭೆಯಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ. ಅವರ ಹೆಸರನ್ನು ಹೇಳಲಿ ಹೇಳದಿರಲಿ ಈಗ ಇವರಿಂದ ಬರಬೇಕಾಗಿರತಕ್ಕ ಬಾಕಿಯನ್ನು ಏತಕ್ಕೋಸ್ಕರ ವಸೂಲು ಮಾಡಬಾರದು? ಹಿಂದುಳಿದಿರತಕ್ಕ ಬಡ ಕಂಟ್ರಾಕ್ಟುದಾರರಿಗೆ ಹರಾಜಿನಲ್ಲಿ ಅವಕಾಶ ಕೊಡಬೇಕು. ಮೈಸೂರಿನಲ್ಲಿ ದೊಡ್ಡ ದೊಡ್ಡ ಕಂಟ್ರಾಕ್ಟುದಾರರಿಗೆ ಮಾತ್ರ ರಿಯಾಯಿತಿ ಕೊಡುತ್ತಾರೆ. ಅದೇ ರೀತಿ ಬಡ ಕಂಟ್ರಾಕ್ಟುದಾರರಿಗೆ ಮಾತ್ರ ರಿಯಾಯಿತಿ ಕೊಡುತ್ತಿಲ್ಲ. ನಿಜವಾಗಿಯೂ ಬಡ ಕಂಟ್ರಾಕ್ಟುದಾರರಿಗೆ ಸರಿಯಾದ ಅವಕಾಶಗಳನ್ನು ಒದಗಿಸಿಕೊಡಬೇಕು. ದೊಡ್ಡ ಕಂಟ್ರಾಕ್ಟುದಾರರಿಗೆ ಮಾತ್ರ ಇದು ಸಂಬಂಧಿಸಿದ್ದು ಎಂಬ ಮನೋಭಾವನೆಯನ್ನು ನಾವು ತೆಗೆದುಹಾಕಬೇಕು. ನಿಜವಾಗಿಯೂ ನಾವು ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮನಾದ ಹಕ್ಕುಬಾಧ್ಯತೆಗಳನ್ನು ಒದಗಿಸಬೇಕೆಂದಿರುವಾಗ ಬಡ ಕಂಟ್ರಾಕ್ಟುದಾರರನ್ನು ಇಟ್ಟುಕೊಳ್ಳದೇ ಹೋದ ಸರ್ಕಾರದವರು ಎಲ್ಲರಿಗೂ ಸಮನಾದ ಹಕ್ಕನ್ನು ದೊರಕಿಸಿಕೊಟ್ಟಂತಾಗುವುದಿಲ್ಲ. ಈಗತಾನೆ ಮಹಾಚುನಾವಣೆಯಾಗಿ ನಾವು ಚುನಾಯಿಸಿ ಬಂದಿದ್ದೇವೆ. ಸುಮಾರು 15 ವರ್ಷ, 20 ವರ್ಷಗಳಿಂದ ಎಷ್ಟೋ ಕಮಿಟಿಗಳನ್ನು ನೇಮಕ ಮಾಡುತ್ತಿದ್ದಾರೆ. ಇತ್ತೀಚೆಗೆ 1947ರಿಂದ ಈ ಪಾನನಿರೋಧವನ್ನು ಜಾರಿಗೆ ತರದೆ ಇರುವುದರಿಂದ ಓಟುದಾರರಲ್ಲಿ ಒಂದು ತರಹ ವ್ಯಾಮೋಹವನ್ನು ಹುಟ್ಟಿಸದೇಹೋಗಿದ್ದರೆ ಓಟು ಸಿಕ್ಕುವುದು ಬಹು ಕಷ್ಟವಾಗತ್ತಿತ್ತು. ಅದು ನನ್ನ ಅನುಭವದ ವಿಷಯ, ಅಕ್ಕ ಪಕ್ಕದಲ್ಲಿರುವವರಿಂದ ತಿಳಿದಿರುವ ವಿಷಯ. ಇವೊತ್ತಿನ ದಿವಸ ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಬೇಕಾಗಿದ್ದರೆ, ಅವರಿಗೆ ಆ ಕಷ್ಟ ಗೊತ್ತಿಲ್ಲದೆ ಇಲ್ಲ. ಪಾನ ನಿರೋಧವನ್ನು ಜಾರಿಗೆ ತಂದರೆ ಮಾನ್ಯ ಸದಸ್ಯರೆಲ್ಲರಿಗೂ ಬಹಳ ಅನುಕೂಲವಾಗುತ್ತದೆ. ನಿಜವಾಗಿಯೂ ಯಾವ ವ್ಯಕ್ತಿಯೇ ಆಗಲಿ, ಶ್ರದ್ಧೆಯಿಂದ ಕೆಲಸಮಾಡಿದರೆ, ಅವನಿಗೆ ಖಂಡಿತವಾಗಿ ಓಟುಗಳು ಬಂದೇ ಬರುತ್ತವೆ ಮತ್ತು ವಿಶೇಷ

ವಾಗಿ ಓಟುಗಳನ್ನು ಗಳಿಸಿ ಚುನಾವಣೆಯಲ್ಲಿ ಜಯಶೀಲನಾಗುತ್ತಾನೆ. 1957ನೆಯ ಇಸವಿಯಲ್ಲಿ ನಡೆದ ಈ ಮಹಾ ಚುನಾವಣೆಯಲ್ಲಿ ಶೇಕಡಾ 60ಕ್ಕೆ ಮೇಲ್ಪಟ್ಟು ಮಾನ್ಯ ಸದಸ್ಯರು ಪಾನ ಕುಡಿಸಿ ಓಟು ಗಳಿಸಿದ್ದಾರೆ ಎಂದು ಹೇಳಿದರೆ ಏನೂ ತಪ್ಪಾಗಲಾರದು. ಆ ರೀತಿ ಓಟುಗಳಿಸುವ ಕಾಲ ಇವೊತ್ತಿನ ದಿವಸ ಒದಗಿದೆ. ಯಾರಾದರೂ ಸರಿಯೇ, ರಾಜ್ಯಾಡಳಿತ ನಡೆಸಲೇ ಬೇಕು. ಇದರ ಮೇಲೆ ಸರಿಯಾದ ಅಭಿಪ್ರಾಯವನ್ನು ಕೊಡಲಿ. ಇದನ್ನು ಜಾಗ್ರತೆಯಾಗಿ ತೆಗೆದುಹಾಕಬೇಕು.

ಎರಡನೆಯದಾಗಿ ಬಸ್ಸುಗಳ ಮೇಲೆ ಹಾಕುವ ತೆರಿಗೆಯ ವಿಚಾರದಲ್ಲಿ ಕೆಲವು ಅಂಶಗಳನ್ನು ಮಾತ್ರ ಹೇಳ ಬಯಸುತ್ತೇನೆ. ನಮ್ಮಲ್ಲಿ ಬಸ್ಸುಗಳು ಅನೇಕವಾಗಿ ಓಡಾಡುತ್ತಿವೆ. ಆದರೆ ನಮಗೆ ಒಂದು ದೊಡ್ಡ ಕೊರತೆಯಾಗಿದೆ. ನಮ್ಮಲ್ಲಿ 25 ಮೈಲಿಗಳಿಂದ 500 ಮೈಲಿಗಳ ವರೆಗೂ ಓಡಾಡುವ ಬಸ್ ಲೈನುಗಳಿವೆ. ಈಗ ನಮ್ಮ ಸರ್ಕಾರದವರು ಏನು ಮಾಡಿದ್ದಾರೆಂದರೆ, 500 ಮೈಲಿ ಓಡಾಡತಕ್ಕ ಬಸ್ಸಿನ ಮೇಲೆ ಏನು ತೆರಿಗೆಯನ್ನು ನಿಗದಿ ಮಾಡಿದ್ದಾರೋ ಅದೇ ತೆರಿಗೆಯನ್ನು 25 ಮೈಲಿ ಓಡಾಡುವ ಸಣ್ಣ ಬಸ್ಸಿನಮೇಲೆ ಹಾಕಿದ್ದಾರೆ. ಸುಮಾರು 30-40 ಬಸ್ಸುಗಳನ್ನು ಹೊಂದಿರುವನಿಗೆ 25 ಮೈಲಿಗಳು ಮಾತ್ರ ಓಡಾಡುವ ಹಾಗೆ ಪರ್ಮಿಟ್ ಸಿಕ್ಕಿದರೆ ಎಷ್ಟೊಂದು ಅವನು ತೆರಿಗೆ ಕೊಡಬೇಕಾಗುತ್ತದೆ? ಆದ್ದರಿಂದ ಬಸ್ಸುಗಳಿಗೆ ಒಂದು ಮಿನಿಮಂ ಟ್ಯಾಕ್ಸನ್ನು ಫಿಕ್ಸ್ ಮಾಡಬೇಕು. 50 ಮೈಲಿಗೆ ಒಂದು ಟ್ಯಾಕ್ಸ್ ರೇಟ್, 100 ಮೈಲಿಗೆ ಒಂದು ಟ್ಯಾಕ್ಸ್ ರೇಟ್ ಹೀಗೆ ಮಾಡುವುದರಿಂದ ಬಸ್ ಮಾಲೀಕರಿಗೆ ಸುಂಕದ ವ್ಯಾಪ್ತಿ ಜಾಸ್ತಿಯಾಗುತ್ತದೆ. ಈಗ ಹಾಕಿರುವ ಸುಂಕವನ್ನು ನೋಡಿದರೆ ಸಣ್ಣ ಸಣ್ಣ ಬಸ್ ಮಾಲೀಕರು ಪಾಪರ್ ಆಗುತ್ತಾರೆ. ಅವರು ಸೇಲ್ಸ್ ಟ್ಯಾಕ್ಸನ್ನು ಕೊಡದೆ ನಿಮಗೆ ಮೋಸ ಮಾಡಬಹುದು. ಆದ್ದರಿಂದ ಸಣ್ಣ ಸಣ್ಣ ಲೈನಿನ ಬಸ್ ಮಾಲೀಕರು ಮುಂದೆ ಬರುವ ಹಾಗೆ ಅವಕಾಶವನ್ನು ಕಲ್ಪಿಸಿ, ಈಗ ಎಲ್ಲಾ ಪ್ರದೇಶಗಳಲ್ಲಿರುವ ತೆರಿಗೆಗಳನ್ನೂ ಹೋಲಿಸಿ ನೋಡಿ ಮೈಲೇಜ್ ತರಹ ಯೂನಿಫಾರಂ ಟ್ಯಾಕ್ಸೇಷನ್ ಮಾಡುತ್ತಾರೆಂದು ನಾನು ತಿಳಿದಿದ್ದೇನೆ.

ಇನ್ನು ರಿಜಿಸ್ಟ್ರೇಷನ್ ವಿಚಾರ. ಈಗ ಗ್ರಾಮಾಂತರ ಕೈಗಾರಿಕೆಗಳಲ್ಲಿ ಎಷ್ಟೋ ಯೋಜನೆಗಳು ಆಗುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿರುವವರಿಗೆ ಸ್ಟಾಂಪಿನ ಮೇಲೆ ಇನ್ನು ಮುಂದೆ ರಿಯಾಯಿತಿ ಕೊಡದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಈಗ ಇನ್ನೂ ಗ್ರಾಮಾಂತರ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾಗಿವೆ. ಈಗ ಸಾಮಾನ್ಯವಾಗಿ ಇಂಡಸ್ಟ್ರಿಯಲ್ ಬ್ಯಾಂಕಿನವರು 25 ಲಕ್ಷದ ಒಂದು ಕೈಗಾರಿಕೆಗೋಸ್ಕರ ಹಣ ತೆಗೆದುಕೊಳ್ಳಬೇಕಾದರೆ, ಅವರು ಎಷ್ಟೋ ಸಾವಿರ ರೂಪಾಯಿಗಳಷ್ಟು ಸ್ಟಾಂಪು ತೆರಿಗೆಯನ್ನು ಕೊಡಬೇಕಾಗಿ ಬರುತ್ತದೆ. ಇದರಿಂದ ಅವರಮೇಲೆ ತೆರಿಗೆಯ ಹೊರೆ ಜಾಸ್ತಿ ಬೀಳುತ್ತದೆ. ಅದೂ ಅಲ್ಲದೆ ಇನ್ ಡೈರೆಕ್ಟಾಗಿ ಎಷ್ಟೋ ವಿಧವಾದ ತೆರಿಗೆಗಳು ಬೀಳುತ್ತವೆ. ಆದ್ದರಿಂದ ಇಂತಹ ರಿಜಿಸ್ಟ್ರೇಷನ್‌ಗಳನ್ನು ಮಾಡುವಾಗ, ಸ್ಟಾಂಪುಗಳ ಮೊಬಲಗುಗಳಲ್ಲಿ ಸ್ವಲ್ಪ ರಿಯಾಯಿತಿಯನ್ನು ತೋರಿಸಬೇಕು. ಆರೀತಿ ರಿಯಾಯಿತಿಯನ್ನು ತೋರಿಸದೆ ಇದ್ದರೆ, ಹಳ್ಳಿಗಾಡಿನ ಜನರಿಗೆ ಬಹಳ ಕಷ್ಟವಾಗುತ್ತದೆ. ಅದೂ ಅಲ್ಲದೆ ಕೋರ್ಟ ಫೀ ಸ್ಟಾಂಪನ್ನು ಜಾಸ್ತಿ ಮಾಡಿದ್ದಾರೆ. ಕೊನೆಯದಾಗಿ ರಿಜಿಸ್ಟ್ರೇಷನ್ ಮೇಲಿನ ಡ್ಯೂಟಿಯನ್ನು ಕೂಡಲೇ ಕಡಮೆ ಮಾಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಇ. ಪುಂಡಲೀಕಪ್ಪ (ಕುಷ್ಟಗಿ)—ಅಧ್ಯಕ್ಷರೇ, ಈ ಡಿಮ್ಯಾಂಡಿನ ವಿಷಯದಲ್ಲಿ ಕೆಲವು ಸೂಚನೆಗಳನ್ನು ನಮ್ಮ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ನಮ್ಮ ಹೈದ್ರಾಬಾದ್ ಕರ್ನಾಟಕದಲ್ಲಿ P.W.D. ರೋಡಿನಲ್ಲಿ ತಿರುಗಾಡುವ ಸರ್ಕಾರಿ ಬಸ್ಸುಗಳು ಇರುತ್ತವೆ. ಆದರೆ ಆ ಬಸ್ಸುಗಳು ನಮ್ಮಲ್ಲಿ ಹೇಗಾಗಿವೆ ಎಂದರೆ ಒಂದು ಬಸ್ಸಿನಲ್ಲಿ 38 ಮಂದಿ ಕೂಡುವಷ್ಟು ಸ್ಥಳವಿದ್ದರೆ ಸರ್ವೇ ಸಾಧಾರಣವಾಗಿ ಅಲ್ಲಿ 90 ಮಂದಿ 100 ಮಂದಿಯನ್ನೂ ಕೂಡಿಸುತ್ತಾರೆ. ಆದ್ದರಿಂದ ನಾವು ಬಸ್ಸುಗಳನ್ನು ಹೆಚ್ಚುಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಸಾಮಾನ್ಯ ಜನಗಳಿಗೆ ಎಷ್ಟು ತೊಂದರೆ ಎಂಬುದು ನಮ್ಮ ಅನುಭವಕ್ಕೆ ಬಂದಿದೆ. 38 ಮಂದಿ ಕುಳಿತುಕೊಳ್ಳುವಷ್ಟು ಸೀಟುಗಳು ಇರುವ ಬಸ್ಸಿನಲ್ಲಿ 100 ಮಂದಿಯನ್ನು ಹಾಕುತ್ತಾರೆ. ಮಕ್ಕಳು ಮರಿಗಳು ಮಧ್ಯೇ ಬರುವುದಕ್ಕೆ ತೊಂದರೆಯಾಗುತ್ತದೆ, ಜಾಗ ಸಿಕ್ಕುವುದಿಲ್ಲ. ಈ ದೃಷ್ಟಿಯಿಂದ ವಿಶೇಷವಾಗಿ ಸಾಮಾನ್ಯ ಜನಗಳಿಗೆ ಬಹಳ ತೊಂದರೆಯಾಗಿದೆ. ಬಸ್ಸುಗಳನ್ನು ಜಾಸ್ತಿ ಮಾಡಬೇಕು. ಒಂದು ವೇಳೆ ಸರ್ಕಾರದವರು ಹಾಗೆ ಮಾಡಲು ಸಾಧ್ಯವಾಗದೆ ಇದ್ದರೆ ಪ್ರೈವೇಟ್ ಬಸ್ಸುಗಳನ್ನು ಓಡಿಸಲು ಪರ್ಮಿಟ್ ಕೊಡಬೇಕು. ಮೈಸೂರು ಕರ್ನಾಟಕದಲ್ಲಿ ಬೆಂಗಳೂರು ಸಿಟಿಯಲ್ಲಿ ಯಾವ ರೀತಿ P.W.D. ರೋಡಿನ ಮೇಲೆ ಪ್ರೈವೇಟ್ ಬಸ್ಸುಗಳನ್ನು ಓಡಿಸಲು ಪರ್ಮಿಟ್ ಕೊಟ್ಟಿದ್ದಾರೋ ಹಾಗಾದರೂ ಕೊಟ್ಟು ಈಗ ಸಾಮಾನ್ಯ ಜನರಿಗೆ ಆಗತಕ್ಕ ತೊಂದರೆಗಳನ್ನು ತೀವ್ರವಾಗಿ ನಿವಾರಣೆ ಮಾಡಬೇಕು ಎಂದು ನಾನು ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅದಲ್ಲದೆ ನಮ್ಮ ಹೈದ್ರಾಬಾದ್ ಕರ್ನಾಟಕದಲ್ಲಿ ಮುಖ್ಯ ಮುಖ್ಯ ಸ್ಥಳಗಳಲ್ಲಿ ಬಸ್‌ಸ್ಟಾಂಡ್‌ಗಳಲ್ಲಿ ವೇಳಾ ಪತ್ರಿಕೆಗಳು ಇರುವುದಿಲ್ಲ. ನಮ್ಮ ಜಿಲ್ಲೆಯಲ್ಲಿಯೂ ವೇಳಾ ಪತ್ರಿಕೆ ಇಲ್ಲ. ಯಾರಾದರೂ ಬಂದರೆ ಬಸ್ಸುಗಳು ಯಾವ ಟೈಮಿಗೆ ಬರುತ್ತವೆ, ಯಾವ ಟೈಮಿಗೆ ಹೋಗುತ್ತವೆ ಎಂಬುದು ಗೊತ್ತಾಗುವುದಿಲ್ಲ. ವೇಳಾ ಪತ್ರಿಕೆಗಳು ನಮ್ಮ ಜಿಲ್ಲೆಯ ಮುಖ್ಯವಾದ ಸ್ಥಳಗಳಲ್ಲಿಯೇ ಇಲ್ಲ ಎಂದ ಮೇಲೆ ಇನ್ನು ತಾಲ್ಲೋಕುಗಳಲ್ಲಿರುವ ಬಸ್ ಸ್ಟಾಂಡುಗಳಲ್ಲಿ ಇರುತ್ತವೆಯೇ? ಆದ್ದರಿಂದ ನಮ್ಮ ಸರ್ಕಾರದವರು ಕನ್ನಡದಲ್ಲಿ ವೇಳಾ ಪತ್ರಿಕೆಯನ್ನು ಬರೆಯಿಸಿ ಪ್ರತಿಯೊಂದು ಗ್ರಾಮದಲ್ಲಿಯೂ ಜಿಲ್ಲೆಯಲ್ಲಿಯೂ ಇರತಕ್ಕ ಬಸ್ ನಿಲ್ದಾಣಗಳಲ್ಲಿ ಹಾಕುವಂತ ಏರ್ಪಾಡು ಮಾಡಿಕೊಡಬೇಕೆಂದು ಸರ್ಕಾರದವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಇದಲ್ಲದೆ ಸರ್ಕಾರಿ ಬಸ್ಸುಗಳ ಕಂಡಕ್ಟರುಗಳ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಏಕೆಂದರೆ ನಮ್ಮದು ಕರ್ನಾಟಕದೇಶ. ನಮ್ಮ ಕಂಡಕ್ಟರುಗಳಿಗೆಲ್ಲಾ ಕನ್ನಡ ಬರುತ್ತಿರುವುದಿಲ್ಲ. ಆದ್ದರಿಂದ ಅವರನ್ನು ಬೆಂಗಳೂರಿಗೆ ಟಿಕೆಟ್ ಕೊಡಿ ಎಂದು ಕೇಳಿದರೆ ಆ ಕಂಡಕ್ಟರಿಗೆ ಕನ್ನಡ ಸರಿಯಾಗಿ ಗೊತ್ತಾಗದೆ ಇರುವುದರಿಂದ ಬೇರೆ ಯಾವುದೋ ಊರಿಗೆ ಟಿಕೆಟ್ ಕೊಡುತ್ತಾರೆ. ಈತನಿಗೆ ಕನ್ನಡ ಬರುವುದಿಲ್ಲ. ಇದರಿಂದ ಹಳ್ಳಿಯವರಿಗೆ ಚೆನ್ನಾಗಿ ಗೊತ್ತಾಗುವುದಿಲ್ಲ. ಹೀಗಾಗಿ ಹಳ್ಳಿಯ ಜನರಿಗೆ ತುಂಬ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರಿ ಬಸ್ಸುಗಳಲ್ಲಿ ಕನ್ನಡಭಾಷೆ ಬರುವ ಕಂಡಕ್ಟರುಗಳನ್ನು ನೇಮಕ ಮಾಡುವಂತೆ ಏರ್ಪಾಡು ಮಾಡಿ ಜನಗಳಿಗೆ

(ಶ್ರೀ ಇ. ಪುಂಡಲೀಕಪ್ಪ)

ಇರತಕ್ಕಂಥ ಕುಂದು ಕೊರತೆಗಳನ್ನು ಹೋಗಲಾಡಿಸಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಪ್ರಯಾಣಿಕರಿಗೆ ದಾರಿಯೊಳಗೆ ಸರ್ಕಾರಿ ಬಸ್ ನಿರ್ದ್ದಾಣದಲ್ಲಿ ಕೂಡಲಿಕ್ಕೆ ಯಾವ ತರಹ ಅನುಕೂಲವೂ ಇಲ್ಲ. ಮಳೆ ಬಂದರೆ ಜನರು ಮಳೆಯಲ್ಲಿಯೇ ನಿಂತಿರಬೇಕು, ಬಿಸಿಲು ಬಂದರೆ ಬಿಸಿಲಿನಲ್ಲಿಯೇ ನಿಂತಿರಬೇಕು. ಇಂತಹ ಪರಿಸ್ಥಿತಿ ನಮ್ಮಲ್ಲಿದೆ. ಬಸ್ ನಿಲ್ದಾಣದಿಂದ ಎರಡು ಮೂರು ಬಸ್ ಸ್ಟ್ಯಾಂಡುಗಳ ಮಧ್ಯದಲ್ಲಿ ಜನರು ಬಂದು ಕೂಡಲಿಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು.

ಮತ್ತೊಂದು ವಿಚಾರ. ಕೆಲವು ಕಡೆ ಬಸ್ ಚಾರ್ಜ್ 1 ರೂ. 1 ಆಣೆ 1 ನಯಾಪೈಸಾ ಇದ್ದರೆ ಕಂಡಕ್ಟರುಗಳು ಜನಗಳಿಂದ 1 ರೂಪಾಯಿ 2 ಆಣೆಯನ್ನು ವಸೂಲು ಮಾಡುತ್ತಾರೆ. ಉಳಿದ ದುಡ್ಡನ್ನು ಜೇಬಿಗೆ ಹಾಕುತ್ತಾರೆ. ಇದರಿಂದ ಜನಗಳಿಗೆ ತೊಂದರೆ ಮತ್ತು ನಷ್ಟವಾಗುತ್ತದೆ. ಆದ್ದರಿಂದ ಇದನ್ನು ಸರಿಪಡಿಸಬೇಕು. ಬಸ್ಸುಗಳನ್ನು ಚೆಕ್ ಮಾಡತಕ್ಕ ಅಧಿಕಾರಿಗಳು ಸರಿಯಾಗಿ ಚೆಕ್ ಮಾಡುತ್ತಾ ಇಲ್ಲ. ಒಂದು ಸಾರಿ ನಾನು ರಾಯಚೂರಿನಿಂದ ತಾವರೆಗೆರೆಗೆ ಹೊರಟೆ. ಈ ಮಧ್ಯೆ ತಾವರೆಗೆರೆಗೆ ಬಸ್ ಬರುವುದರೊಳಗೆ ಚೆಕ್ ಮಾಡಬೇಕಾಗಿತ್ತು; ಯಾರೂ ಚೆಕ್ ಮಾಡಲಿಲ್ಲ. ಆದರೆ ಚೆಕ್ ಮಾಡುವ ಅಧಿಕಾರಿಗಳು ತಮ್ಮ ಟ್ರಾವಲಿಂಗ್ ಅಲೋಯನ್ಸ್ ಬಿಲ್ಲನ್ನು ಕಳುಹಿಸುತ್ತಾರೆ. ಇದರಿಂದ ನಮ್ಮ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತದೆ? ಆದ್ದರಿಂದ ಸರ್ಕಾರದವರು ಆಗಾಗ್ಯೆ ಬಸ್ಸುಗಳಲ್ಲಿ ಚೆಕ್ ಮಾಡುವ ವ್ಯವಸ್ಥೆಯನ್ನು ಏರ್ಪಾಟು ಮಾಡಬೇಕು. ಮಾನ್ಯ ಮಂತ್ರಿಗಳು ಆಗಾಗ್ಗೆ ಗ್ರಾಮಾಂತರ ಪ್ರದೇಶಗಳಿಗೆ ಪ್ರವಾಸ ಬಂದರೆ ಜನಗಳಿಗೆ ಎಷ್ಟು ಕಷ್ಟವಿದೆ ಎಂಬುದು ಚೆನ್ನಾಗಿ ಗೊತ್ತಾಗುತ್ತದೆ.

4 P.M.

ಇನ್ನು ಖಾಸಗಿ ಬಸ್ಸುಗಳ ವಿಚಾರದಲ್ಲಿ ಒಂದೆರಡು ಮಾತು. ನಮ್ಮ ಹೈದರಾಬಾದು ಕರ್ನಾಟಕದಲ್ಲಿ ಮರಾಮತ್ ಖಾತೆಯ ರಸ್ತೆಗಳು ಮೂರು ನಾಲ್ಕಿವೆ. ಉಳಿದುವುಗಳು ಖಾಸಗಿ ರಸ್ತೆಗಳು. ಅಲ್ಲಿ ಕೆಲವು ಖಾಸಗಿ ಬಸ್ಸುಗಳು ತಿರುಗಾಡುತ್ತವೆ. ಅದರಿಂದ ನಮಗೆಷ್ಟೋ ಸೌಕರ್ಯವಿದೆ. ಈಗ ಹೊಸ ಕರ ಹಾಕಿದ್ದಾರೆ; ಈ ರಸ್ತೆಗಳ ಮೇಲೆ ತಿರುಗುವ ಬಸ್ಸುಗಳಿಗೆ ತೆರಿಗೆ ಹಾಕಿದ್ದಾರೆ. ಹಿಂದೆ ಹೈದರಾಬಾದು ಕರ್ನಾಟಕದಲ್ಲಿ ಬಸ್ಸುಗಳಲ್ಲಿ ಒಂದು ಸೀಟಿಗೆ ವರ್ಷಕ್ಕೆ 12 ರೂಪಾಯಿಗಳ ಕರ ಇತ್ತು, ಈಗ ಹೊಸ ಕರದ ಪ್ರಕಾರ 120 ರೂಪಾಯಾಗುತ್ತದೆ. ಒಂದು ವರ್ಷಕ್ಕೆ 30 ಸೀಟುಗಳಿಗೆ 3,600 ರೂಪಾಯಿಗಳಾಗುತ್ತವೆ. 3,600 ರೂಪಾಯಿಗಳ ಕರ ಕೊಟ್ಟು ನಮ್ಮ ಕಡೆ ಬಸ್ಸುಗಳು ತಿರುಗಾಡುವುದಕ್ಕೆ ಸಾಧ್ಯವಿಲ್ಲ, ಬಸ್ಸುಗಳನ್ನು ನಿಲ್ಲಿಸಿ ಬಿಡುತ್ತಾರೆ. ಅದರಿಂದ ಹಳ್ಳಿಗಳ ಕಡೆ ತಿರುಗಾಡುವವರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ರಸ್ತೆಗಳಲ್ಲಿ ತಿರುಗುವ ಬಸ್ಸುಗಳ ಮೇಲೆ ಹಾಕುವ ತೆರಿಗೆ ಹೆಚ್ಚಿಸಿದರೆ ಬಹಳ ಕಷ್ಟ. ಹೈದರಾಬಾದು ಕರ್ನಾಟಕದಲ್ಲಿ ಸಾರ್ವಜನಿಕರ ಪ್ರವಾಸವು ಸರ್ಕಾರದ ಬಸ್ಸುಗಳಿಂದ ಸಾಕಷ್ಟು ಪೂರೈಸುತ್ತಿಲ್ಲ. ಸರ್ಕಾರದವರು ತಮ್ಮ ಬಸ್ಸುಗಳ ಸಂಖ್ಯೆಯನ್ನಾದರೂ ಹೆಚ್ಚಿಸಬೇಕು. ಅದು ಸಾಧ್ಯವಿಲ್ಲದಿದ್ದರೆ ಖಾಸಗಿಯವರಾದರೂ ಓಡಿಸಲು ಅವಕಾಶ ಕೊಡಬೇಕು. ಖಾಸಗಿ ರಸ್ತೆಗಳಲ್ಲಿ ಶ್ರೀಮತಿ ಬಸವರಾಜೇಶ್ವರಿಯವರು ಹೇಳಿದ ಹಾಗೆ ವರ್ಷದಲ್ಲಿ 7 ತಿಂಗಳು ಮಾತ್ರ ಬಸ್ಸುಗಳನ್ನು ಓಡಿಸಬಹುದು. ಉಳಿದ 5-6 ತಿಂಗಳು ರಸ್ತೆ ಸರಿಯಾಗಿರುವುದಿಲ್ಲ. ಆಗ ಸ್ವತಃ ಖಾಸಗಿಯವರೇ ರಸ್ತೆ ಸರಿಮಾಡಿಕೊಳ್ಳಬೇಕು; ವರ್ಷಕ್ಕೆ ಸಾವಿರಾರು ರೂಪಾಯಿಗಳ ಖರ್ಚಿದೆ. ಆದ್ದರಿಂದ ಹೈದರಾಬಾದ್ ಕರ್ನಾಟಕದಲ್ಲಿ ಕಚ್ಚಾ ರೋಡುಗಳ ಮೇಲೆ ಓಡಾಡುವ ಬಸ್ಸುಗಳಿಗೆ ತೆರಿಗೆ ಹೆಚ್ಚಿಸಬಾರದು.

ಅಲ್ಲದೆ ಈಗ ಖಾಸಗಿಯವರಿಗೆ ಒಬ್ಬಿಬ್ಬರಿಗೆ ಮಾತ್ರ ಬಸ್‌ಲೈನು ಕೊಡುತ್ತಾರೆ. ಹೆಚ್ಚು ಮಂದಿಗೆ ಕೊಡುವುದಿಲ್ಲ; ಇದು ಬಹಳ ತಪ್ಪು. ಸಾರ್ವಜನಿಕರಿಗೆ ಸೌಕರ್ಯ ಮಾಡಿ ಕೊಡಬೇಕು. ಸರ್ಕಾರಿ ಬಸ್ಸುಗಳನ್ನಾದರೂ ಹೆಚ್ಚಾಗಿ ಓಡಿಸಬೇಕು, ಇಲ್ಲದಿದ್ದರೆ ಖಾಸಗಿಯವರಿಗಾದರೂ ಹೆಚ್ಚಿಗೆ ಅವಕಾಶ ಕೊಡಬೇಕು. ಹಾಗೆ ಮಾಡಿ ಜನರಿಗೆ ಅನುಕೂಲ ಕಲ್ಪಿಸಬೇಕು. ಇಲ್ಲದಿದ್ದರೆ ತೊಂದರೆಯಾಗುವುದು. ಖಾಸಗಿಯವರು ಸರಿಯಾಗಿ ಫಾಯಿದೆ ಬಂದರೆ ಬಸ್ಸು ನಡೆಸುತ್ತಾರೆ, ಇಲ್ಲದಿದ್ದರೆ ಬಂದು ಮಾಡುತ್ತಾರೆ. ಆದ್ದರಿಂದ ಹೆಚ್ಚುಮಂದಿಗೆ ಲೈಸನುಕೊಟ್ಟರೆ ಸರ್ಕಾರಕ್ಕೆ ಏನೂ ತೊಂದರೆಯಾಗುವುದಿಲ್ಲ. ಕೇಳುವವರಿಗೆ ಪರವಾನಿಗೆ ಕೊಡಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ ಎಲ್ಲಿ ಯಾವ ಲೈನಿನಲ್ಲಿ ಎಷ್ಟುಮಂದಿ ಬೇಡುತ್ತಾರೆಂದು ನೋಡಿ, ಹೆಚ್ಚಾಗಿ ಜನರಿಗೆ ಅನುಕೂಲವಾಗುವ ಹಾಗೆ ಪರವಾನಗಿ ಕೊಡಲು ಏರ್ಪಾಡು ಮಾಡಿದರೆ ಒಳ್ಳೆಯದು.

ಈಗ ಬಸ್ಸುಗಳನ್ನು ಮೋಟಾರ್ ಸ್ಟ್ಯಾಂಡಿನಿಂದ ಕಛೇರಿ ಹತ್ತಿರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಬಹಳ ಹೊತ್ತು ನಿಲ್ಲಿಸುತ್ತಾರೆ. ಅಲ್ಲಿ ಗಲಾಟೆ ಜಾಸ್ತಿಯಾಗಿ ಜನರಿಗೆ ತೊಂದರೆಯಾಗುತ್ತದೆ. ಈ ತೊಂದರೆಯನ್ನು ಹೋಗಲಾಡಿಸಿ ಜನರಿಗೆ ನೆಮ್ಮದಿಯನ್ನುಂಟು ಮಾಡಬೇಕೆಂದು ವಿನಂತಿ ಮಾಡಿಕೊಂಡು ನಮ್ಮ ಸರ್ಕಾರದ ಡಿಮ್ಯಾಂಡನ್ನು ಸ್ವಾಗತಿಸಿ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಬೇಡಿಕೆಗಳ ಪೈಕಿ 1, 3, 4, 7, 8 ಈ ಬೇಡಿಕೆಗಳನ್ನು ವಿರೋಧಮಾಡುತ್ತಾ ನಾಲ್ಕು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಸ್ವಾಮಿ, ಈಗ ಎರಡು ದಿವಸಗಳಿಂದ ಈ ನಾಲ್ಕು ಬಾಬುಗಳಲ್ಲಿ ದೇಶಕ್ಕೆಷ್ಟು ತೊಂದರೆಯಾಗಿದೆ, ಸರ್ಕಾರಕ್ಕೆ ಬರತಕ್ಕಂಥ ಹಣ ಎಷ್ಟು ನಿಂತುಹೋಗಿಬಿಟ್ಟಿದೆ, ಸರ್ಕಾರವು ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ವೆಚ್ಚಮಾಡುವುದಕ್ಕೆ ಹಣವಿಲ್ಲದೆ ಎಷ್ಟುಮಟ್ಟಿಗೆ ಕಷ್ಟಕ್ಕೆ ಸಿಕ್ಕಿಕೊಂಡಿದೆ ಎಂಬುದನ್ನು ಅನೇಕ ಸ್ನೇಹಿತರು ಈ ಸಭೆಯಲ್ಲಿ ಹೇಳಿದ್ದಾರೆ. ರಾಜ್ಯದ ಎಕ್ಸೈಜು ಸುಂಕಗಳನ್ನು ನೋಡಿದರೆ ನನಗೆ ಭಾಸವಾಗುವುದೇನೆಂದರೆ ಸರ್ಕಾರದವರು ನಿಜವಾಗಿಯೂ ಈ ದೇಶವನ್ನು ಕಟ್ಟಬೇಕು. ಈ ದೇಶದಲ್ಲಿ ಅವರು ಹೇಳುತ್ತಿದ್ದಂತೆ ಸುಖೀರಾಜ್ಯವನ್ನು ಸ್ಥಾಪನೆಮಾಡಬೇಕು ಎಂದು ಮನಸ್ಸು ಮಾಡಿದ್ದರೆ ಈ ದಿವಸ ನಮ್ಮ ಮೇಲೇನು ತೆರಿಗೆ ಹಾಕಬೇಕೆಂದು ಮನಸ್ಸುಮಾಡಿದ್ದಾರೆಯೋ ಅದನ್ನು ಒತ್ತಟ್ಟಿಗಿಟ್ಟು ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ವಸೂಲುಮಾಡುತ್ತಿದ್ದರು. ಈಗತಾನೆ ಅರ್ಥ ಮಂತ್ರಿಗಳು ಅಲ್ಪ ಕಾಲಾವಧಿಯ ಪ್ರಶ್ನೆಗೆ ಉತ್ತರವಾಗಿ ಸ್ಮಾಲ್ ಸೇವಿಂಗ್ಸ್ ಮಾಡಬೇಕು, ಹಾಗೂ ಕಷ್ಟ ಬಂದರೆ ಓಪನ್ ಮಾರ್ಕೆಟ್ಟಿಗೆ ಹೋಗಬೇಕು ಎಂದೂ ಹಣಕಾಸಿನ ಪರಿಸ್ಥಿತಿ ನೋಡಿ ಎಷ್ಟೋ ಮನಸ್ಸು ನೋಯುತ್ತದೆ ಎಂದೂ ಹೇಳಿದರು. ಅಂಥ ಪರಿಸ್ಥಿತಿ

ಈ ದಿವಸ ಒದಗುತ್ತಿರಲಿಲ್ಲ. ಈ ತೆರಿಗೆಗಳನ್ನು ಎಂಥವರ ಹತ್ತಿರ ವಸೂಲುಮಾಡಿದ್ದಾರೆ, ವಸೂಲುಮಾಡುವ ಕಾನೂನು ಯಾರಿಗೆ ತೊಂದರೆ ಮಾಡುತ್ತಿದೆ ಎಂದರೆ ನಿಜವಾಗಿಯೂ ತಿಳಿವಳಿಕೆಯಿಲ್ಲದಿರುವ ಮನುಷ್ಯನನ್ನು ಬಾಧಿಸುತ್ತಿದೆಯೇ ಹೊರತು ತಿಳಿವಳಿಕೆಯಿರುವ ಮನುಷ್ಯ, ಈ ತೆರಿಗೆಕೊಡುವ ವಿಚಾರದಲ್ಲಿ ಬಹಳ ಖದೀಮನಾಗಿದ್ದಾನೆ, ಬಹಳ ಬುದ್ಧಿವಂತಿಕೆಯಿಂದ ಅದನ್ನು ತಡೆಗಟ್ಟಿ ಸರ್ಕಾರಕ್ಕೂ ಹಾಗೂ ಸಮಾಜಕ್ಕೂ ದ್ರೋಹಮಾಡುತ್ತಿದ್ದಾನೆ. ಇದನ್ನರಿತು ಸರ್ಕಾರದವರು ಸರಿಯಾದ ರೀತಿಯಲ್ಲಿ ಮನಸ್ಸು ಮಾಡಿ ಈ ದಿವಸ ಎಷ್ಟು ಹಣ ಎಕ್ಸೈಜು ಬಾಬಿನಿಂದ ಬರಬೇಕೋ ಅದನ್ನು ಕೂಡಲೆ ವಸೂಲುಮಾಡುವುದಕ್ಕೆ ಪ್ರಯತ್ನಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಮೊನ್ನೆತಾನೆ ಅರ್ಥ ಮಂತ್ರಿಗಳು ಹೇಳುತ್ತಿದ್ದರು, “ನೀವು ಬರುತ್ತೀರಿ, ಏನು ಮಾಡಬೇಕು? ಅವರು ಬರುತ್ತಾರೆ, ಕಷ್ಟವಾಗುತ್ತದೆ, ಏನುಮಾಡಬೇಕು” ಎಂದು ಅಂಥ ಇಂಟರ್‌ಫೀಯರೆನ್ಸ್ ಯಾವ ಸಂದರ್ಭದಲ್ಲೂ ಇರಬಾರದು. ಸರ್ಕಾರದವರು ಕಾನೂನಿನ ಪ್ರಕಾರ ವಸೂಲುಮಾಡಬೇಕು. ಬೇಕಾದ ಕೆಲವರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅಧಿಕಾರವನ್ನು ದುರುಪಯೋಗಮಾಡಿಕೊಂಡು ಯಾವುದೇ ತತ್ತ್ವಬಿಟ್ಟು ಸರ್ಕಾರಕ್ಕೆ ಬರುವ ಹಣ ತಡೆಗಟ್ಟಿ ದೇಶಕ್ಕೆ ತೊಂದರೆ ಮಾಡುವ ಕೆಲಸದಲ್ಲಿ ತೊಡಗಿ ಪ್ರಗತಿ ಕುಂಠಿತಮಾಡಲು ಅಧಿಕಾರಿಗಳ್ಯಾರೂ ಕೈಹಾಕಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಚಾರ: ಈ ದಿವಸ ಎಕ್ಸೈಜು ಸುಂಕದಲ್ಲಿ ಇಷ್ಟು ದೊಡ್ಡ ಭಾರಿಮೊತ್ತ ಫಾಲ್ ಆಗುವುದಕ್ಕೆ ಕಾರಣವೇನು ? ಅದಕ್ಕೆ ನೀವು ಅನುಸರಿಸಿದ ನೀತಿ ಅಥವಾ ತತ್ತ್ವವೇ ಕಾರಣವೆಂದು ತಿಳಿದುಕೊಂಡಿದ್ದೇನೆ. ಸರ್ಕಾರಕ್ಕೆ ಕಾರಣ ಈಗ ಗೊತ್ತಿ ದೆ. ನಮ್ಮ ಅಧಿಕಾರಿಗಳಲ್ಲಿ ವ್ಯತ್ಯಾಸವಿದ್ದರೆ, ಕಚ್ಚಾಟವಿದ್ದರೆ ದೇಶಕ್ಕೆ ಬರುವ ಆದಾಯ ತಡೆಗಟ್ಟುವ ಕಾರ್ಯದಲ್ಲಿ ದೇಶದ್ರೋಹಮಾಡುವ ಕಾರ್ಯದಲ್ಲಿ ಯಾರೂ ಆ ಕಾರಣದಿಂದ ಕೈಹಾಕಬಾರದು. ಹಾಕಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಾರ್ಥಿಸುತ್ತೇನೆ. ಮೊನ್ನೆ ಈ ಸಭೆಯಲ್ಲಿ ಎಕ್ಸೈಜು ಶಾಖೆಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಅಷ್ಟು ರೆವೆನ್ಯೂ ಬಿದ್ದುಹೋಗಿಲ್ಲ ಎಂದು ಮೂರು ನಾಲ್ಕು ವರ್ಷದ ಕಂಪ್ಯಾರಿಟಿವ್ ಸ್ಟೇಟ್‌ಮೆಂಟ್ ಕೊಟ್ಟರು. ಆ ಸ್ಟೇಟ್‌ಮೆಂಟ್ ಸತ್ಯದಿಂದ ಬಹಳ ದೂರವಾಗಿದೆ, ಸರಿಯಲ್ಲ ಎಂಬುದು ನನ್ನ ಭಾವನೆ ಎಂದು ಮತ್ತೆ ಈ ಸಭೆಯ ಮುಂದೆ ಹೇಳುತ್ತೇನೆ.

Sri M. MOHAMED ALI (Minister for Excise).—I will request the Hon'ble Member to substantiate by facts and figures that the statement given by the Government is wrong.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂತ್ರಿಗಳು ಕೊಟ್ಟಿರುವ ಸ್ಟೇಟ್‌ಮೆಂಟ್ ನಮ್ಮ ಮುಂದಿದೆ. ಅದರ ಪ್ರಕಾರ ರೆವೆನ್ಯೂ ಫಾಲ್ ಆಗಿದೆಯೆಂಬುದನ್ನು ಅವರು ಒಪ್ಪುತ್ತಾರೆ.

ಮಾರಾಟ ತೆರಿಗೆಯನ್ನು ವಸೂಲುಮಾಡತಕ್ಕಂಥ ಇಲಾಖೆಯವರು ನಿಜವಾಗಿಯೂ ಏಕೆ ಇಷ್ಟೆಲ್ಲಾ ಮಾಡುತ್ತಿದ್ದಾರೆಂದರೆ ತಮ್ಮ ಸೀನಿಯಾರಿಟಿ ವಿಚಾರ ತೀರ್ಮಾನ ಮಾಡುವಾಗ ಮೇಲಿದ್ದವರಲ್ಲಿ ಕೆಲವರನ್ನು ಕೆಳಗೆ ಹಾಕಿ ಕೆಳಗಿನವರನ್ನು ಮೇಲಕ್ಕೆ ಹಾಕಿದ್ದಾರೆ, ಈ ರೀತಿ ಮಾಡಿ ಸರ್ಕಾರಕ್ಕೆ ಬರುವ ಹಣಕಾಸನ್ನು ತಡಗಟ್ಟಿದರೆ ಆಗ ಸರ್ಕಾರ ನಮ್ಮ ವಿಚಾರ ಯೋಚನೆ ಮಾಡಬಹುದು ಎಂದು ಅತೃಪ್ತಿ ಅಸಮಾಧಾನಗಳಿಂದ ಸರ್ಕಾರಕ್ಕೆ ಬರುವ ಹಣವನ್ನು ಹೇಗಾದರೂಮಾಡಿ, ಫೋಲುಮಾಡಲು ಪ್ರಯತ್ನಮಾಡಿ, ಬಾರದಹಾಗೆ ಮಾಡಿ ಮಂತ್ರಿಮಂಡಲಕ್ಕೆ ಬಿಕ್ಕಟ್ಟು ತಂದೊಡ್ಡಬೇಕು ಎಂದು ಭಾವನೆಮಾಡಿದ್ದಾರೆಂದು ಕಾಣುತ್ತದೆ. ಸರ್ಕಾರ ಆ ಕಡೆ ನಿಗಾಕೊಡಬೇಕು. ಏಕೆ ಹೀಗಾಗಿದೆಯೆಂದು ನೋಡಿ ಅದಕ್ಕೆ ಸರಿಯಾದ ಕಾರ್ಯಕ್ರಮ ಕೈಕೊಳ್ಳಬೇಕು.

ಇಷ್ಟನ್ನು ಹೇಳಿ ಇನ್ನು ರೋಡು ಟ್ರಾನ್ಸ್‌ಪೋರ್ಟಿಗೆ ಹೋಗುತ್ತೇನೆ.

ಒಬ್ಬ ಸದಸ್ಯರು.—ರೋಡ್ ಟ್ರಾನ್ಸ್‌ಪೋರ್ಟು ಈಗ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಮೋಟಾರು ವೆಹಿಕಲ್ಸ್ ಟ್ಯಾಕ್ಸೇಷನ್ನಿನ ಮೇಲೆ ಮಾತನಾಡುವಾಗ ಇದನ್ನು ಏಕೆ ಹೇಳುತ್ತೇನೆಂಬುದನ್ನು ನನ ಸ್ನೇಹಿತರು ಸ್ವಲ್ಪ ಸಾವಧಾನದಿಂದ ಕೇಳಬೇಕೆಂದು ಕೋರುತ್ತೇನೆ.

ಈ ವೆಹಿಕಲ್ ಟ್ಯಾಕ್ಸೇಷನ್ನಿನ ವಿಚಾರದಲ್ಲಿ ಸರಕಾರದವರು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಉದಾಹರಣೆಗಾಗಿ ಒಂದು ವಿಷಯವನ್ನು ಹೇಳುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಆರು ಬಸ್ಸುಗಳನ್ನು, ಈಗ ಮೂರು ವರ್ಷಗಳಿಂದಲೂ ಟ್ಯಾಕ್ಸ್ ಕೊಡದೆ ನಡೆಸುತ್ತಿದ್ದಾರೆ. ಹಾಗೆ ಟ್ಯಾಕ್ಸನ್ನು ಕೊಡದಿದ್ದರೂ ಈ ಬಸ್ಸುಗಳು ಇವೊತ್ತಿನವರೆಗೂ ನಡೆಯುತ್ತಲೇ ಇವೆ. ಇದು ಪೋಲೀಸಿನವರ ಸಹಾಯದಿಂದಲೇ ನಡೆಯುತ್ತಿದೆ. ಈ ವಿಚಾರದಲ್ಲಿ ನಾನು ಡೆಪ್ಯುಟೀ ಕಮಿಷನರಿಗೆ ತಿಳಿಸಿದ್ದೇನೆ. ಅಲ್ಲದೆ ಡಿ.ಎಸ್.ಪಿ. ಯವರಿಗೂ ತಿಳಿಸಿದ್ದೇನೆ ಮತ್ತು ಈ ಬಸ್ಸುಗಳಿಂದ ಟ್ಯಾಕ್ಸನ್ನು ವಸೂಲುಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದ್ದೆ. ಅಲ್ಲದೇ ಇದೇ ಒಂದು ಸಂದರ್ಭದಲ್ಲಿ ಸರ್ಕಾರದ ಹಣ ಪೋಲಾಗುತ್ತಿದೆ ಎಂದು ನಾನು ಹಿಡಿದುಕೊಟ್ಟಿರುವ ಕೇಸಿನ ವಿಷಯದಲ್ಲಿ ಇಲ್ಲಿಯವರೆಗೂ ಯಾವರೀತಿಯಾದ ಕ್ರಮ ತೆಗೆದುಕೊಂಡರೋ ಗೊತ್ತಾಗಲಿಲ್ಲ. ಹೀಗಾಗಿರುವುದರಿಂದ ಸರ್ಕಾರಕ್ಕೆ ಸುಮಾರು ಒಂದು ಲಕ್ಷ ಇಪ್ಪತ್ತುಸಾವಿರ ರೂಪಾಯಿಗಳ ಹಣ ಬರುವುದು ನಷ್ಟವಾಯಿತು. ಇದಕ್ಕೆ ಕಾರಣ ಈ ಪೋಲೀಸು ಇಲಾಖೆ ಮತ್ತು ಈಗಿರುವ Regional Transport Authority.

ಶ್ರೀ ಟಿ. ಮರಿಯಪ್ಪ.—ಸ್ವಲ್ಪ ತಾವು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಇದ್ದರೆ pass on ಮಾಡುತ್ತೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೊಡುತ್ತೇನೆ. ಸ್ವಾಮೀ. ಅದಕ್ಕಾಗಿ ನನಗೆನಿಸುತ್ತದೆ, ಈ ಮೋಟಾರು ವೆಹಿಕಲ್ಸ್ ಟ್ಯಾಕ್ಸನ್ನು ವಸೂಲುಮಾಡುವಾಗ ಅದರಲ್ಲಿ ಬಹಳ ಗುರುತರವಾದ ಜವಾಬ್ದಾರಿಯಿರಬೇಕು ಎಂದು. ಇವೊತ್ತು ಹೇಗಾಗಿದೆ ಎಂದರೆ, ಪೋಲೀಸಿನವರೂ ರೀಜನಲ್ ಟ್ರಾನ್ಸ್ ಪೋರ್ಟು ಅಥಾರಿಟಿಯವರಿಬ್ಬರೂ ಸೇರಿಕೊಂಡು ಕೆಲಸಮಾಡುತ್ತಿದ್ದಾರೆ. ಎಲ್ಲಾದರೂ ಒಂದು Inspectionಗಾಗಿ ಈ Regional Transport Authorityಯ ಅಧಿಕಾರಿಗಳು ಬಂದರೆ ಒಂದು ಟಿ. ಬಿ. ಯಲ್ಲಿ ಇಳಿದುಕೊಳ್ಳುತ್ತಾರೆ. ಅವರು ಬಂದೊಡನೆಯೇ ಪೋಲೀಸಿನಲ್ಲಿರುವ ಒಬ್ಬ Inspector ಬಂದು ಇವರ ಊಟ ಉಪಚಾರಗಳಿಗೆ ಏರ್ಪಾಡುಮಾಡಿರುತ್ತಾರೆ. ಅದನ್ನೂ ಉಪಯೋಗಿಸಿಕೊಂಡು ಬರುವ ಮಾಮೂಲನ್ನೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ).

ವಸೂಲುಮಾಡಿಕೊಂಡು ವಾಪಸು ಬೆಂಗಳೂರಿಗೆ ಬರುತ್ತಾರೆ. ಹೀಗೆ ಸರ್ಕಾರ ನಡೆಯುತ್ತಿದೆ. ಸರ್ಕಾರಿ ಅಧಿಕಾರಿಗಳೂ ಏನಾದರೂ ಕೆಲಸಮಾಡದೆ ಹೋದರೆ ಮತ್ತು ಸರ್ಕಾರಕ್ಕೆ ಬರುವ ಹಣವನ್ನು ಕೊಡದೆ ಹೋದರೆ ಅಂತಹ ಅಧಿಕಾರಿಗಳನ್ನು ಏತಕ್ಕಾಗಿ ಇಟ್ಟುಕೊಂಡಿದ್ದೀರಿ ಎಂದು ಕೇಳಬೇಕಾಗಿದೆ ಅವರನ್ನು ಕೂಡಲೆ ಸಸ್ಪೆಂಡು ಮಾಡಬೇಕು. ಎಂದು ಹೇಳಿದರೆ ಅವರಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಆದರೆ ಕೇವಲ ಕಡಮೆ ಸಂಬಳ ಬರುವ ಎಂದರೆ 25 ಅಥವಾ 40 ರೂಪಾಯಿಗಳು ಬರುವ ಗುಮಾಸ್ತರುಗಳು ಏನಾದರೂ ಸ್ವಲ್ಪ ತಪ್ಪು ಮಾಡಿದರೆ ಅವರನ್ನು ಕೂಡಲೇ ಸಸ್ಪೆಂಡುಮಾಡುತ್ತಾರೆ. ಹೀಗಿದೆ ಪರಿಸ್ಥಿತಿ. ಆದರೆ ಈಗ ಬಸ್ಸನ್ನು ಇನ್‌ಸ್ಪೆಕ್ಟುಮಾಡುವ ಸಬ್ ಇನ್‌ಸ್ಪೆಕ್ಟರುಗಳು, ಇನ್ಸ್‌ಪೆಕ್ಟರುಗಳು ಇವರು ಇಷ್ಟೊಂದು fatten ಆಗಲು ಸರ್ಕಾರದ ನೀತಿಯೇ ಕಾರಣ. ಸರ್ಕಾರ ಗುರುತರವಾದ ಭಾರವನ್ನು ಹಾಕಿಲ್ಲ. ಆದಕಾರಣ ಈರೀತಿಯಾದ ಕೆಡಕುಗಳು (evil) ತಲೆಹಾಕಿವೆ. ಕೂಡಲೇ ಈ ಕೆಡಕು (evil) ಗಳನ್ನು ಪರಿಹರಿಸುವುದಕ್ಕೆ ಪ್ರಯತ್ನಪಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

ಇನ್ನು overload ನ ವಿಚಾರ: ಈ ವಿಷಯದಲ್ಲಿ ಕೇಳಲೇಬೇಕಾಗಿಲ್ಲ. ಒಂದು ರೂಟು ಸುಮಾರು 80 ಮೈಲಿಗಳಿರುವುದರಿಂದ ಒಬ್ಬರಿಗೇನೇ ಮನೋಪಾಲಿಯಾಗಿ ಹೋಗಿದೆ. ಈ ರಸ್ತೆಯಲ್ಲಿ ಒಂದೇ ಒಂದು ಪೋಲೀಸು ಸ್ಟೇಷನ್ನಿದೆ. ಅಲ್ಲಿರುವ ಸಬ್ ಇನ್ಸ್‌ಪೆಕ್ಟರಿಗೆ 100 ರೂಪಾಯಿಗಳು ಇನ್ಸ್‌ಪೆಕ್ಟರಿಗೆ 250 ರೂಪಾಯಿಗಳು ಮತ್ತು ದಫೇದಾರರಿಗೆ 50 ರೂಪಾಯಿಗಳು ಹೀಗೆ ಮಾಮೂಲಾಗಿ ಬರುತ್ತಿದೆ. ಇಲ್ಲಿ ಒಟ್ಟು ಆರು ಬಸ್ಸುಗಳನ್ನು ಒಬ್ಬರೇ ಒಬ್ಬರು run ಮಾಡುತ್ತಿದ್ದಾರೆ.

ಇದನ್ನು Regional Transport Authority ಯವರಾಗಲೀ ರೋಡು ಟ್ರಾನ್ಸ್‌ಪೋರ್ಟ್ Commissioner ಆಗಲೀ ಸ್ಟಾಫ್ ಆಗಲೀ ಯಾರೂ check ಮಾಡಿಲ್ಲ. ಅಲ್ಲದೆ ಪರ್ಮಿಟ್ಟೇ ಇಲ್ಲದೆ ಒಂದು ಬಸ್ಸು 60 ಮೈಲಿಗಳ ದೂರ ಎಂದರೆ ಶಿರಾದಿಂದ ಪಾವಗಡ ತಾಲ್ಲೂಕು ಹೊಸಕೋಟೆಯವರೆಗೆ ಓಡಾಡುತ್ತಿದೆ. ಅಲ್ಲದೆ ಈ ಬಸ್ಸುಗಳಲ್ಲಿ ಒಳಗೆ ಹೋಗಿ ನೋಡಿದರೆ ಜನಗಳು ಅನುಭವಿಸುತ್ತಿರುವ ಕಷ್ಟ ಬಹಳ ಚೆನ್ನಾಗಿ ತಿಳಿಯುತ್ತದೆ. ಅಲ್ಲದೆ ಈ Passenger Busಗಳಲ್ಲಿ insure ಮಾಡಿಕೊಡಬೇಕು. ಅಂತಹ Rickety Buses ಗಳಾಗಿವೆ. ಆದರಲ್ಲಿಯೂ ಇಂತಹ ಹಳೆಯ ಬಸ್ಸುಗಳಲ್ಲಿ ಜನಗಳು ಅನುಭವಿಸುತ್ತಿರುವ ತೊಂದರೆಗಳನ್ನು ನೋಡಿದರೆ ನಿಜವಾಗಿಯೂ ಬಹಳ ದುಃಖವಾಗುತ್ತದೆ. ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಒಂದು ಭಾರಿ ಜಾತ್ರೆಯಾಗುತ್ತದೆ. ಆ ಜಾತ್ರೆಗೆ ನಾನು ಮೇಲೆ ಹೇಳಿದ ಬಸ್ಸು ಪ್ರೊಪ್ರೈಟರ್ 14 ಟ್ರಿಪ್ಪಿಗೆ ಪರ್ಮಿಟ್ಟು ತೆಗೆದುಕೊಂಡು 140 ಟ್ರಿಪ್ ಹೊಡೆದರೂ ಯಾರೂ ಕೇಳುವವರೇ ಇಲ್ಲ. 14 Tripಗಳ ಮೇಲೆ ಹೋಗುವ ಹಾಗಿಲ್ಲ ಎಂದು permitನಲ್ಲಿ ಏನೋ ಇದೆ. ಆದರೆ ನೂರಾರು ಟ್ರಿಪ್‌ಗಳನ್ನು ಮಾಡಿದರೂ ಅದಕ್ಕೇನೂ check ಇಲ್ಲ. ಅಲ್ಲದೆ ಹೇಗೆ irresponsible ಆಗಿ ಹೀಗೆ ಪರ್ಮಿಟ್ಟುಗಳನ್ನು ಕೊಡುತ್ತಾರೆ ಎಂಬುದನ್ನು ಸರಕಾರ ಸರಿಯಾಗಿ ಪರಿಶೀಲಿಸಿ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೆ ನಮ್ಮ ಗೃಹಮಂತ್ರಿಗಳಿಗೆ ಈ ಮೋಟಾರು ವೆಹಿಕಲ್ ಟ್ಯಾಕ್ಸನ್ನು ಕಲೆಕ್ಟುಮಾಡುವ ಕಾರ್ಯ ಸೇರಿದುದು. ಇದರಿಂದ ಯಾರು ಯಾರು ಈ ಮೋಟಾರು ವಾಹನಗಳ ತೆರಿಗೆಯನ್ನು ಸರಿಯಾಗಿ ಪಾವತಿಮಾಡಿದ್ದಾರೆ, ಯಾರು ಕೊಟ್ಟಿಲ್ಲ ಎಂಬುದು ತಿಳಿಯುತ್ತದೆ. ಹೀಗೆ ಟ್ಯಾಕ್ಸನ್ನು ಕೊಡದಿರುವವರ ಲೈಸೆನ್ಸನ್ನೂ ಸಸ್ಪೆಂಡು ಮಾಡಬೇಕು, ಮತ್ತು ಅಂತಹವರಮೇಲೆ ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಈ Motor Vehicles ವಿಚಾರವಾಗಿ ಹೇಳುತ್ತೇನೆ. ಹತ್ತು ಬಸ್ಸುಗಳು ಹೋಗುವ ಕಡೆ ಎರಡು ಬಸ್ಸುಗಳಿಗೆ Permit ಕೊಟ್ಟಿದ್ದಾರೆ. ಎರಡೇ ಬಸ್ಸುಗಳಿರುವುದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಇನ್ನೂ ಹೆಚ್ಚಿನ ಬಸ್ಸುಗಳನ್ನು ಹಾಕಿದರೆ ಅದರಿಂದ ರೋಡು ಟ್ಯಾಕ್ಸು ಹೆಚ್ಚಾಗಿ ನಮಗೆ ಅಷ್ಟು ಹಣ ಹೆಚ್ಚಾಗಿ ಬರುವ ಅವಕಾಶವಿದೆ. ಇನ್ನೂ ಕೆಲವು ಕಡೆ ಹತ್ತು ಬಸ್ಸುಗಳು ಹೋಗಲು ಪರ್‌ಮಿಷನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ಹೆಚ್ಚಿನ ಬಸ್ಸುಗಳ ಅವಶ್ಯಕೆಯಿರುವ ಕಡೆ ಈ ರೀತಿ ಬಸ್ಸುಗಳು ಓಡಾಡಲು ಸಹಾಯಮಾಡಿದರೆ ಅಲ್ಲಿನ ಜನಗಳಿಗೆ ಅನುಕೂಲವಾಗುತ್ತದೆ. ಅಲ್ಲದೆ ಇದರಲ್ಲಿ ಕೂಡ Political interference ಇರುವ ಹಾಗೆ ಕಾಣುತ್ತದೆ. ಅಷ್ಟೇ ಅಲ್ಲ. ಸರಕಾರದವರು ಈಗ ಎಲ್ಲ ಕಡೆಗಳಲ್ಲಿಯೂ ಬಸ್ಸುಗಳನ್ನು ನಡೆಸುತ್ತಿಲ್ಲ. ಎಲ್ಲ ನಡೆಸುತ್ತಿಲ್ಲವೋ ಅಲ್ಲಿ ಈ ರೀತಿಯಾಗಿ Private ಬಸ್ಸುಗಳನ್ನು ನಡೆಸುವುದಕ್ಕೆ ಅವಕಾಶ ಕೊಡಬೇಕು. ಇಂತಹ ಕಡೆಗಳಲ್ಲಿ Bus Permitನ್ನು ಏಕೆ ಕೊಡಬಾರದು ಎಂದು ಕೇಳುತ್ತೇನೆ. ಒಂದು ನಿದರ್ಶನ ಹೇಳಬೇಕಾಗಿದೆ. ಮಧುಗಿರಿಯಿಂದ ತುಮಕೂರಿಗೆ ಒಂದು ದಿನಕ್ಕೆ 26 ಸರ್ವಿಸುಗಳು ಬರುತ್ತಿವೆ. ಇನ್ನೂ 16 ಸರ್ವಿಸ್ಸುಗಳನ್ನು ಹೆಚ್ಚಾಗಿ ಹಾಕಿದರೂ ಅಷ್ಟಕ್ಕೂ ಲೋಡು ಇರುತ್ತದೆ. ಮಧುಗಿರಿಯಿಂದ ತುಮಕೂರಿಗೆ ದಿನಕ್ಕೆ 20 ಲಾಯರುಗಳು ಬರುತ್ತಾರೆ. ನೂರಾರು ಜನ clients ಬರುತ್ತಾರೆ. ಅಲ್ಲದೆ ದಾರಿಯಲ್ಲಿ ಈ ಬಸ್ಸುಗಳಿಗಾಗಿ ಸುಮಾರು ಎರಡು ಮೂರು ಗಂಟೆಗಳ ಕಾಲ ಕಾದಿದ್ದರೂ ಕೂಡ ಸೀಟುಸಿಕ್ಕದೆ ತೊಂದರೆಯಾಗುತ್ತಿದೆ. ಆದರಿಂದ ಇಂತಹ ಕಡೆಗಳಲ್ಲಿ ಹೆಚ್ಚಿನ ಬಸ್ಸುಗಳಿಗೆ ಪರ್ಮಿಟ್ಟು ಕೊಟ್ಟರೆ ರೈತಾಪಿ ಜನಗಳು ಬಂದು ಹೋಗಲು ಅನುಕೂಲವಾಗುತ್ತದೆ. ಇದಕ್ಕೋಸ್ಕರ ಈ ನೂಕುನುಗ್ಗಲು ಆಗದಿರುವಂತೆ ಮಾಡಲು ಸರಕಾರ ಪರ್ಮಿಟ್ಟು ಕೊಟ್ಟರೆ ಆದಾಯವೂ ಹೆಚ್ಚಾಗುತ್ತದೆ. ಒಂದು ದೃಷ್ಟಿಯಿಂದ ಜನಗಳಿಗೆ relief ಕೊಟ್ಟಂತೆಯೂ ಆಗುತ್ತದೆ. ಆದುದರಿಂದ ನಮ್ಮ Regional Transport Authority ಮತ್ತು State Transport Authorityಯವರು ಇವನ್ನೆಲ್ಲ ಪರಿಶೀಲನೆಮಾಡಿ ಹೆಚ್ಚಿಗೆ ಬಸ್ಸುಗಳನ್ನು ಓಡಿಸಲು ಪರ್ಮಿಷನ್ನು ಕೊಡಬೇಕೆಂದು ನಾನು ಸರಕಾರವನ್ನು ಕೇಳಿಕೊಳ್ಳುತ್ತೇನೆ. 80 ಮೈಲಿಗಳ monopolyಯಾಗಿದೆ. ಇವೊತ್ತು ಹತ್ತು ಬಸ್ಸುಗಳ ಸರ್ವಿಸುಗಳನ್ನು ನಡೆಸಲು ಶಕ್ಯವಿದೆ. ಇವೊತ್ತಿನ ದಿವಸ ಸರಕಾರಿ ಬಸ್ಸುಗಳನ್ನು ಈ ಲೈನುಗಳಲ್ಲಿ ನಡೆಸಿದ್ದರೆ ಮೈಲಿಗೆ 1-9-3 ಯಂತೆ ಆದಾಯ ಸರಕಾರಕ್ಕೆ ಬರುತ್ತಿತ್ತು. ಆದರೆ Political influences ನಿಂದ ಆ ರೀತಿಯಾದ ಆದಾಯ ಬರುವುದು ಸರ್ಕಾರಕ್ಕೆ ಈಗ ನಿಂತುಹೋಗಿದೆ. ಇದನ್ನೂ ಸರಿಯಾಗಿ ಪರಿಶೀಲಿಸಬೇಕು.

ಒಂದು ವಿಷಯವನ್ನು ದುಃಖದಿಂದ ಹೇಳುತ್ತೇನೆ. ನಮ್ಮ ಈ Regional Transport Authority ಶಾಖೆ ಹಿಂದೆ ಗೃಹ ಸಚಿವರಾಗಿದ್ದ ಶ್ರೀಮಾನ್ ಸಿದ್ಧವೀರಪ್ಪ ಅವರ ಕಾಲದಲ್ಲಿ ಕೆಟ್ಟುಹೋದಷ್ಟು ಇನ್ನಾವ ಕಾಲದಲ್ಲಿಯೂ ಆಗಿರಲಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಮೈಲಿಗೆ ಒಂದು ರೂಪಾಯಿ ಒಂಭತ್ತಾಣೆ ಆದಾಯವನ್ನು ತರುವ ಇಂಥ ರೂಟಿನಲ್ಲಿ ಎರಡು ಬಸ್ಸುಗಳನ್ನು ನಿಲ್ಲಿಸಿದರು. ಕಂಡಕ್ಟರು ಡ್ರೈವರುಗಳಿಗೆ ಹೇಳಿಕೊಟ್ಟು ಸುಳ್ಳು ಬರೆಸಿದರು . . .

ಅಧ್ಯಕ್ಷರು.—ಸಿದ್ಧವೀರಪ್ಪ ಅವರು ಎಂದು ಹೇಳಿದುದನ್ನು ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಳ್ಳಬೇಕು. ಹೋಂ ಮಿನಿಸ್ಟರ್ ಎಂದು ಹೇಳಬಹುದು, ಹೆಸರು ಹೇಳಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗೆಯೇ ಆಗಲಿ, ಸ್ವಾಮಿ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಲ್ಲಿ ಸರ್ಕಾರಕ್ಕೆ ಬರಬಹುದಾದ ಹಣ ಹೋಗುತ್ತಿದೆ. ಮೋಟಾರು ಬಸ್ಸುಗಳಿಗೆ ವಿನಾಯಿತಿ ಕೊಡಬೇಡಿ. ಹಿಂದೆ ಸುಲಭವಾಗಿ ತಮಗೆ ಬೇಕಾದಷ್ಟು ಲೈಸೆನ್ಸ್‌ಗಳನ್ನು ತೆಗೆದುಕೊಂಡು ಲಾಭಪಡೆದು ಸುಖವನ್ನನುಭವಿಸಿದ್ದಾರೆ. ಇಂಥವರಿಗೆ ಈಗ ವಿನಾಯಿತಿ ಕೊಡಬೇಡಿ. ಹಿಂದೆ ಒಂದು ಮೋಟಾರು ಅಥವಾ ಬಸ್ ಇಟ್ಟಿದ್ದವರು ಈಗ ನಾಲ್ಕಾರು, ಹತ್ತಾರು ಇಟ್ಟಿದ್ದಾರೆ. ಇವರಿಗೆ ಯಾವ ವಿನಾಯಿತಿಯನ್ನೂ ಕೊಡಬೇಡಿ. ಬಸ್ಸಿನವರಿಗೆ ವಿನಾಯಿತಿ ಕೊಡುವ ಔದಾರ್ಯವನ್ನು ತೋರಿಸಬೇಡಿ. ಬಸ್ ತುಂಬಿದರೆ, ನೂರು ಜನರನ್ನು ಟಾಪ್‌ಮೇಲೆ, ನೂರು ಜನರನ್ನು ಎಂಜಿನ್‌ಬಾನೆಟ್‌ನೊಳಗೆ ಹೀಗೆಲ್ಲಾ, ಜನರನ್ನು ತುಂಬಿಕೊಂಡು ಹೋಗುತ್ತಿದ್ದಾರೆ.

ಸರ್ಕಾರದವರು ಎಷ್ಟೇ ಹೇಳಿದರೂ ಕೂಡ, ಅವರು ಕೇಳಿರುವ ಹಣ ಬಹಳ ಜಾಸ್ತಿ. ಆದಾಯ ಹೆಚ್ಚು ತೋರಿಸಿ ಇನ್ನೂ ಎರಡು ಲಕ್ಷ ಹೆಚ್ಚಾಗಿ ಕೊಡಿ ಎಂದು ಕೇಳಿದರೆ, ಸಂತೋಷ. ಆದರೆ ಆದಾಯ ಕಡಮೆ ತೋರಿಸಿ, ಖರ್ಚಿಗಾಗಿ ಹೆಚ್ಚು ಹಣಕೊಡಿ ಎಂದು ಕೇಳುವುದು ಸರಿಯಲ್ಲ. ಬಡವರು ಕೋರ್ಟಿಗೆ ಹೋಗಿ ಕೊಡಬೇಕಾದ ಸ್ಟಾಂಪ್‌ಮೇಲೆ ತೆರಿಗೆ ಕಡಮೆ ಮಾಡಬೇಕು. ಜನರಿದ್ದರೆ ರಾಜ್ಯ ; ರಾಜ್ಯವಿದ್ದರೆ, ಸರ್ಕಾರ. ಹಾಗಿಲ್ಲದೆ ಬರಿಯ ಮರಗಳು ಕಲ್ಲುಗಳಿದ್ದರೆ ಸರ್ಕಾರವಿರುವುದಿಲ್ಲ, ಮಂತ್ರಿಗಳಿರುವುದಿಲ್ಲ. Do not look inside. Please look abroad.

ಸೇಲ್ಸ್‌ಟ್ಯಾಕ್ಸ್‌ನಲ್ಲಿ ಎಲ್ಲೆಲ್ಲಿ ಲೀಕೇಜ್ ಇದೆ, ಎಲ್ಲೆಲ್ಲಿ ಅಧಿಕಾರಿಗಳು ಸರ್ಕಾರಕ್ಕೆ ಮೋಸಮಾಡುವುದಕ್ಕೆ ಹೊರಟಿದ್ದಾರೆ, ಅಲ್ಲೆಲ್ಲಾ ಅಂಥವರನ್ನು ಕಡ್ಡಾಯವಾಗಿ ಹಿಡಿದು ಮಟ್ಟಹಾಕಬೇಕು. ಪೋಲೀಸಿನವರು ಎಲ್ಲೆಲ್ಲಿ ಯಾರು ತಪ್ಪುಮಾಡುತ್ತಾರೋ ಅವರನ್ನು ಮಟ್ಟಹಾಕಬೇಕು. ಹೀಗೆ ಮಾಡಿದರೆ ದೇಶ ಅಭಿವೃದ್ಧಿಗೆ ಬರುತ್ತದೆ. ಹೀಗೆ ಮಾಡಿ, ಜನರಿಗಾಗತಕ್ಕ ತೊಂದರೆಯನ್ನು ಸರ್ಕಾರಕ್ಕೆ ಬರುವ ಅಪಕೀರ್ತಿಯನ್ನೂ ತಪ್ಪಿಸುವುದಕ್ಕೆ ಪ್ರಯತ್ನಮಾಡುತ್ತಾರೆಂದು ನಂಬಿ ಈ ಬೇಡಿಕೆಗಳನ್ನು ವಿರೋಧ ಮಾಡುತ್ತೇನೆ.

*ಶ್ರೀಮತಿ ಲೀಲಾವತಿ ಮಾಗಡಿ ವೆಂಕಟೇಶ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೆ, ಈ ಹೊತ್ತು ಈ ವಿಧಾನ ಸಭೆಯ ಮುಂದೆ ಮಂಡಿಸಿರುವ ಬಜೆಟ್ ಬೇಡಿಕೆಯನ್ನು ಸ್ವಾಗತಿಸುತ್ತೇನೆ. ಪಾನನಿರೋಧವನ್ನು ತಪ್ಪಿಸಿದರೆ ನಮ್ಮ ಆದಾಯ ಹೆಚ್ಚುತ್ತದೆ, ನಮ್ಮ ದೇಶದಲ್ಲಿ ಪಾನನಿರೋಧ ಮಾಡಬಾರದು ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯ ವಿಶೇಷವಾಗಿ ಮಹಿಳೆಯರಿಗೆ ಸಂಬಂಧಪಟ್ಟ ವಿಷಯ. ನಮ್ಮ ಹೆಣ್ಣುಮಕ್ಕಳ ಜೀವನವನ್ನು ನಿಜವಾಗಿಯೂ ಈ ಪಾನನಿರೋಧ, ಅಥವಾ ಪಾನದ ಪ್ರತಿಬಂಧಕ ಉತ್ತಮ ಮಟ್ಟಕ್ಕೇರಿಸಿದೆ. 1938ನೆಯ ಇಸವಿಯಲ್ಲಿ ಬೊಂಬಾಯಿಯಲ್ಲಿ ಮೊದಲಸಾರಿ ಪಾನನಿರೋಧವನ್ನು ಜಾರಿಗೆ ತಂದರು. ಆಮೇಲೆ 1948ನೆಯ ಇಸವಿಯಿಂದ ಇಲ್ಲಿಯವರೆಗೆ ಅಲ್ಲಿ ಪೂರ್ಣವಾಗಿ ಪಾನನಿರೋಧ ಪದ್ಧತಿ ನಡೆದುಕೊಂಡು ಬಂದಿದೆ. ಈ ಅನುಭವವನ್ನು ನೋಡಿದರೆ, ನಮ್ಮ ಸಾಮಾಜಿಕ ಜೀವನ ಹಾಗೂ ವಿಶೇಷವಾಗಿ ಕೂಲಿಗಾರರ ಮತ್ತು ಬಡಹೆಣ್ಣು ಮಕ್ಕಳ ಜೀವನಕ್ಕೆ ಪಾನನಿರೋಧ ಪೋಷಕವಾಗಿದೆ ಎನ್ನುವುದಕ್ಕೆ ಯಾವ ಅಡ್ಡಿ ಆತಂಕವೂ ಇಲ್ಲ. ಇನ್ನು ಕೆಲವರು ರಾಜ್ಯದ ಅಭಿವೃದ್ಧಿ ಕಾರ್ಯಗಳಿಗಾಗಿ ಬಜೆಟ್ಟಿನಲ್ಲಿ ಹಣ ಕಡಮೆ ಇರುವಾಗ ಇಂಥ ಪಾನನಿರೋಧವನ್ನು ಜಾರಿಗೆ ತಂದು ಹಣದ ಅಭಾವವನ್ನು ತರುವುದಕ್ಕಿಂತ, ಇದನ್ನು ತೆಗೆಯುವುದೇ ಒಳ್ಳೆಯದೆಂದು ಹೇಳಿದರು. ಸರ್ಕಾರದವರು ಇಂಥ ಕೆಟ್ಟ ಮದ್ಯಪಾನದಿಂದ ಬರುವ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸುವುದು ಒಳ್ಳೆಯದಲ್ಲ. ಚುನಾವಣೆಯ ಕಾಲದಲ್ಲಿ ಎಷ್ಟೋ ಕಡೆ ಮದ್ಯದ ಉಪಯೋಗವಾಯಿತು, ಇದು ಈ ಹೊತ್ತಿನ ಪ್ರಜಾಪ್ರಭುತ್ವದ ಚುನಾವಣೆಯ ಕಾಲದಲ್ಲಿ ಆವಶ್ಯಕ ಎಂದ ಕೆಲವು ಜನ ಸದಸ್ಯರು ಹೇಳಿದ್ದಾರೆ. ನಿಜವಾಗಿಯೂ ಚುನಾವಣೆಯಲ್ಲಿ ಇಂಥ ದುಷ್ಟ ಚಟಗಳ ಸಹಾಯದಿಂದ ಗೆಲ್ಲುವುದಕ್ಕಿಂತ, ಜನರಲ್ಲಿ ಮನಃಮಾಡಿಕೊಂಡು ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡು ಓಟುಗಳನ್ನು ಶೇಖರಿಸುವುದು ಒಳ್ಳೆಯದು. ಹೀಗೆ ಮಾಡಿದ್ದೇವೆಂದು ಹೇಳುವುದಕ್ಕೆ ಸಂಕೋಚವಿಲ್ಲ. ಕೆಲವು ಸ್ಥಳಗಳಲ್ಲಿ ಚುನಾವಣೆಗಳ ಕಾಲದಲ್ಲಿ ಯಾರೋ ಹೇಗೆ ಉಪಯೋಗಿಸಿರಬಹುದು, ಎಲ್ಲಿ ಎಂಬುದು ಗೊತ್ತಿಲ್ಲ. ಅಂತೂ ಬಡವರ ಮೇಲೆ ಹಾಕಿ, ಅಥವಾ ಬೇರೆ ಕಾರಣದಿಂದ ಪಾನನಿರೋಧವನ್ನು ವಿರೋಧಿಸುವುದು ಸರಿಯಲ್ಲವೆಂದು ಅರಿಕೆಮಾಡುತ್ತೇನೆ.

ಮಾನ್ಯ ಸದಸ್ಯರೊಬ್ಬರು ಕೋಲಾರ ಜಿಲ್ಲೆಯಲ್ಲಿ ಕೂಲಿಗಾರರು ಹೆಚ್ಚಾಗಿರುವ ಕಡೆ ಇದರ ಆವಶ್ಯಕತೆ ಹೆಚ್ಚಾಗಿದೆ, ಅಂಥ ಕಡೆ ಪಾನನಿರೋಧವನ್ನು ತೆಗೆದುಹಾಕಬೇಕೆಂದು ಹೇಳಿದರು. ಕೂಲಿಗಾರರ ಜೀವನವೇ ಕಷ್ಟ; ಅವರ ಹೆಣ್ಣುಮಕ್ಕಳ ಜೀವನದ ಕಷ್ಟವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಪಾನಕ್ಕೆ ಪ್ರತಿಬಂಧಕವನ್ನು ತೆಗೆದುಹಾಕಿದರೆ ಇನ್ನೆಷ್ಟು ಕಷ್ಟವಾಗುತ್ತದೆಂಬುದನ್ನು ಯೋಚಿಸಬೇಕು. ಆದುದರಿಂದ ಪ್ರತಿಯೊಂದು ಕಡೆಯೂ ಇದನ್ನು ಜಾರಿಮಾಡಿ ಸರಿಯಾಗಿ ನಡೆಯುವಂತೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ಪ್ರತಿ ಸಾರಿಯೂ, ಪ್ರತಿಯೊಂದು ವಿಷಯದಲ್ಲಿಯೂ ಮಹಾತ್ಮಾ ಗಾಂಧಿಯವರ ಹೆಸರನ್ನೆತ್ತಿ ಅವರ ಮೂಲಕ ಈ ತತ್ವಬಂದಿದೆ ಎಂದು ಹೇಳುತ್ತಿದ್ದೇವೆ. ಗಾಂಧೀಜಿಯವರ ಪುಣ್ಯದಿಂದ ಸ್ವರಾಜ್ಯವನ್ನು ಸಂಪಾದಿಸಿಕೊಂಡು ಈ ಹೊತ್ತು ಪ್ರಜಾಪ್ರಭುತ್ವದಲ್ಲಿದ್ದೇವೆ. ಅವರು ಈ ಪಾನನಿರೋಧವನ್ನು ತಂದಿದ್ದರಿಂದ ನಾವು ಇದನ್ನು ಕಾರ್ಯಗತ ಮಾಡುತ್ತಿದ್ದೇವೆಂದು ಹೇಳುವುದು ಸರಿಯಲ್ಲ. ಪಾನನಿರೋಧ ವಿಶೇಷವಾಗಿ ಬಡ ಜನರಿಗೂ ಕೂಲಿಗಾರರಿಗೂ ಹರಿಜನರಿಗೂ ಬಹಳ ಆವಶ್ಯಕವಾಗಿದೆ. ಈ ಹೊತ್ತು ನಮ್ಮ ಮಕ್ಕಳು ಒಳ್ಳೆಯ ವಾತಾವರಣದಲ್ಲಿ ಬೆಳೆಯಬೇಕಾದರೆ, ದೇಶದಲ್ಲಿ ಸಂಸ್ಕೃತಿ ಬೆಳೆಯಬೇಕಾದರೆ, ನಮ್ಮ ಮಕ್ಕಳು ಇಂಥ ಮದ್ಯಪಾನದ ನೋಟವನ್ನು ನೋಡುವ ಸ್ಥಿತಿ ಸಮಾಜದಲ್ಲಿ ಹೋಗಬೇಕಾಗಿದೆ. ಇಲ್ಲಿ ಮುಂಬಯಿ

(ಶ್ರೀಮತಿ ಲೀಲಾವತಿ ಮಾಗಡಿ ವೆಂಕಟೇಶ್)

ಯಿಂದ ಮತ್ತು ಬೆಳಗಾವಿಯಿಂದ ಬಂದ ಜನರಿದ್ದಾರೆ. ಅವು ಪೂರ್ಣಪಾನನಿರೋಧವಿರುವ ಪ್ರದೇಶಗಳು. ಮೊದಲಿನ ಮೈಸೂರು ಸಂಸ್ಥಾನದಲ್ಲಿ ಪಾನನಿರೋಧ ಪೂರ್ಣವಾಗಿ ಜಾರಿಗೆ ಬಂದಿರಲಿಲ್ಲ. ಇದರಿಂದ ಸಮಾಜ ಜೀವನಕ್ಕೇ ಗಂಡಾಂತರವೆಂದು ಕಾಣುತ್ತದೆ. ಮದ್ಯ ಪಾನವಿರುವ ಪ್ರದೇಶದಲ್ಲಿ ಸಾಯಂಕಾಲ ಹೆಂಗಸರು ಮಕ್ಕಳು ಹೊರಗೆ ಹೋಗುವುದಕ್ಕೇ ಕಷ್ಟ. ಕುಡಿದವರು ಸಿಕ್ಕುತ್ತಾರೆ. ಇಂಥ ವಾತಾವರಣವನ್ನು ಮೊದಲು ಕಲ್ಪಿಸಿಕೊಡುತ್ತಿದ್ದಾರೆ. ಇದು ಜೀವನಕ್ಕೆ ಅಪಾಯ ಕರ. ಇಲ್ಲಿ ವಿಶೇಷವಾಗಿ ಮಹಿಳೆಯರಿಗೆ ಆಗತಕ್ಕ ಅನುಭವ ನಮ್ಮ ಕಡೆ ಇಲ್ಲ. ಪಾನನಿರೋಧದಿಂದ ವರಮಾನ ಬರುತ್ತದೆ ಅಥವಾ ಹೋಗುತ್ತದೆ ಎಂಬುದನ್ನು ವಿಚಾರಮಾಡದೆ ಸಾಮಾಜಿಕ ಜೀವನಕ್ಕೆ ಪಾನನಿರೋಧ ಅಗತ್ಯವೆಂಬುದನ್ನು ತಿಳಿಯಬೇಕು. ಮುಂದೆ ಭಾರತೀಯ ಸಂಸ್ಕೃತಿ ಬೆಳೆಯಬೇಕಾದರೆ ಮದ್ಯ ಪಾನವನ್ನು ತಪ್ಪಿಸುವುದು ಅತ್ಯಗತ್ಯವೆಂಬುದನ್ನು ವಿಚಾರಮಾಡಿ, ಇದಕ್ಕೆ ನಾವೆಲ್ಲರೂ ಬೆಂಬಲ ಕೊಡಬೇಕೆಂದು ಹೇಳುತ್ತೇನೆ.

ಇನ್ನು ರೋಡ್‌ಟ್ರಾನ್ಸ್‌ಪೋರ್ಟ್ ವಿಚಾರ. ಇದರಲ್ಲಿ ಬಹಳ ತೊಂದರೆಗಳಿವೆ. ಒಂದೊಂದು ಸಾರಿ ಬಸ್ಸುಗಳು ತುಂಬಿ ಹೋದರೆ, ಎಷ್ಟೋ ವೇಳೆ ಮಕ್ಕಳು ಹೆಣ್ಣುಮಕ್ಕಳು ದಾರಿಯಲ್ಲಿ ಕಾದುನಿಂತಿದ್ದರೆ ಅವರಿಗೆ ಸ್ಥಳ ಸಿಕ್ಕದೆ ಉಳಿಯುತ್ತಾರೆ. ಈ ದೃಷ್ಟಿಯಿಂದ ಎಲ್ಲಿ ಖಾಸಗಿ ಬಸ್ಸು ಹಾಕಬೇಕೆಂದು ಕೇಳುತ್ತಾರೋ ಅಂಥ ಕಡೆ ಸಂಚಾರ ಹೆಚ್ಚಾಗಿದ್ದರೆ, ಈ ಸೌಲಭ್ಯ ಕೊಡಬಹುದು. ರಾಜ್ಯ ಸರ್ಕಾರದವರಿಗೆ ಎಲ್ಲ ಕಡೆಯೂ ಸರ್ಕಾರದ ಬಸ್ಸುಗಳನ್ನು ಹಾಕುವುದಕ್ಕೆ ಶಕ್ತಿ ಬಂದಿಲ್ಲ. ಹೀಗೆ ಸಾಕಾದಷ್ಟು ಹಾಕದೇ ಇರುವ ಕಡೆಗಳಿಗೆ ವಿಶೇಷವಾಗಿ ಖಾಸಗಿ ಜನರಿಗೆ ಬಸ್ಸುಗಳನ್ನು ಹಾಕಲು ಪರವಾನಗಿ ಕೊಡುವುದು ಅವಶ್ಯಕವೆಂದು ಕಾಣುತ್ತದೆ.

ಶಿಶುವಿಹಾರ, ಕಿಂಡರ್‌ಗಾರ್ಟನ್ ಸ್ಕೂಲುಗಳ ವಿಷಯ ಹೇಳುವುದಾದರೆ, ಮೊದಲು ನಮ್ಮ ಜಿಲ್ಲೆಗಳಲ್ಲಿ ಸರ್ಕಾರದವರು ಇವಕ್ಕೆ ಬೇರೆ ಗ್ರಾಂಟು ಕೊಡುತ್ತಿರಲಿಲ್ಲ. ಮೊದಲಿಂದಲೂ ಮೈಸೂರು ಸರ್ಕಾರದಲ್ಲಿ ಈ ಯೋಜನೆಯಿತ್ತು. ಇದೇ ಯೋಜನೆಯನ್ನು ಅಲ್ಲಿಗೂ ಅನ್ವಯಿಸಬೇಕು. ಸರ್ಕಾರ ಮತ್ತು ಜನತೆ ಇಬ್ಬರ ಸಹಕಾರವೂ ಬೇಕು. ಯಾವ ಯೋಜನೆಯಾಗಲಿ, ಪಾನನಿರೋಧವಾಗಲಿ, ಜನ ಇದು ನಮ್ಮ ಯೋಜನೆ ಎಂಬ ಅಭಿಪ್ರಾಯ ಹೊಂದಿದರೆ ಯಶಸ್ವಿಯಾಗುತ್ತದೆಯೇ ವಿನಾ ಬರಿಯ ಸರ್ಕಾರದಿಂದಾಗುವುದಿಲ್ಲ. ಆದಕಾರಣ ಪಾನದ ಪ್ರತಿಬಂಧಕಕ್ಕೆ ಎಲ್ಲರೂ ಬೆಂಬಲ ಕೊಟ್ಟು ಸಾಂಸ್ಕೃತಿಕ ಜೀವನವನ್ನು ಉತ್ತಮಗೊಳಿಸಲು ಪ್ರಯತ್ನಮಾಡುತ್ತಾರೆಂದು ನಂಬಿದ್ದೇನೆ.

4-30 P.M.

Sri C. M. ARUMUGHAM (Kolar Gold Fields).—Mr. Speaker, Sir, I rise to refuse supplies under Demand in respect of State Excise. First of all I want to bring to the notice of this House that the expenditure on the State Excise Department is not worth spending. In 1946-47 we were spending four lakhs on the Excise Department and we were getting a revenue of Rs. 1,62,00,000 and that too with only nine districts. But now, it is 19 districts and we are spending thirty lakhs of rupees, but the revenue we get is only Rs. 2,62,00,000. It appears strange and I wonder what is the programme of the Government when they have to spend Rs. 30 lakhs and get only a revenue of Rs. 2,62,00,000. They are now spending seven times more than what they were spending in 1946.

Sri T. MARIAPPA.—Because there are more dry areas now.

Sri C. M. ARUMUGHAM.—Mysore State had no deficit in their revenues formerly. It was all viable. It is knly when the Congress Government came into office, the viability of the State has ceased. The Congress Government after assumption of office are sacrificing a large amount of excise revenue for a false ideology which has no meaning and which has no reality. On account of this there is adeficit in the Budget. On account of prohibition Government is losing an enormous amount. Prohibition has done more harm than the expected good for the people. Now people are asked to bear the cost of prohibition. People are asked to meet the expense of prohibition and what is that for? It is to reform a lakh or two of habitual drunkards, who can never be reformed.

Sri B. N. BORANNA GOWDA (Belur).—Can the Hon'ble Member tell us how much revenue Government is losing for having introduced Prohibition?

Sri C. M. ARUMUGHAM.—The Government cannot reform habitual drunkards. They cannot ask people to bear the expenses incurred on prohibition. When there is a cry for education, when there is a cry for public health, when there is a cry for housing facilities, when there is a cry to implement so many other schemes, why do the Government want to waste money on prohibition? Which is most important? Which requires priority, the drunkard or the hungry? Therefore the policy of prohibition and the expenditure on it is sheer waste. On account of prohibition the public are asked to sacrifice. Well, Sir, considering the policy of prohibition

introduced by the Government, one can boldly come to the conclusion that the excise revenue lost by the Government is picked up by the illicit manufacturer. Instead of the excise revenue going into the pockets of the Finance Minister, it goes into the pocket of the illicit manufacturer. People are asked to pay twice, once to the Government and the second time to the illicit manufacturer. Prohibition has not done good to the people. It has demoralised the society. After the introduction of prohibition, children, women and men everybody started drinking. Formerly, only the male members of the family used to drink, because they alone could go to the liquor shop. But now it has become a cottage industry. Large quantities are available at all places. Therefore everybody has started to drink. We not only lose enormous revenue by having introduced prohibition but we have got to spend a large sum on the Police to enforce prohibition. In spite of this the Police never do their legitimate duty. We not only lose excise revenue, we not only lose by spending money on the police to enforce prohibition, but also spend money to maintain the prisoners who are convicted under the Prohibition Act. Well Sir, today there are a large number of persons confined in jails who are convicted under the Prohibition Act. The number of offences under the Prohibition law has increased. Moreover, prohibition is not introduced in all places in the State. In addition there are permit-holders who are allowed to drink. There are persons with permits to drink. Others of the same inclination are not allowed to drink, and there are places where persons can drink in unlimited quantities in the same State, but out of the prohibited area. My submission to the Government is that, unless prohibition applies to one and all, persons who are convicted under the Prohibition Act should not be confined in jails along with the criminals who have committed crimes against the State, against Society . . .

Mr. SPEAKER.—Is not a prohibition offence, an offence against the society ?

Sri C. M. ARUMUGHAM.—When it is not applied to one and all and when there is partiality and when one is allowed to drink in another place within the same State, and when a citizen of the same State is prohibited to drink and is arrested after drinking in another place, it is not an offence at all. When I am allowed to drink in Bangalore, I am not allowed to drink in Kolar. When such is the case, how can it be an offence? Unless it is introduced throughout the State, the offenders under prohibition should not be confined in the jails along with the other prisoners.

Well, Sir, the Government of Mysore were very intelligent to introduce prohibition before the completion of the Constitution. Article 47 of the Constitution says that the State shall endeavour to bring prohibition to the State on moral, economical and public health basis. I want to inform the House that I had the privilege of speaking with Dr. Ambedkar, who is called a modern Manu, on this article. He told me that there was a difference of of opinion in framing article 47. The Congress Members of the Drafting Committee were for prohibition in five years. But some members including Dr. Ambedkar were not for complete prohibition. They were for cancelling the licenses for foreign liquor and they were for allowing toddy and beer. So gradually, you should educate the public to realise that to drink is bad. You cannot wean away the drunkards all ati once. First there must be full conciliation of the public. If that fails you can introduce force. Then there is the law. If that too fails, there is no other alternative.

There was an international conference of scientists at Stockholm. A great doctor who was an expert on heart disease, Dr. Bertand Joseph made a statement before the international conference that beer is good for health. It is good for the victims of heart disease and for those who suffer from blood pressure. He says that beer not only removes the excess of water from the tissues, but also makes a man fresh for the next day's job. So, Sir, the Congress

(SRI C. M. ARUMUGHAM.)

Government should have prohibited foreign liquor; but they should have permitted beer and toddy. Toddy is there in the country from a very long time. There is no date to find out from which date toddy has been in existence. Even during the period of Ramayana and Mahabharata, there was a drink called *sura soma*. On the other hand toddy is very good. If a man were to suffer from silicosis, there is no other medicine. In K. G. F. silicosis is a common disease and many people suffer. If toddy is taken for forty days, it cures silicosis.

So the Government should know the sufferings of the people. Even great people have said that beer and toddy can be drunk by the people. Therefore you please introduce beer and toddy in the prohibited areas and prohibit only the drinking of liquor.

Mr. SPEAKER.—Then prohibition will go away.

Sri C. M. ARUMUGHAM.—It will not go. Let us gradually educate the masses.

Mr. SPEAKER.—Then prohibition will be only on the paper.

Sri C. M. ARUMUGHAM.—After all the climate in India is favourable. The climate in America and England is different. India is a hot country. Therefore you cannot afford to give permission to people to drink as in America. Of course people in England cannot be without drink. But in India the climate is suitable and you can be without drink. But the method the Government is adopting is wrong. So I am asking them to scrap prohibition. Further, when we are suffering with a defict of Rs. 9½ crores, the ruling party is threatening that they are going to extend prohibition throughout the State. God only must bless and save them in their efforts! As Dr. Ambedkar said: one cannot tie down oneself to a view once expressed in the name of consistency or policy. One must try to learn and relearn to change one's thought. So, the Congress Government should not stick to a policy once stated even after finding it to be a failure. It is said that God makes them mad whom he wishes to destroy. God is doing the right thing to the Congress in regard to the prohibition policy.

With these words I want to close and thank you for the opportunity given to me.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ನಮ್ಮ ಮುಂದಿರುವ ಈ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಈ ಹಿಂದೆ ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಎಂಬುದಾಗಿತ್ತು. ಅದು ಬಹಳ ಚೆನ್ನಾಗಿ ಕೆಲಸ ಮಾಡಿತು. ಈಗ ಏನಾಗಿದೆ ಎಂದರೆ ನಾಲ್ಕು ಐದು ಡಿಸ್ಟ್ರಿಕ್ಟ್‌ಗಳನ್ನು ಸೇರಿಸಿ ಒಂದೊಂದು ಡಿವಿಜನ್ ಆಗಿ ಮಾಡಿದ್ದೀರಿ. ಇದರಿಂದ ತುಂಬ ತೊಂದರೆಯಾಗಿದೆ. ಹಿಂದೆ ಇದ್ದಂತೆ ಎಸ್.ಟಿ.ಎ. ಮತ್ತು ಆರ್.ಟಿ.ಎ. ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಟೆಂಪೊರೆರಿ ಪರ್ಮಿಟ್ ತೆಗೆದುಕೊಳ್ಳಬೇಕಾದರೆ ಶಿವಮೊಗ್ಗದಿಂದ ಮೈಸೂರಿಗೆ ಹೋಗಬೇಕು. ಮೈಸೂರಿಗೆ ಹೋಗಿ ಪರ್ಮಿಟ್ ತರುವುದರೊಳಗೆ ಜಾತ್ರೆ ಮುಗಿದು ಹೋಗಿರುತ್ತದೆ. ಆದ್ದರಿಂದ ಹಿಂದಿನಂತೆಯೇ ಎಸ್.ಟಿ.ಎ. ಮತ್ತು ಆರ್.ಟಿ.ಎ. ವ್ಯವಸ್ಥೆ ಮಾಡಿ ಅನುಕೂಲ ಕಲ್ಪಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯವೇನೆಂದರೆ, ತಾವು ಈಗ ಮೋಟಾರು ವಾಹನಗಳ ಮೇಲೆ ತೆರಿಗೆ ಹಾಕುತ್ತಿರುವುದು ತೀರ ಹೆಚ್ಚು. ಸೆಸ್ಸು, ಟ್ಯಾಕ್ಸು ಎರಡೂ ವಸೂಲು ಮಾಡುತ್ತಾ ಇದ್ದೀರಿ. 20 ಮೈಲಿ ಬಸ್ಸು ಓಡಿಸುವವರಿಗೂ 30 ರೂಪಾಯಿ ಟ್ಯಾಕ್ಸು ಹಾಕಿದರೆ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. 100-150-160 ಮೈಲಿ ಓಡಾಡಿಸುವವರಿಗೆ ಅಷ್ಟು ತೊಂದರೆ ಯಾಗುವುದಿಲ್ಲ. 15-20-30 ಮೈಲಿ up and down ಓಡಾಡಿಸುವವರಿಗೆ ತುಂಬ ತೊಂದರೆಯಾಗುತ್ತದೆ. ಬೊಂಬಾಯಿ, ಮದರಾಸಿನಲ್ಲಿ ನನಗೆ ತಿಳಿದ ಮಟ್ಟಿಗೆ ಹೇಳುತ್ತೇನೆ. ಮೂರು ಘಂಟೆಗೆ ಒಂದು ಸಾರಿ ಬಸ್ ಓಡಾಡುತ್ತದೆ. ನಮ್ಮಲ್ಲಿ 15 ನಿಮಿಷಕ್ಕೆ ಒಂದು ಸರ್ವೀಸ್ ಬಸ್ ಓಡಾಡಿಸುತ್ತಾರೆ. ಈ ಲೆಕ್ಕಾಚಾರ ನೋಡಿದರೆ ಬಸ್ ಟ್ಯಾಕ್ಸು ನಮ್ಮದು ಜಾಸ್ತಿ ಎಂದು ಹೇಳುತ್ತಾರೆ. ಈ ರೀತಿ ತಾವು ತೆರಿಗೆ ಹಾಕಿದ್ದೇ ಆದರೆ ಸಣ್ಣಪುಟ್ಟ ಬಸ್‌ಮಾಲೀಕರು ಓಡಾಡಿಸುತ್ತಿರುವ ಬಸ್‌ಗಳೆಲ್ಲಾ ನಿಂತುಹೋಗುತ್ತವೆ. ಆದ್ದರಿಂದ ಇದನ್ನು ಯಾವ ರೀತಿ ಸರಿಪಡಿಸಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಿ ಟ್ಯಾಕ್ಸು ಹಾಕಬೇಕೆಂದು ಹೇಳುತ್ತೇನೆ. ಮತ್ತು ಹಿಂದೆ ಟೆಂಪೊರೆರಿ ಲೈಸೆನ್ಸ್ ಕೊಡಲು ಡೆಪ್ಯುಟಿ ಕಮೀಷನರಿಗೆ ಅವಕಾಶ ಕೊಟ್ಟಿದ್ದಂತೆಯೇ ಈಗಲೂ ಅವಕಾಶ ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ.

ಸೇಂದಿ, ಷರಾಬು ವಿಚಾರದಲ್ಲಿ ಎಲ್ಲರೂ ಜವಾಬ್ದಾರಿ ಸರ್ಕಾರ ಬರಬೇಕೆಂದು ಕಾದಿದ್ದರು. ಪಾನನಿರೋಧ ಮಾಡಬೇಕೆಂದು ಈಗ 17 ವರ್ಷದಿಂದಲೂ ಸತತವಾಗಿ ಹೋರಾಡಿದ್ದೇವೆ. ಜವಾಬ್ದಾರಿ ಸರ್ಕಾರ ಬಂದು ಒಂಬತ್ತು ವರ್ಷಗಳಾದುವು. ಈ ಸೇಂದಿ, ಷರಾಬು ಕುಡಿಯುವುದು ಪೂರ್ಣವಾಗಿ ನಿಂತಿಲ್ಲ. ಇದರಿಂದ ಏನಾಗಿದೆ? ಸೇಂದಿ, ಷರಾಬು ಕುಡಿಯುವುದನ್ನು ನಿಲ್ಲಿಸಬೇಕೆಂದು ಕೆಲವರೂ, ನಿಲ್ಲಿಸಬಾರದೆಂದು ಕೆಲವರೂ ಹೇಳುವುದಕ್ಕೆ ಆಸ್ಪದವಾಗಿದೆ. ಸೇಂದಿ, ಷರಾಬು ಕುಡಿಯುವುದು ಸಂಪೂರ್ಣವಾಗಿ ನಿಲ್ಲಬೇಕು,

ಸರ್ಕಾರದವರಿಗೆ ದುಡ್ಡು ಬರುವುದು ಕಡಮೆಯಾಗುತ್ತದೆ ಎಂದು ಹೇಳುವುದಾದರೆ ಬೇರೆ ಯಾವುದಾದರೂ ತೆರಿಗೆ ಹಾಕಿ, ಶಿರಸಾ ವಹಿಸುತ್ತೇವೆ. ದುಡ್ಡು ಬರುವುದು ಹೋಗುತ್ತದೆ ಎಂಬ ಕಾರಣದಿಂದ ಜನಗಳಿಗೆ ತೊಂದರೆ ಮಾಡಬೇಕೆಂಬುದು ಯಾವ ನ್ಯಾಯ ? ಇದರಿಂದ ಕ್ಷಯ ಮುಂತಾದ ರೋಗಗಳಿಗೆ ಅವಕಾಶವಾಗುತ್ತದೆ. ಇದನ್ನೆಲ್ಲಾ ಮಂತ್ರಿಮಂಡಲದವರು ಯೋಚನೆ ಮಾಡಿ ಮುಂದಿನ ಅಧಿವೇಶನದಲ್ಲಾದರೂ ಯಾವ ಗುರಿಯನ್ನು ಮುಟ್ಟಬೇಕೆಂದು ಇದ್ದೇವೆಯೋ ಆ ಗುರಿಯನ್ನು ಮುಟ್ಟುವ ಒಂದು ತೀರ್ಮಾನಕ್ಕೆ ಬನ್ನಿ. ದೇಶ ಒಪ್ಪುತ್ತದೆ, ನಿಮಗೂ ಕೀರ್ತಿ ಬರುತ್ತದೆ. ಷರಾಬು ಕುಡಿಯುವವರು ಕಳ್ಳತನದಿಂದ ತಂದು ಬ್ಲಾಕ್ ಮಾರ್ಕೆಟ್‌ನಲ್ಲಿ ಇತರರಿಗೂ ಮಾರುತ್ತಾರೆ. ಇಂತಹ ಕೇಸುಗಳನ್ನು ಪೋಲೀಸ್‌ನವರು ಹಿಡಿದು ಹಾಕಿದ್ದಾರೆ. ನಮ್ಮ ಹಣಕಾಸಿನ ಮಂತ್ರಿಗಳು ಮನಸ್ಸು ಮಾಡಿದರೆ ಇದನ್ನು ಸಂಪೂರ್ಣವಾಗಿ ತಪ್ಪಿಸಿ, ಒಂಬತ್ತು ಕೋಟಿ ರೂಪಾಯಿ ಖೋತಾ ಇರುವುದನ್ನು ಭರ್ತಿ ಮಾಡುವುದಕ್ಕೇನೂ ಕಷ್ಟವಾಗುವುದಿಲ್ಲ. ಇದು ಒಂದು ದುಶ್ಚಟ ; ಸಂಪೂರ್ಣವಾಗಿ ಹೋಗಲೇಬೇಕು, ಇಲ್ಲಿಯವರೆಗೂ ಹೋಗದೇಇರುವುದು ನಮ್ಮ ದುರದೃಷ್ಟ ಎಂದು ಹೇಳುತ್ತೇನೆ.

ಇನ್ನೊಂದೇನೆಂದರೆ, ಬಸ್ಸುಗಳಿಗೆ ಟ್ಯಾಕ್ಸ್ ಹಾಕುವ ವಿಚಾರದಲ್ಲಿ ಬಹಳ ದೀರ್ಘವಾಗಿ ಯೋಚನೆ ಮಾಡಿ. ಏಕೆಂದರೆ, ಪದೇಪದೇ ಪರ್ಮಿಟ್‌ಗಳಿಗೆ, ಟೆಂಪೊರರಿ ಪರ್ಮಿಟ್‌ಗಳಿಗೆ ಮೈಸೂರಿಗೆ ಹೋಗಬೇಕು, ಡಿವಿಷನ್ ಹೆಡ್‌ಕ್ವಾರ್ಟರುಗಳಿಗೆ ಹೋಗಬೇಕು ಎಂದರೆ ಬಸ್ಸುಗಳ ಮಾಲೀಕರಿಗೆ ಬಹಳ ಖರ್ಚಾಗುತ್ತದೆ. ಈ ವಿಚಾರದಲ್ಲಿ ಮೊದಲು ಇದ್ದ ವ್ಯವಸ್ಥೆ ಸರಿಯಾಗಿತ್ತು. ಅದೇ ರೀತಿ ಮಾಡಿದರೆ ಬಹಳ ಅನುಕೂಲವಾಗುತ್ತೆಂದು ಅನುಭವದಿಂದ ಹೇಳುತ್ತಿದ್ದೇನೆ. ಸರ್ಕಾರದವರು ದಯವಿಟ್ಟು ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು- ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮದ್ಯಪಾನ ನಿರೋಧದ ವಿಚಾರದಲ್ಲಿ ಇದುವರೆಗೂ ಬಹಳ ವಿಪುಲವಾದ ಚರ್ಚೆ ನಡೆದಿದೆ. ಮುಖ್ಯವಾಗಿ ಪಾನನಿರೋಧ ತತ್ತ್ವದ ವಿಚಾರದಲ್ಲಿ ಭಿನ್ನಾಭಿಪ್ರಾಯ ಯಾರಿಗೂ ಕಾಣುತ್ತಿಲ್ಲ. ಆದರೆ ಅದನ್ನು ಜಾರಿಗೆ ತಂದ ಕ್ರಮದಲ್ಲಿ ಮಾತ್ರ ಬಹಳಮಟ್ಟಿನ ಭಿನ್ನಾಭಿಪ್ರಾಯವಿದೆ. ಅದಕ್ಕೆ ಕಾರಣವೂ ಇದೆ. ಪಾನನಿರೋಧವು ವಿಫಲವಾದ ವಿಚಾರ ಸರ್ಕಾರಕ್ಕೂ ಗೊತ್ತಿದೆ. ಮಾನ್ಯ ಸದಸ್ಯರುಗಳೂ ತಿಳಿಸಿದ್ದಾರೆ. ಹೀಗೆ ಪಾನನಿರೋಧವು ವಿಫಲವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೂ ಅದರ ಪರಿಣಾಮ ಎಷ್ಟರಮಟ್ಟಿಗೆ ಆಗಿದೆ. ಈ ವಿಚಾರದಲ್ಲಿ ಸರ್ಕಾರದವರು ಏನು ಯೋಚನೆ ಮಾಡಿದ್ದಾರೆ, ಈಗಿರತಕ್ಕ ಕ್ರಮವನ್ನು ಬದಲಾವಣೆ ಮಾಡುತ್ತಾರೆಯೇ, ಅಥವಾ ನಿರಾಶರಾಗಿದ್ದಾರೆಯೇ ಎನ್ನುವ ವಿಚಾರದಲ್ಲಿ ಸರ್ಕಾರದವರು ಒಂದು ಹೇಳಿಕೆಯನ್ನು ಕೊಟ್ಟಿದ್ದರೆ ಇಷ್ಟೊಂದು ಚರ್ಚೆಗೆ ಅವಕಾಶವಿರುತ್ತಿರಲಿಲ್ಲವೆಂದು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರನೇಕರು ಪಾನನಿರೋಧದ ಪ್ರಯತ್ನ ವಿಫಲವಾಗುತ್ತಿದೆ, ಸರ್ಕಾರಕ್ಕೆ ಬರುವ ಆದಾಯ ಕಡಮೆಯಾಗಿದೆ, ಇದನ್ನು ಪುನರ್ವಿಮರ್ಶೆ ಮಾಡಬೇಕು ಎಂಬವು ಧಾಟಿಯಲ್ಲಿ ಮಾತನಾಡಿದ್ದಾರೆ. ಕೆಲವರು ತಾ ನಾಗರಿಕರಾಗಿದ್ದೂ, ಜನಗಳಿಗೆ ಹೆಂಡ ಕುಡಿಯುವು

ದಕ್ಕೆ ಅವಕಾಶ ಕೊಟ್ಟರೆ ಚೆನ್ನಾಗಿರುತ್ತದೆ ಎಂದು ಹೇಳಿದ್ದಾರೆ. ಇದನ್ನು ನಾನು support ಮಾಡುವುದಿಲ್ಲ. ಈ ಅಭಿಪ್ರಾಯ ಎದುರು ಪಕ್ಷದವರಿಂದ ಮಾತ್ರ ಬಂದಿಲ್ಲ, ಕಾಂಗ್ರೆಸ್ ಪಕ್ಷದವರಿಂದ ಸಹ ಬಂದಿದೆ. ನಾನು ಇದಕ್ಕೆ ವಿಷಾದಪಡುತ್ತೇನೆ. ಇವರುಗಳು ಕೊಟ್ಟಿರತಕ್ಕ ಸಲಹೆಗಳಿಗೆ ಅಷ್ಟು ಹೆಚ್ಚಿನ ವಿಷಾದಪಡಬೇಕಾಗಿಲ್ಲ. ಆದರೆ ಈಗ ಸರ್ಕಾರದವರೇ ನೀರಾ ಮಾರುವ ಏರ್ಪಾಡನ್ನು ಮಾಡಿರಬೇಕಾದರೆ, ಮಾನ್ಯ ಸದಸ್ಯರು ಇಂಥ ಸಲಹೆಗಳನ್ನು ಕೊಡತಕ್ಕದ್ದರಲ್ಲಿ ಆಶ್ಚರ್ಯವಿಲ್ಲ. ಸರ್ಕಾರಕ್ಕೆ ನೀರಾದಿಂದ ಎಷ್ಟು ಆದಾಯ ಬರುತ್ತದೆ ಎಂಬುದನ್ನು ತಿಳಿದುಕೊಂಡಿದ್ದೇನೆ. ಇದರಿಂದ ಹೆಚ್ಚು ಆದಾಯ ಬರುತ್ತಿಲ್ಲ. ಕೋಲಾರ ಜಿಲ್ಲೆಯಲ್ಲಿಯೂ ಈ ಪದ್ಧತಿಯನ್ನು ಜಾರಿಗೆ ತರಬೇಕು, palm gur ಅಂದರೆ ನೀರಾದಿಂದ ಬೆಲ್ಲವನ್ನು ತಯಾರಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಇದ್ದಾರೆಂದು ತಿಳಿದುಬಂದಿದೆ. ಹೆಂಡವನ್ನು ಮರದಿಂದ ತೆಗೆದತಕ್ಷಣ ಕುಡಿದರೆ ಅದು ನೀರಾ; ಸ್ವಲ್ಪ ಕಾಲ ಕಳೆದ ಮೇಲೆ ಕುಡಿದರೆ ಹೆಂಡ, ಆದುದರಿಂದ ಯಾವ ರೂಪದಲ್ಲಿ ಕುಡಿದರೂ ಅದು ಹೆಂಡವೇ. ಈ ರೀತಿ ಮಾಡುವುದಕ್ಕೆ ಸರ್ಕಾರದವರು ಏಕೆ ಕೈಹಾಕುತ್ತಿದ್ದಾರೆಯೋ ನನಗಂತೂ ಅರ್ಥವಾಗುತ್ತಿಲ್ಲ. ಮುಖ್ಯವಾಗಿ ಒಂದೇ ಮಾತಿನಲ್ಲಿ ಹೇಳಬೇಕಾದರೆ ಪಾನ ಮಾಡಲು ಅವಕಾಶ ಕೊಡುವುದರಿಂದ ಲಾಭ ಬರುತ್ತದೆಂದು ಆ ತತ್ತ್ವವನ್ನು ಅಲ್ಲಗಳೆದು ಕೆಲಸ ಮಾಡಬೇಕಾಗಿಲ್ಲ. ಪಾನನಿರೋಧವನ್ನು ಸಂಪೂರ್ಣವಾಗಿ ಸಂಸ್ಥಾನಾದ್ಯಂತ ಜಾರಿಗೆ ತಂದು ಅದನ್ನು ಯಶಸ್ವಿಯಾಗಿ ನಡೆಸಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಮೋಟಾರು ವಾಹನಗಳ ವಿಚಾರವನ್ನು ತೆಗೆದುಕೊಂಡರೆ, ಸರ್ಕಾರಕ್ಕೆ ಆದಾಯ ಹೆಚ್ಚಿಗೆ ಬರತಕ್ಕ ಇಲಾಖೆಗಳಲ್ಲಿ ಮೋಟಾರು ವಾಹನಗಳ ಇಲಾಖೆಯೂ ಒಂದು. ಇದರಲ್ಲಿ ನಿರೀಕ್ಷೆಗಿಂತ ಹೆಚ್ಚಾಗಿ ಆದಾಯ ಬರುತ್ತಿದೆ. ಇಷ್ಟು ಆದಾಯ ಬರುತ್ತಿರಬೇಕಾದರೆ, ಈ ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡುಬರುತ್ತಿದ್ದಾರೆಯೇ ಎಂದರೆ ಇಲ್ಲವೆಂದು ಹೇಳಬೇಕಾಗಿದೆ. ಒಂದು ಕಡೆ ನೋಡಿದರೆ, ಆಫೀಸಿನಲ್ಲಿ ಎಷ್ಟೋ ಕೆಲಸಗಳು ಖಾಲಿ ಇದ್ದರೂ ಸಹ ಅರ್ಹರಾದವರನ್ನು ಆ ಕೆಲಸಗಳಿಗೆ ನೇಮಿಸುತ್ತಿಲ್ಲ. ಇದಕ್ಕೆ ಕಾರಣ ಗೊತ್ತಾಗುತ್ತಿಲ್ಲ. ಬಹುಶಃ ಅವುಗಳನ್ನು ಯಾರಿಗೋಸ್ಕರವಾಗಿಯಾದರೂ ಮೀಸಲಿಟ್ಟಿದ್ದಾರೆಯೋ ಅಥವಾ ಇನ್ನು ಯಾವ ಉದ್ದೇಶದಿಂದ ಈ ರೀತಿ ಖಾಲಿಯಾಗಿಟ್ಟಿದ್ದಾರೆಂಬುದು ನನಗೆ ಗೊತ್ತಾಗುವುದಿಲ್ಲ. ಇರತಕ್ಕ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿ, ಸಿಬ್ಬಂದಿಗೆ ಹೆಚ್ಚಿನ ಉತ್ತೇಜನ ಮತ್ತು ಸೌಕರ್ಯ ಕೊಡದೆ ಹೋದರೆ, ಅವರಲ್ಲಿ ಒಂದುರೀತಿ ಅಸಮಾಧಾನ ಬೆಳೆದು ಕಾರ್ಯಗಳು ಸುಗಮವಾಗಿ ನಡೆಯುವುದಿಲ್ಲವೆಂದು ಪದೇಪದೇ ಅನೇಕರು ಸರ್ಕಾರದ ಗಮನಕ್ಕೆ ತರುತ್ತಿದ್ದರೂ ಸಹ ಸರ್ಕಾರದವರು ಈ ವಿಚಾರದಲ್ಲಿ ಏನೂ ಕಾರ್ಯಕ್ರಮ ತೆಗೆದುಕೊಂಡಂತೆ ಕಾಣುವುದಿಲ್ಲ. ಇದರಿಂದ ಜನಗಳಿಗೆ ತೊಂದರೆಯಾಗುತ್ತಿದೆ. ಮತ್ತು ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುವುದಿಲ್ಲ. ಈಗ regions ಏರ್ಪಾಡು ಮಾಡಿದ್ದಾರೆ. ಅದಕ್ಕೆ Regional Transport Officer, Assistant Regional Transport Officer ಎಂದು ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಈ ಸಭೆಯ ಮುಂದೆ ಬಂದಿರತಕ್ಕ ಅನೇಕ ಪ್ರಶ್ನಾವಳಿಗಳಿಂದ ಜನಗಳಿಗೆ ಅತೃಪ್ತಿಯಾಗಿದೆ ಎಂದು ಸರ್ಕಾರದ ಗಮನಕ್ಕೆ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ.)

ಬಂದಿದೆ. ಕಾರಣ ಒಬ್ಬ ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡು, ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮ ಪಡೆದಿರುವವರನ್ನು Regional Transport Officer ಅಥವಾ Assistant Regional Transport Officer, ಆಗಿ administrationಗೆ ನೇಮಿಸಿರುವುದು ಬಹಳ ಅನ್ಯಾಯ. ಇದು ಯಾರೂ ಒಪ್ಪತಕ್ಕ ವಿಚಾರವಲ್ಲ. ಮಾನ್ಯ ಮಿತ್ರರಾದ ಶ್ರೀ ಎಸ್. ಕರಿಯಪ್ಪ ಅವರು ಇಂಥ ಸ್ಥಳಗಳಿಗೆ ಐ.ಎ.ಎಸ್. ಅಧಿಕಾರಿಯೊಬ್ಬರನ್ನು ನೇಮಿಸಬೇಕು ಎಂದು ಕೇಳಿದ್ದಾರೆ. ಇದರಲ್ಲಿ ಅರ್ಥವಿದೆ. ಹೆಚ್ಚಿನ ವಹಿವಾಟು ಇರತಕ್ಕ, ಹೆಚ್ಚಿನ ಆದಾಯ ಬರತಕ್ಕ ಇಲಾಖೆ ಯಾದುದರಿಂದ ಇದಕ್ಕೆ ದಕ್ಷರಾದ ಅಧಿಕಾರಿಗಳನ್ನು ನೇಮಕ ಮಾಡುವುದು ಒಳ್ಳೆಯದು. ಈ ವಿಷಯವನ್ನು ಯೋಚನೆ ಮಾಡಿ, ಅತ್ಯವಶ್ಯ ಸಿಬ್ಬಂದಿಯನ್ನು ನೇಮಕಮಾಡಬೇಕು. ಐದು ಜಿಲ್ಲೆಗಳಿಗೆ ಒಬ್ಬ ಅಧಿಕಾರಿಯನ್ನು ಇಟ್ಟುಕೊಂಡಿರುವುದರಿಂದ ಆಡಳಿತದ ಕೆಲಸ ಅಷ್ಟೇನೂ ಕಡಿಮೆಯಾಗಿಲ್ಲವೆಂಬ ವಿಚಾರ ಸರ್ಕಾರದ ಗಮನಕ್ಕೆ ಕೂಡ ಬಂದಿದೆ. ಮಿತವ್ಯಯ ಮಾಡಬೇಕೆಂದು ನಾನು ನಾನಾ ರೂಪದಲ್ಲಿ ಸಲಹೆ ಮಾಡುತ್ತಿರುವವನಾದ ಕಾರಣ regions ಕಡಮೆ ಮಾಡಿ, ಜಿಲ್ಲೆಗಳನ್ನು ಹೆಚ್ಚು ಮಾಡಿ ಎಂದು ಹೇಳುವ ಗೋಜಿಗೆ ಹೋಗುವುದಿಲ್ಲ. ಐದು ಡಿವಿಷನ್‌ಗಳಿರಲಿ. ಆದರೆ ಈಗಿರತಕ್ಕ ಒಂದು ಪದ್ಧತಿಯನ್ನು ಕೊಂಚ ಮಟ್ಟಿಗೆ ಮಾರ್ಪಾಡು ಮಾಡಿಕೊಳ್ಳಬೇಕು. ಹಾಗೆ ಮಾಡದೆ ಹೋದರೆ, ಸಾರ್ವಜನಿಕರಿಗೆ ಮತ್ತು ಬಸ್ ಆಪರೇಟರುಗಳಿಗೆ ತೊಂದರೆಯಾಗುತ್ತದೆ. ಪರ್ಮಿಟ್ ವಗೈರೆ ಕೊಡುವ ವಿಚಾರದಲ್ಲಿ ನಾವೂ ಸಹ ನಮ್ಮ ಪಕ್ಕದ ಸಂಸ್ಥಾನವಾದ ಆಂಧ್ರ ಪ್ರಾಂತದಲ್ಲಿರತಕ್ಕ ಪದ್ಧತಿಯನ್ನು ಜಾರಿಗೆ ತರುವುದಾದರೆ ಪರ್ಮಿಟ್ ರಿನ್ಯೂಯಲ್ಸ್‌ಗೂ ಸಹ ಆಫೀಸುಗಳಿಗೆ ಯಾವ ಆಪರೇಟರೂ ಬರತಕ್ಕ ಪ್ರಮೇಯವಿರುವುದಿಲ್ಲ. ಆ ರೀತಿ ಆಪರೇಟರುಗಳು ಆಫೀಸಿಗೆ ಬರದಂತೆ ಮಾಡುವುದಾದರೆ ಈಗಿರತಕ್ಕ stigma, ಒಂದು ದೋಷಾರೋಪಣೆ ಖಂಡಿತವಾಗಿಯೂ ಈ ಇಲಾಖೆಗೆ ಬರುವುದಿಲ್ಲ. ಈ ಇಲಾಖೆ ಪರಿಶುದ್ಧವಾಗಿರುವಾಗ ಜನಗಳು ಏನೂ ಹೇಳುವುದಕ್ಕೆ ಅವಕಾಶವಿರುವುದಿಲ್ಲ. ಆ ಕಾರಣದಿಂದ ಹೇಳುತ್ತೇನೆ. ಈಗ ಕೂಪನ್ ಮತ್ತು ಟ್ಯಾಕ್ಸ್ ಕಟ್ಟುವುದಕ್ಕೆ ಒಬ್ಬ ವಿಶೇಷ ಅಧಿಕಾರಿಯನ್ನು ಪ್ರತಿಯೊಂದು ಜಿಲ್ಲೆಗೂ, ಕೆಲಕೆಲವು ದಿವಸ ಕಳುಹಿಸುತ್ತಿದ್ದೀರಿ. ಈ ಪದ್ಧತಿ ಸಮರ್ಪಕವಾಗಿಲ್ಲ. ಇದಕ್ಕೆ ಪ್ರತಿಯಾಗಿ ಆಯಾ ತಾಲ್ಲೂಕಿನ ಟ್ರೆಜರಿಗಳಲ್ಲಿ ಕೂಪನ್‌ಗಳನ್ನು ಕೊಟ್ಟಿದ್ದು, ಪ್ರತಿ ಕ್ವಾರ್ಟರಿನಲ್ಲಿಯೂ ಎಷ್ಟೆಷ್ಟು ಫೀ ಪಾವತಿ ಮಾಡಬೇಕೋ ಅಷ್ಟನ್ನು ಆಯಾ ಟ್ರೆಜರಿಗಳಲ್ಲಿಯೇ ಪಾವತಿ ಮಾಡಿಸಿಕೊಂಡು, ಟ್ರೆಜರಿಯವರು ಕೂಪನ್ ಕೊಡತಕ್ಕ ಪದ್ಧತಿಯನ್ನು ಜಾರಿಗೆ ತಂದರೆ ಬಸ್ ಆಪರೇಟರುಗಳು ಬೆಂಗಳೂರಿಗಾಗಲಿ, ಅಥವಾ ಜಿಲ್ಲಾ ಕೇಂದ್ರಗಳಿಗಾಗಲಿ ಹೋಗಬೇಕಾಗುವುದಿಲ್ಲ. ಹೀಗೆ ಟ್ರೆಜರಿಯಲ್ಲಿ ಹಣವನ್ನು ಕಟ್ಟಿದ ಒಬ್ಬ ಆಪರೇಟರ್ ಕೂಪನ್ ತೆಗೆದುಕೊಂಡು, ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಸಮೇತವಾಗಿ ಸಂಬಂಧಪಟ್ಟ ಆಫೀಸಿಗೆ ಪರ್ಮಿಟ್‌ಗಾಗಿ ಕಳುಹಿಸಿದರೆ ಸದರಿ ಆಫೀಸಿನವರು ಪೋಸ್ಟ್ ದ್ವಾರಾ ಪರ್ಮಿಟ್ ವಗೈರೆ ಕಳಿಸಬಹುದು ಇದರಿಂದ ಪರ್ಮಿಟ್ ಹೋಲ್ಡರುಗಳು ಆಫೀಸುಗಳಿಗೆ ಪರ್ಮಿಟ್ಟಿಗಾಗಿ ಬರುವ ಕಾರ್ಯವಿರುವುದಿಲ್ಲ. ಇಂಥ ಪದ್ಧತಿಗಳನ್ನು ಜಾರಿಗೆ ತರುವುದಾದರೆ ನಮ್ಮ ಮಿತ್ರರು ಹೇಳಿದ ಕಷ್ಟಗಳು ಇರುವುದಿಲ್ಲ ಸರ್ಕಾರಕ್ಕೂ ಕೂಡ ಒಳ್ಳೆಯ ಹೆಸರು ಬರುತ್ತದೆ. ಇಂಥ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಸೂಚಿಸುತ್ತೇನೆ.

ಸಾರ್ವಜನಿಕ ವಾಹನಗಳ ಮೇಲೆ ಸರ್ಕಾರದ ಹತೋಟಿ ಎಷ್ಟರಮಟ್ಟಿಗಿದೆ ಎನ್ನುವ ವಿಷಯವನ್ನು ಈಗಾಗಲೇ ಮಾನ್ಯ ಮಿತ್ರರನೇಕರು ತಿಳಿಸಿದ್ದಾರೆ. ಇದು ಎಲ್ಲರಿಗೂ ತಿಳಿದಿರತಕ್ಕ ವಿಷಯ, ಗೋಪ್ಯವಾದದ್ದೇನೂ ಇಲ್ಲ, ಹೊಸದಾಗಿ ತಿಳಿಸಬೇಕಾದದ್ದೂ ಇಲ್ಲ. ಹತ್ತು-ಹತ್ತು ಮೈಲಿಗೆ ಕಾನ್ಸ್‌ಟೇಬಲುಗಳು ಬಸ್‌ನವರಿಂದ ರುಜು ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಯಾವ ಕಾನೂನಿಗೆ ಅನುಸಾರವಾಗಿ ತೆಗೆದುಕೊಳ್ಳುತ್ತಾರೆ, ಆ ರೀತಿ ರುಜು ಪಡೆದಿರುವ ಪುಸ್ತಕಗಳೇನಾದರೂ ಇವೆಯೋ ಅಥವಾ ಇಲ್ಲವೋ, ಈರೀತಿ ಮಾಡುವುದರ ಉದ್ದೇಶವೇನೋ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಪದ್ಧತಿಯನ್ನು ನೋಡಿದರೆ, ಇದರಿಂದ ಸರ್ಕಾರದ ಅಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಆಗತಕ್ಕ ಅವಹೇಳನ ನಾಗರಿಕರು ತಲೆ ತಗ್ಗಿಸುವಂಥದ್ದಾಗಿದೆ. ವರ್ತೂರಿನಲ್ಲಿರತಕ್ಕ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್ ವೈಟ್‌ಫೀಲ್ಡ್ ಹತ್ತಿರ ನಿಂತಿರುತ್ತಾನೆ. ಅವನು ಸ್ಪೈನು ಪಡೆಯಲು ಬಂದಿದ್ದೇನೆಂದು ಹೇಳುತ್ತಾನೆ. ಆ ಸ್ಪೈಕ್ ಎನ್ನುವುದು ಏನೆಂದು ತಮಗೆಲ್ಲ ಗೊತ್ತಿದೆ ; ಎರಡು ಆಣೆ, ನಾಲ್ಕು ಆಣೆ ಅವನಿಗೆ ಕೊಡಬೇಕು, ಅಷ್ಟೆ. ಇಂಥ ಆಡಳಿತ ಈಗಲೂ ಇರಬೇಕೇ? ಒಬ್ಬ ಬಸ್ ಆಪರೇಟರ್ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಸ್ ತೆಗೆದುಕೊಂಡು ಹೋಗಬೇಕಾದರೆ, 12 ಪೋಲೀಸ್ ಸ್ಟೇಷನ್‌ಗಳು ಸಿಕ್ಕುತ್ತವೆ. ಅಲ್ಲಿ ಪ್ರತಿದಿನವೂ ನಾಲ್ಕಾಣೆ ಕೊಡುತ್ತಾನೆ. ಇದರ ಜೊತೆಗೆ ವಾರದ ಮಾಮೂಲು, ತಿಂಗಳ ಮಾಮೂಲು ಇದ್ದೇ ದೆಇ. ಇವೆಲ್ಲ ಸಣ್ಣ ವಿಚಾರಗಳು. ಸರ್ಕಾರದ ಗೌರವಕ್ಕಾಗಿ ಸರ್ಕಾರದ ಮೇಲ್ಮೆಗಾಗಿ, ಪೋಲೀಸ್ ಇಲಾಖೆಯ ಔನ್ನತ್ಯಕ್ಕಾಗಿ, ಇಂಥ ಪದ್ಧತಿಯನ್ನು ತಪ್ಪಿಸಿ, ಇನ್ನು ಮುಂದಾದರೂ ಈ ಅವ್ಯವಸ್ಥೆ ನಡೆಯದಂತೆ ಮಾಡಿದರೆ ಚೆನ್ನಾಗಿರುತ್ತದೆ.

ದಾರಿಯಲ್ಲಿ ಹೋಗುವಾಗ ಬಸ್‌ಗಳನ್ನು ಇಲಾಖೆಯವರು ಚೆಕ್ ಮಾಡುತ್ತಾರೆ. ಆದರೆ ಚೆಕ್ ಮಾಡಬೇಕು ಎಂದು ಮಾಡುವುದಿಲ್ಲ. ಇಂಥ ಚೆಕಿಂಗ್‌ನಿಂದ ಬಸ್ ಆಪರೇಟರುಗಳಿಗೂ ಸುಖವಿಲ್ಲ, ಇಲಾಖೆಗೂ ಕೀರ್ತಿಇಲ್ಲ, ಸರ್ಕಾರಕ್ಕೂ ಆದಾಯವಿಲ್ಲ. ಸರ್ಕಾರಕ್ಕೆ ಕೀರ್ತಿ ಬರುವಂತೆ, ಮತ್ತು ಸಾರ್ವಜನಿಕರಿಗೂ, ಬಸ್ ಆಪರೇಟರುಗಳಿಗೂ ತೊಂದರೆಯುಂಟಾಗದಂತೆ, ಕೆಲಸ ಕಾರ್ಯಗಳನ್ನು ನಡೆಸಿ, ಸರ್ಕಾರಕ್ಕೆ ಹೆಚ್ಚಿನ ಆದಾಯ ಬಂದು ಬೊಕ್ಕಸ ತುಂಬುವಂತಾಗಲಿ ಎಂದು ಹೇಳುತ್ತಿದ್ದೇನೆ.

5 P.M.

Mr. SPEAKER.—Before I call upon the Finance Minister to reply, I desire to make an announcement. Since yesterday, 19 members have taken part in the debate out of which 11 are from the Opposition and 8 from the Congress. Out of the 11 from the Opposition, 5 are P.S.P., 5 Independents and one is S.C.F.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಎರಡು ದಿವಸ ನಡೆದಂಥ ಚರ್ಚೆಯಲ್ಲಿ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು

ಸರಕಾರದ ಗಮನಕ್ಕೆ ತಂದಿದ್ದಾರೆ. ಆದರೆ ಪೋಲಿಸ್ ಆಡಳಿತದಬಗ್ಗೆ ಚರ್ಚೆಮಾಡಿದಾಗ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ವಿಷಯ ಚರ್ಚೆಮಾಡಿದಾಗ ಯಾವ ಅಂಶಗಳನ್ನು ಸದಸ್ಯರು ಹೇಳಿದರೋ ಅವೇ ಅಂಶ ಗಳನ್ನು ಬೇರೆ ವಿಷಯದಲ್ಲಿ ಕೂಡ ಎತ್ತಿ ಹೇಳಿದ್ದಾರೆ. ವಿರೋಧಿಪಕ್ಷದ ನಾಯಕರಾದ ಶ್ರೀ ಕೆಂಚಪ್ಪನವರು ಈಗ ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಸರಕಾರ ದವರು ವಿಧಿಸಿರತಕ್ಕಂಥ ತೆರಿಗೆಗಳು ಬಹಳ ಭಾರವಾದು ದಾಗಿವೆ; ಜನಗಳು ತೆರಿಗೆಯ ಭಾರವನ್ನು ಹೊರುವು ದಕ್ಕೆ ಸಾಧ್ಯವಿಲ್ಲ ಮತ್ತು ತೆರಿಗೆಯನ್ನು ವಿಧಿಸುವುದರಲ್ಲಿ ಯಾವ ತತ್ತ್ವವೂ ಅಡಕವಾಗಿಲ್ಲ ಎಂದು ಹೇಳಿದ ಅನೇಕ ಸದಸ್ಯರ ಪೈಕಿ ಅವರೂ ಒಬ್ಬರು ಬಹಳ sweeping ಆಗಿ ಅವರು ಹೇಳಿದ್ದಾರೆ ಎಂದು ಎಂದರೆ ಅದೇನೂ ಅತಿಶಯೋಕ್ತಿಯಾಗಲಾರದು. ತೆರಿಗೆಗಳನ್ನು ವಿಧಿಸುವ ವಿಷಯದಲ್ಲಿ ಹೆಚ್ಚಿನ ಉಪಯುಕ್ತ ಸಲಹೆ ಗಳನ್ನು ಕೊಡುತ್ತಾರೆಂದೂ ಅಥವಾ ಈಗ ವಿಧಿಸತ ಕ್ಕಂಥ ತೆರಿಗೆಯ ವಿಷಯದಲ್ಲಿ ಅಡಕವಾಗಿರತಕ್ಕಂಥ ಲೋಪದೋಷಗಳನ್ನು ಅನೇಕ ಸದಸ್ಯರು ಎತ್ತಿ ತೋರಿ ಸುತ್ತಾರೆಂದೂ ನಾನು ಎಣಿಸಿದ್ದೆ. ಏಕೆಂದರೆ ಈ ವಿಷಯವು ಬಹಳ ಪ್ರಮುಖವಾದುದು. ಸರಕಾರ ವನ್ನು ನಡೆಸತಕ್ಕಂಥವರೇ ಆಗಲಿ, ವಿರೋಧಪಕ್ಷದ ವರೇ ಆಗಲಿ ತೆರಿಗೆ ವಸೂಲಿ ಮಾಡತಕ್ಕಂಥ ವಿಷಯ ದಲ್ಲಿ ಬಹಳ ರಚನಾತ್ಮಕವಾದ ಅಭಿಪ್ರಾಯವನ್ನು ಇಟ್ಟುಕೊಳ್ಳಬೇಕಾಗುವುದು. ಮತ್ತು ಯಾವ ಆಧಾ ರದ ಮೇಲೆ ಏತಕ್ಕೋಸ್ಕರವಾಗಿ ವಿವಿಧ ತೆರಿಗೆ ಗಳನ್ನು ಪ್ರಜೆಗಳ ಮೇಲೆ ಹೇರಬೇಕು ಎನ್ನುವ ವಿಷಯ ದಲ್ಲ ಖಚಿತವಾದಂಥ ಅಭಿಪ್ರಾಯವನ್ನು ಇಟ್ಟುಕೊಳ್ಳದೇ ಹೋದರೆ ರಾಜ್ಯಭಾರವನ್ನು ನಡೆಸುವದಕ್ಕಾಗಲಿ, ಹೊಸ ತೆರಿಗೆಗಳನ್ನು ವಿಧಿಸುವುದಕ್ಕಾಗಲಿ ಬಹಳ ಕಷ್ಟ. ಈ ವಿಷಯದಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯುವ ದಕ್ಕೆ ಪ್ರಯತ್ನವಾಡಬೇಕು. ಸರಕಾರದವರಾಗಲಿ ವಿರೋಧ ಪಕ್ಷದವರಾಗಲಿ ದೇಶದಲ್ಲಿ ಇರತಕ್ಕಂಥ ಟ್ಯಾಕ್ಸೇಷನ್ ಬಗ್ಗೆ ಒಂದು ಖಚಿತವಾದ ಅಭಿಪ್ರಾ ಯವನ್ನು ಹೊಂದಿರಬೇಕು ಎಂದು ಬಹು ವಿನಯದಿಂದ ಹೇಳುತ್ತೇನೆ. ಸ್ವರಾಜ್ಯವು ಬರುವ ಮೊದಲು ಸುಲ ಭವಾಗಿ ಬರತಕ್ಕಂಥ ಮಾರ್ಗ ಮತ್ತು ದೊಡ್ಡ ದೊಡ್ಡ ವರಿಗೆ ಹೆಚ್ಚಿಗೆ ಬೀಳದಂಥ ಮಾರ್ಗವನ್ನು ಅನುಸರಿಸಿ ತೆರಿಗೆಗಳನ್ನು ವಿಧಿಸುತ್ತಿದ್ದರು ಎಂಬುದು ಮಾನ್ಯ ಸದಸ್ಯರ ಗಮನದಲ್ಲಿ ಇರಬಹುದು. ಆಗ್ಗೆ ಇದ್ದಂಥ ಸಮಾಜ ವ್ಯವಸ್ಥೆಯು ಕ್ಯಾಪಿಟಾಲಿಸ್ಟಿಕ್ ನೇಚರ್ ಉಳ್ಳದಾಗಿತ್ತು. ಆದುದರಿಂದ ಯಾರು ಆಗ ಆ ಸಮಾಜದ ಪ್ರತಿನಿಧಿಗಳು ಇದ್ದರೋ ಅಂಥವರ ಒಪ್ಪಿಗೆ ಪಡೆದು ಆ ದೃಷ್ಟಿಯಿಂದ ತೆರಿಗೆಯ ರೂಪ ಆಗ ನಿರ್ಧರಿ ಸಲ್ಪಡುತ್ತಿತ್ತು ಮತ್ತು ತೆರಿಗೆಯ ಮೊತ್ತ ಸಹ ಅದೇ ರೀತಿಯಾಗಿ ನಿರ್ಧರಿಸಲ್ಪಡುತ್ತಿತ್ತು. ದೇಶಕ್ಕೆ ಸ್ವರಾಜ್ಯ ಬಂದ ಮೇಲೆ ಸಮಾಜರಚನೆ ಬದಲಾಯಿಸಿದೆ. ಸಮಾ ಜದ ಯಾವ ಯಾವ ವರ್ಗಗಳಿಗೆ ಎಷ್ಟರಮಟ್ಟಿಗೆ ಈ ತೆರಿಗೆಗಳನ್ನು ಅನ್ವಯಿಸಬೇಕು, ಯಾರು ತೆರಿಗೆಗಳನ್ನು ಹೊರಲಿಕ್ಕೆ ಸಾಧ್ಯ ಎಂಬುದನ್ನು ಗಮನದಲ್ಲಿಟ್ಟು ಕೊಂಡು, ಆ ರೀತಿಯಾಗಿ ತೆರಿಗೆಯ ವ್ಯವಸ್ಥೆ ಹೆಚ್ಚಾಗಿ ರೂಪುಗೊಳ್ಳುತ್ತಿದೆ. ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸಾಯಿಟಿ ಇರ ಬೇಕೆಂಬ ನಿರ್ಣಯ ಅಂಗೀಕಾರವಾದ ಮೇಲೆ, ಅದು ದೇಶದ ಮುಂದೆ ಇರತಕ್ಕಂಥ ಒಂದೇ ಒಂದು ಗುರಿ. ವೈಯಕ್ತಿಕವಾಗಿ ಈ ವಿಚಾರದಲ್ಲಿ ನಾವು ಭಿನ್ನಾಭಿ ಪ್ರಾಯವನ್ನು ಹೊಂದಿದ್ದರೂ ಕೂಡ, ದೇಶದ ಮುಂದೆ ಇರತಕ್ಕದ್ದು ಅದು ಒಂದೇ ಗುರಿ. ಅಂದರೆ, ದೇಶದಲ್ಲಿ ಇರತಕ್ಕಂಥ ಆದಾಯದಲ್ಲಿ ವಿಪರೀತವಾದ ಅಂತರವು ಇರಬಾರದು, ಕ್ರಮೇಣ ಅಂತರವು ಕಡಮೆಯಾಗಬೇಕು, ಆ ರೀತಿ ಅಂತರ ಕಡಮೆ ಮಾಡಬೇಕಾದರೆ ಶ್ರೀಮಂತ ರಿಂದ ಹಣವನ್ನು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಕಾನೂನು ಪ್ರಕಾರ ಅವರಿಂದ ತೆರಿಗೆಯ ರೂಪದಲ್ಲಿ ತೆಗೆದುಕೊಂಡು ಅಂತರವನ್ನು ದಿನ ದಿನಕ್ಕೆ ಕಡಮೆ ಮಾಡಿ, ಸಮಾಜದ ಪುನರ್ವ್ಯವಸ್ಥೆಗೆ ಆ ಹಣವನ್ನು ಉಪ ಯೋಗಿಸಬೇಕು ಎಂಬ ಮೂಲ ತತ್ತ್ವವನ್ನು ಎಲ್ಲರೂ ಅಂಗೀಕರಿಸಿದ್ದಾರೆ. ಆ ದೃಷ್ಟಿಯಿಂದಲೇ ಕೇಂದ್ರ ಸರಕಾರದವರು ನಮ್ಮ ದೇಶದಲ್ಲಿಯ Taxation structure ಪರಿಶೀಲನೆ ಮಾಡಿದ್ದಾರೆ. ತಾವು Taxation Enquiry Commission ವರದಿಯನ್ನು ಓದಿದರೆ, ಆ ಕಮಿಟಿಯವರು ದೀರ್ಘವಾಗಿ, ಆಳವಾಗಿ, ಆಮೂಲಾಗ್ರವಾಗಿ ಪರಿಶೀಲನೆ ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಅಷ್ಟೇ ಅಲ್ಲದೆ ಕೇಂದ್ರದ ಹಣಕಾಸಿನ ಮಂತ್ರಿಯವರು ಒಂದು panel of economists ಕೂಡಿಸಿ ವಿಚಾರಣೆ ಮಾಡಿದ್ದಾರೆ. ಇಷ್ಟೇ ಅಲ್ಲದೆ ತಜ್ಞ ಪ್ರೊಫೇಸರರಾದ ಕಲ್ಡೋರ ಎಂಬವರನ್ನು ಕರೆಸಿ ನಮ್ಮ ದೇಶದಲ್ಲಿಯ ಹಣಕಾಸಿನ ಪರಿಸ್ಥಿತಿಯನ್ನೂ Taxa- tion structureನ್ನೂ ಪರಿಶೀಲನೆ ಮಾಡಿದ್ದಾರೆ. ಅಂದಮೇಲೆ ಇಷ್ಟೆಲ್ಲ ಅರ್ಥ ಮಾಡಿಕೊಳ್ಳಬೇಕು. ಇನ್ನು ಸಮಾಜವನ್ನು ಈ ಗುರಿಯಕಡೆಗೆ ತೆಗೆದುಕೊಂಡು ಹೋಗಬೇಕು; ಅದನ್ನು ಪುನರ್ವ್ಯವಸ್ಥೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವಾಗಿ taxation ಬಗ್ಗೆ ಯಾವ ದೃಷ್ಟಿಯನ್ನು ಇಟ್ಟುಕೊಳ್ಳಬೇಕು ಎಂಬುದಕ್ಕೆ ಸರಿಯಾದ ಅಭಿಪ್ರಾಯ ಪಟ್ಟಿದ್ದಾರೆ. ಇತ್ತೀಚೆಗೆ ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳು ಪಾರ್ಲಿ ಮೆಂಟಿನಲ್ಲಿ ಬಜೆಟ್ ಮಂಡಿಸಿದಂಥ ಕಾಲದಲ್ಲಿ ಮಾಡಿದ ಬಜೆಟ್ ಭಾಷಣವನ್ನು ನೋಡಿದರೆ ಮತ್ತು ವಿಧಿಸ ಬೇಕೆಂದು ಇರತಕ್ಕಂಥ ತೆರಿಗೆಯ ಮಾದರಿಯನ್ನು ನೋಡಿದರೆ ಆದಾಯ ಬರತಕ್ಕಂಥ ಜನಗಳ ಅಂತರ ಕಡಮೆ ಮಾಡುವುದಕ್ಕೋಸ್ಕರ ಅನೇಕ ಸಲಹೆ ಮಾಡಿ ದ್ದಾರೆ ಎಂದು ಗೊತ್ತಾಗುತ್ತದೆ. ಅದನ್ನು ಎಲ್ಲರೂ ಒಪ್ಪಿದ್ದಾರೆ. ನಾಲ್ಕರಲ್ಲಿ ಮೂರು ಪಾಲು ಒಪ್ಪಿದ್ದಾರೆ. ಆದರೆ ಬಾಧೆ ಬರುವವರು ಒಪ್ಪಿಲ್ಲ. ರೇಟ್ ವಿಚಾರ ದಲ್ಲಿ ಭಿನ್ನಾಭಿಪ್ರಾಯವಿರಬಹುದು ಇದಕ್ಕೋಸ್ಕರ ಯಾರೂ ಪ್ರಶ್ನೆ ಮಾಡಿಲ್ಲ. ಎಲ್ಲರೂ ಸ್ವಾಗತಿಸಿದ್ದಾರೆ. ಮೊನ್ನೆ ಮೊನ್ನೆ ಪ್ರಾಯಶಃ 15-20 ದಿವಸಗಳ ಹಿಂದೆ ಕೇಂದ್ರ ಸರಕಾರದ ಹಣಕಾಸಿನ ಮಂತ್ರಿಗಳಾದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು Local Bodies taxation structure ನ್ನು ಕೂಡ ಪರಿಶೀಲನೆ ಮಾಡಬೇಕೆಂದು ತಿಳಿಸಿದ್ದಾರೆ. ಪ್ರೊಫೇಸರ್ ಕಾಲ್ಡರ ಅವರೂ ಕೂಡ ಪರೀಕ್ಷೆ ಮಾಡಬೇಕು ಎಂದು ಹೇಳಿದ್ದಾರೆ. ಆದರೆ Taxation Enquiry Commission ಯವರು ಈ ವಿಷಯವನ್ನು ಪರಿಶೀಲನೆ ಮಾಡಿದ್ದಾರೆ. ಇಷ್ಟು ಪೀಠಿಕೆಯನ್ನು ಏಕೆ ಹೇಳಬೇಕಾಯಿತು ಎಂದರೆ ಕೆಂಚಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡಿ ದರು. ಕೆಂಚಪ್ಪನವರು ಹಾಗೆ ಹೇಳುವುದು ಬಹು ಸುಲಭ. ತೆರಿಗೆ ವಿಪರೀತವಾಗಿ ಬಿದ್ದಿದೆ; ಬೆನ್ನು ಮೂಳೆ ಯು ಮುರಿದು ಹೋಗಿದೆ ಎಂದು sweeping ಟೀಕೆ ಮಾಡಿ ಹೇಳಿದರೆ ಉತ್ತರ ಕೊಡಲು ಬಹಳ ಕಷ್ಟ. ಅಂಕಿ ಅಂಶಗಳನ್ನು ಸಭೆಯ ಮುಂದೆ ಇಟ್ಟು ಸಮರ್ಥನೆ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಶ್ರೀ ಕೆಂಚಪ್ಪ ನವರು ಪ್ರಸ್ತಾಪ ಮಾಡಿದ ವಿಷಯದ ಮೇಲೆ ನನಗೆ ಸಾಧ್ಯವಿದ್ದಷ್ಟು ಹೇಳಿ ಖರ್ಚು ವೆಚ್ಚಗಳ ಅಂಕಿ ಅಂಶ ಗಳನ್ನು ಸಭೆಗೆ ತಿಳಿಸುತ್ತೇನೆ. ಏಕೆಂದರೆ ಈ ಮಾಹಿ ತಿಯು ಈ ವಿಷಯದಲ್ಲಿ ಬಹಳ ಅಗತ್ಯವಾದುದು. ಪ್ರಜೆ

(ಶ್ರೀ ಟಿ. ಮರಿಯಪ್ಪ)

ಗಳಿಗೆ ನಿಜವಾದ ಭಾವನೆ ಬರಬೇಕು. ಈ ದೇಶದ taxation structure ನ್ನೂ ಅಕ್ಕಪಕ್ಕದವರ taxation structure ನ್ನೂ ತಿಳಿದುಕೊಳ್ಳಬೇಕು. ಮೊದಲು ಪರ್‌ಕ್ಯಾಪಿಟ ಟ್ಯಾಕ್ಸೇಷನ್ ಎಷ್ಟಿಷ್ಟಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಆ ದೃಷ್ಟಿಯಿಂದ ನಾನು ಈ ವಿಷಯಗಳನ್ನು ಪ್ರಸ್ತಾಪಮಾಡಿ ಸ್ವಲ್ಪ ಪೀಠಿಕಾ ರೂಪವಾಗಿ ಕೆಲವು ಮಾತುಗಳನ್ನು ಹೇಳಿದರೆ ಈ ಸಭೆ ಕ್ಷಮಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇದು ಆಲ್ ಇಂಡಿಯಾ-ಪಾಲಿಸಿಗೆ ಸಂಬಂಧಪಟ್ಟದ್ದು. ಆದ್ದರಿಂದ ಮಾನ್ಯ ಸ್ನೇಹಿತರಾದಂಥ ಶ್ರೀ ಅಣ್ಣಾರಾಯರು ಕುಪಿತರಾಗಿ ಪ್ರಶ್ನೆ ಹಾಕಬಾರದು. ಇದರ ಬಗ್ಗೆ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಷನ್ನಿನವರು ಒಂದು ವಿಷಯವನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇನ್ನೊಂದು ಪ್ರಶ್ನೆಯನ್ನು ಶ್ರೀ ಕೆಂಚಪ್ಪನವರು ಕೇಳಿದರು: ಯಾರು ತೆರಿಗೆ ಹೊರುವುದಕ್ಕೆ ಸಾಧ್ಯವೋ ಅವರ ಮೇಲೆ ತೆರಿಗೆ ಹಾಕಬೇಕು ಎಂದು. "Equity in taxation" ಎಂಬುದರ ಮೇಲೆ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಷನ್ನಿನವರು ಒಂದು ಪ್ಯಾರಾ ಬರೆದಿದ್ದಾರೆ. ಅದು ಈ ರೀತಿ ಇದೆ:

Report of the Taxation Enquiry Commission, 1953-54, Vol. I, Page 145: Objective of lessening inequalities in income and wealth (Para 5) :

"An important question for tax policy is posed by the need to strike a balance between the objectives of achieving economic equality through the tax mechanism, and of maintaining unimpaired the flow of investment and savings which make for the continued progress of productive enterprise. Greater production and better distribution are both objectives of high importance in relation to general economic and social policy. It has been said that in the conditions of this country increase in production is a more important objective than improvement in distribution..."

Para 6: "A distinction may be made, in this connection, between the type of inequality which may be regarded as economically necessary to evoke additional effort or enterprise and inequality which is unneecessary for the purpose. It seems clear that there is in the economy an appreciable degree of avoidable inequality in incomes, earned as well as unearned, and in wealth."

Page 146, Para 7 : "It is true, however, that inequalities of income and wealth are marked characteristics of under developed economies traceable to their economic condition and institutional set-up, and substantial progress towards equality can only be achieved by the gradual elimination by set purpose of certain fundamental sources of inequality. The tax system can certainly assist in this process by recognition of the fact that distribution of income is not immutable but is capable of adjustment if definite emphasis is directed towards it in the fiscal system"

Para 8 : "A tax policy aimed at lessening inequalities through reducing incomes at the higher levels is only one form which fiscal operations may assume in this sphere. An important complementary aspect lies in the part that public expenditure for economic development (e. g., agriculture and irrigation) and expansion of social services like education and health, may play in strengthening the position of the weaker sections of the community."

Page 147, Para 11 : Equity in taxation :

"At this stage, we may consider the related question of distribution of the burden of the tax system on a criterion which is perhaps the most widely discussed of all, *viz.*, equity. In popular discussions of the problem, equity or fairness in the distribution of the burden is usually regarded as an important, if not the outstanding, test of a tax system, and its ability to inspire that confidence in the fiscal basis of Government which sustains public morale and promotes productive effort and economic progress. Yet, there is hardly any other attribute of the tax system which is more difficult to define or measure. An elementary application of the concept of equity requires the equal treatment of persons in similar economic circumstances. But the economic position and circumstances of individuals vary widely, and the range of equity secured by the appli-

cation of the concept is, therefore, not very wide in its operation. Where economic circumstances differ, the question arises as to what difference in tax treatment would fulfil the requirements of equity. Now the most commonly accepted application of the criterion of equity is found in the principle of levying taxes according to relative ability-to-pay. Ability-to-pay in Turn points to some degree of progression, if fairness in relative treatment of persons of unequal resources is to be achieved. No principle or formula, however, yields even approximately the pattern of progression which would be appropriate in the conditions of any country. In addition, there is the need to take into account any disincentive effects which progression may have on savings and investment and, therefore, on production. The degree of progression considered desirable over various income-ranges will depend, therefore, on the need to strike a balance between the aim of lessening economic inequalities through use of the tax instrument and that of sustaining and strengthening the incentives to invest and to increase production."

Sri K. KENCHAPPA (Hiriyur).—What about direct and indirect taxation and the effect thereof on the public ?

Sri T. MARIAPPA.—Page 148, Para 13: Tax system for development programme :

"The question of the kind of tax system that will be suitable for the development programme of the country with particular reference to the resources that it requires, needs some further consideration. Taxation, *by itself*, can only reduce incomes and, therefore, must reduce private consumption and investment. The proceeds of taxation are, however, available to the public sector ; and it is public expenditure that determines whether taking the public and private sectors together, the net effect of fiscal operations is to reduce or increase the use of the current income of the community for the two purposes of consumption and investment."

Page 149, Para 15 :

"It is necessary to emphasise that higher taxation of luxury articles will, by itself, not produce sufficient revenue. For any substantial receipts from commodity taxation and appreciable restraint on consumption in the economy as a whole, it will be necessary to extend excise and sales taxation to the consumption of lower-income groups and of goods which are commonly classed as necessaries, including several goods which are included in the Essential Goods Act under Article 286 of the Constitution."

This is with regard to indirect taxation. Then, it is further said:

"Some of those goods are in fact already subject to Central taxation at fairly high rates; a few of them are not essentials in the strict sense of being necessaries of life for the lowest income groups. There are, however, commodities like kerosene which are necessaries in that sense but are nevertheless taxed at present. An extension of the taxation of necessaries appears unavoidable, if significant results by way of diversion of resources for financing public investment, are to be secured."

Page 150, Para 16: Limits of taxation: taxable capacity :

"To which limits can the process of increasing resources for development through taxation be carried without danger to the stability of the economy? The question of the resources that can be raised for the development programme and, therefore, of the limits of taxation is commonly put in terms of the *taxable capacity* (a)

(SRI T. MARIAPPA.)

of the economy as a whole, (*b*) of particular sections of the population, and (*c*) sometimes, in the sense of scope for optimum utilisation with reference to particular tax heads."

Para 17: "In considering the question in relation to the tax system as a whole, the proportion of the total tax revenue to national income becomes important. Indian tax revenues only amount to between seven and eight per cent. Of the national income...."

So far as Mysore is concerned, it does not exceed seven to eight per cent.

"........and this proportion is lower than in many other countries, including some in South East Asia. It has been suggested that this indicates the great potentialities that exist for additional taxation before the limits of taxable capacity are reached, while some others draw the opposite inference that taxable capacity has been exhausted and there is little scope for additional taxation."

ಸ್ವಾಮಿ, ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಷನ್ನಿನವರು ಕೊಟ್ಟಿರತಕ್ಕ ಸಲಹೆಗಳನ್ನೆಲ್ಲಾ ನಾವು ಕೂಲಂಕಷ ವಾಗಿ ಪರಿಶೀಲನೆ ಮಾಡಿದರೆ, ನಮ್ಮ ದೇಶದಲ್ಲಿ ಇನ್ನೂ ತೆರಿಗೆ ಹಾಕುವುದಕ್ಕೆ ಅವಕಾಶವಿದೆ. ಆ ಲಿಮಿಟ್ಟನ್ನು ನಾವು ಇನ್ನೂ ರೀಚ್ ಮಾಡಲಿಲ್ಲ. ಆದ್ದರಿಂದ ತಾವು ತೆರಿಗೆಯ ಹೊರೆ ವಿಶೇಷವಾಗಿದೆಯೆಂದು ಹೇಳಿದರೆ, ಅದನ್ನು ಅಂಕಿ ಅಂಶಗಳಿಂದ ಪುಷ್ಟೀಕರಿಸುವುದಕ್ಕೆ ಸಾಧ್ಯವಿಲ್ಲವೆಂದು ನಾನು ಅವರ ವರದಿಯಿಂದ ಹೇಳು ತ್ತೇನೆ. ಆ ವರದಿಯು ಬಹಳ ತಜ್ಞರಾದವರಿಂದ ಮತ್ತು ವಿಶೇಷವಾದ ಅನುಭವಸ್ಥರಿಂದ ಮತ್ತು ಆಡಳಿ ತದ ಅನುಭವಶಾಲಿಗಳಿಂದ ತಯಾರಾಗಿದೆ.

ಈ ಸಮಿತಿಯ ವರದಿ ಅಧ್ಯಯನಕ್ಕೆ ಬಹಳ ಯೋಗ್ಯ ವಾಗಿದೆ. ಸಮಿತಿಯವರು ಕೇಂದ್ರ ಮತ್ತು ಸಂಸ್ಥಾ ನದ ಹಣಕಾಸಿನ ಸ್ಟ್ರಕ್ಚರ್ ವಿಷಯ ಬಹಳ ವಿವರವಾಗಿ ಬರೆದಿದ್ದಾರೆ. ಈಗ ಮಾನ್ಯ ಸದಸ್ಯರು ನಡೆಸಿರತಕ್ಕ ಚರ್ಚೆ ನನ್ನ ಖಾತೆಗೆ ಸಂಬಂಧಪಟ್ಟ ವಿಷಯವಾಗಿರು ವುದರಿಂದ ನಾನು ಕೆಲವು ಉದಾಹರಣೆಗಳನ್ನು ಸಮಿತಿಯ ವರದಿಯಿಂದ ಓದಿದ್ದೇನೆ. ಆದರೆ ನಮ್ಮ ದೇಶದಲ್ಲಿ ತೆರಿಗೆಯ ಹೊರೆ ಜಾಸ್ತಿ ಇದೆಯೆಂದು ಹೇಳಿದರೂ ಅದನ್ನು ನಾನಂತೂ ಒಪ್ಪುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಎಷ್ಟು ತೆರಿಗೆಯ ಹೊರೆ ಇದ್ದರೆ ಅದನ್ನು ಜಾಸ್ತಿ ಎಂದು ಒಪ್ಪುತ್ತೀರಿ?

ಶ್ರೀ ಟಿ. ಮರಿಯಪ್ಪ.—ಅದೆಲ್ಲ ನ್ಯಾಷನಲ್ ಇನ್‌ಕಂ ಮೇಲೆ ಹೋಗುತ್ತದೆ. ಜನರು ಟ್ಯಾಕ್ಸ್ ಕೊಡಲು ಸಿದ್ಧರಾಗಿದ್ದಾರೆ. ಇದೇ ಸಮಯದಲ್ಲಿ ಮೈಸೂರಿ ನಲ್ಲಿ ತಲೆ ಒಂದಕ್ಕೆ ಕಂದಾಯ ಎಷ್ಟಿದೆ ಅಕ್ಕಪಕ್ಕದ ಪ್ರಾಂತಗಳಲ್ಲಿ ಎಷ್ಟಿದೆ ಎಂಬುದನ್ನು ಅಂಕಿ ಅಂಶಗ ಳಿಂದ ಈ ಸಭೆಯ ಗಮನಕ್ಕೆ ತರುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಏಳು ಅಥವಾ ಎಂಟು ಪರ್ಸೆಂಟ್ ಮೇಲೆ ಎಷ್ಟು ಹಾಕಬಹುದು?

ಶ್ರೀ ಟಿ. ಮರಿಯಪ್ಪ.—ಶೇಕಡ ಏಳು ಅಥವಾ ಶೇಕಡ ಎಂಟರಂತೆ ಈಗಾಗಲೇ ತೆರಿಗೆ ಬಿದ್ದಿದೆ ಎಂದು ಹೇಳಿದ್ದಾರೆ. ಬಾಕಿ ಕಡೆ, there is no scope for further taxation. ಈಗ ಮೈಸೂರನ್ನು ಅಕ್ಕ ಪಕ್ಕದ ಪ್ರಾಂತಗಳೊಂದಿಗೆ ಹೋಲಿಸೋಣ. 1956-57ನೆಯ ವರ್ಷದ ಅಂಕಿ ಅಂಶಗಳ ಆಧಾರದ ಮೇಲೆ ಅಂಕಿ ಅಂಶಗಳನ್ನು ತಯಾರು ಮಾಡಿದ್ದೇವೆ. ಇತರ ಪ್ರಾಂತಗಳ ತೆರಿಗೆಯ ಪ್ರಮಾಣ ಯಾವ ರೀತಿ ಇದೆ ಯೆಂದರೆ ಆಂಧ್ರದಲ್ಲಿ ಬರತಕ್ಕ ಟ್ಯಾಕ್ಸ್ 8·93 ಆಗುತ್ತದೆ. ಮದರಾಸಿನಲ್ಲಿ 8.82, ಬೊಂಬಾಯಿನಲ್ಲಿ 12.11; ವೆಸ್ಟ್ ಬಂಗಾಳದಲ್ಲಿ 11.54, ಕೇರಳದಲ್ಲಿ 9.65 ಮತ್ತು ಮೈಸೂರಿನಲ್ಲಿ 6.49.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಇವೆಲ್ಲಾ ಓಲ್ಡ್ ಮೈಸೂರಿನ ಫಿಗರ್ಸ್ ಅಲ್ಲವೇ?

ಶ್ರೀ ಟಿ. ಮರಿಯಪ್ಪ.—ನಾನು ತಮಗೆ ಅಂಕಿ ಅಂಶಗಳನ್ನು ಕೊಡುವಾಗ ಪುನಃ ಟ್ಯಾಕ್ಸ್ ಹಾಕಬೇ ಕೆಂದು ವಾದಿಸುತ್ತಾ ಇಲ್ಲ. ಇವತ್ತು ಟ್ರಾವಂಕೂರ್, ಕೊಚ್ಚಿನ್, ಆಂಧ್ರ, ಮದ್ರಾಸ್, ಬೊಂಬಾಯಿ, ಪ್ರಾಂತಗಳನ್ನು ತೆಗೆದುಕೊಳ್ಳಿ. ಮೈಸೂರನ್ನು ಆವರಿಸಿಕೊಂಡಿರುವ ಈ ಪ್ರದೇಶವನ್ನು ತೆಗೆದು ಕೊಂಡರೆ ಅವರೆಲ್ಲದಕ್ಕಿಂತಲೂ ನಮ್ಮದು ಕಡಮೆ ಇದೆ. ಆದ್ದರಿಂದ ಭಯಪಡುವ ಅಗತ್ಯವಿಲ್ಲ. ಬೆನ್ನು ಮೂಳೆ ಮುರಿದುಹೋಗುತ್ತಿದೆ ಎಂದು ಹೇಳಿದ್ದನ್ನು ನಾನು ಒಪ್ಪುವುದಿಲ್ಲ.

ಇನ್ನೊಂದು ವಿಷಯ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳಾದ ಶ್ರೀ ಪೂಣಚ್ಚ ಅವರು ಇದ್ದಾರೆ. ಶ್ರೀ ಮಲ್ಲಪ್ಪನವರು ಇದ್ದಾರೆ. ಕೊಡಗಿನಲ್ಲಿ ಅವರು ಮೂರು ಕಾಸನ್ನೂ ಸಾಲ ತರುವುದಿಲ್ಲ. ಬರುವ ಟ್ಯಾಕ್ಸ್ ಆದಾಯಕ್ಕೆ ಸರಿಹೊಂದುವಂತೆ ಖರ್ಚು ಮಾಡುತ್ತಾರೆ. ಕೊಡಗಿನಲ್ಲಿದ್ದ ಹಾಗೆ ಯಾವ ಸ್ಟೇಟಿ ನಲ್ಲೂ ಇಲ್ಲ.

Sri C. K. RAJAIAH SETTY.—May I know the *per capita* income of Coorg?

Sri T. MARIAPPA.—Coorg is decidedly a very prosperous region.

ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಜಾಸ್ತಿ ಇದೆ. ಈಗ 2.35 ಸಾವಿರ, 50 ಸಾವಿರ ಬೆಲೆಯುಳ್ಳ ಕಾಫೀತೋಟ ಪಡೆದಿರುವವರು, 30 ಸಾವಿರ ಕಿತ್ತಳೇ ತೋಟ ಪಡೆ ದಿರುವವರು ಕಂದಾಯದ ಹೊರೆ ಭಾರ ಆಯಿತು ಎಂದು ಪ್ಲೀಡಿಂಗ್ ಮಾಡದೇ ಇದ್ದರೆ ಚೆನ್ನಾಗಿತ್ತು. ನಾವು ಹಾಕಿರುವುದು ಬಹಳ ಕಡಮೆ. ಯೂನಿಫಾರಂ ಟ್ಯಾಕ್ಸನ್ನು ಹಾಕಿರುವಾಗ ಬೊಂಬಾಯಿ ಮಟ್ಟಕ್ಕೆ ಹೈದರಾಬಾದ್ ಮಟ್ಟಕ್ಕೆ ಹಾಕುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮೈಸೂರು ರಾಜ್ಯ ಬಡತನದ ರಾಜ್ಯ ಎಂದು ತಮಗೆ ಗೊತ್ತಿಲ್ಲವೇ?

ಶ್ರೀ ಟಿ. ಮರಿಯಪ್ಪ.—ಮೈಸೂರು ದೇಶ ಅಷ್ಟು ಬಡತನದ ದೇಶವಲ್ಲ, ನಮ್ಮಲ್ಲಿ ಇಂಡಸ್ಟ್ರೀಸ್ ಡೆವಲಪ್ ಆಗಿವೆ. ಈ ವಿಷಯ ಪ್ರಸ್ತಾಪ ಮಾಡುವು ದಿಲ್ಲ. ಇನ್ನೊಂದು ಸಾರಿ ಹೇಳುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಮೈಸೂರಿನಿಂದ ಬರ ತಕ್ಕ ಟ್ಯಾಕ್ಸು ಎಷ್ಟು ಇದೆ ಎಂದು ಕೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ರಾಷ್ಟ್ರೀಯ ಆದಾಯವನ್ನು ಗೊತ್ತುಮಾಡುವಾಗ Statewise income is not readily available.

Sri C. K. RAJAIAH SETTY.—Very recently about 2 days back; some Madras Minister said that per capita income in Travancore-Cochin was Rs. 290 and that of Madras Rs. 270.

Sri T. MARIAPPA.—I do not want to give figures off-hand and get into trouble (*Laughter*). ಈಗ ನಮ್ಮ ಇಲಾಖೆಗೆ ಸಂಬಂದಪಟ್ಟಂತೆ ವಿಷಯಗಳನ್ನು ನಾನು ತಿಳಿಸಿದ್ದೇನೆ. ಇನ್ನು ಪ್ರೊಹಿಬಿಷನ್ ವಿಚಾರವನ್ನು ನನ್ನ ಮಾನ್ಯ ಮಿತ್ರರಾದ ಶ್ರೀ ಪೂಣಚ್ಚ ಅವರು ನೋಡಿಕೊಳ್ಳುತ್ತಾರೆ. ಮೊದಲನೆಯ ದಿವಸ ಜ್ಯುಡಿಷಿಯಲ್ ಅಡ್ಮಿನಿಸ್ಟ್ರೇಷನ್ ವಿಷಯವಾಗಿ ಹೇಳುವಾಗ ಸ್ಟಾಂಪ್ ಡ್ಯೂಟಿ ಜಾಸ್ತಿ ಮಾಡಿದರೆ ನಫೆ ಸಂಪಾದನೆ ಮಾಡುತ್ತೇವೆ ಎಂದು ಹೇಳಿದರು. ಶ್ರೀ ಶಿವಪ್ಪನವರು ಹೇಳಿದರು. ಶ್ರೀ ಶಿವಪ್ಪನವರು ಸ್ಟಾಂಪ್ ರೆವಿನ್ಯೂ ವಿಚಾರದಲ್ಲಿ ಡೀಟೇಲ್ಸ್ ಸ್ವಲ್ಪ ಓದಿದ್ದರೆ ಚೆನ್ನಾಗಿತ್ತು. ಅಲ್ಲಿ ಜುಡಿಷಿಯಲ್ ಮತ್ತು ನಾನ್ ಜುಡಿಷಿಯಲ್ ಸ್ಟಾಂಪಿನ ಆದಾಯ ಅಂಕಿ ಅಂಶಗಳನ್ನು ಈ ಡಿಮ್ಯಾಂಡಿನಲ್ಲಿ ಕೊಟ್ಟಿದ್ದಾರೆ. ಜುಡಿಷಿಯಲ್ ಸ್ಟಾಂಪಿನ ಆದಾಯ 40 ಲಕ್ಷ 77 ಸಾವಿರ ರೂಪಾಯಿಗಳು. ಅದರಲ್ಲಿ ಕಮಿಷನ್ ವಗೈರೆ ಮುಂತಾದ ಖರ್ಚಿಗೆ 80 ಸಾವಿರ ರೂಪಾಯಿ ತೆಗೆಯಬೇಕು. ಆದರ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್‌ಗೆ ಖರ್ಚು 78 ಲಕ್ಷ 80 ಸಾವಿರ ರೂಪಾಯಿ. ಅದಕ್ಕೆ ಸಂಬಂಧಪಟ್ಟಂಥ ಜೈಲ್ಸ್ ಮತ್ತು ಕನ್ವಿಕ್ಷನ್ ಸೆಟಲ್‌ಮೆಂಟ್ಸ್‌ಗೆ 35 ಲಕ್ಷ 35 ಸಾವಿರ. ಆದ್ದರಿಂದ sale of judicial stampsನಿಂದ ಕೋರ್ಟ್ ಫೀ ಸ್ಟಾಂಪ್‌ನಿಂದ ನಫೆ ಮಾಡುತ್ತೇವೆಂದು ಹೇಳಿದರು. ಅದನ್ನು ಹೊರಗಡೆಯ ಜನ ನಿಜವಾಗಿಯೂ ಒಪ್ಪುತ್ತಾರೆಯೇ? ಜ್ಯುಡಿಷಿಯಲ್ ಸ್ಟಾಂಪ್ಸ್‌ನಿಂದ ಎಷ್ಟು ಬರುತ್ತದೆ? ನಮಗೆ ನಫೆಯೂ ಬೇಡ ನಷ್ಟವೂ ಬೇಡ. ಸರ್ವಿಸ್ at costನಲ್ಲಿ ಮಾರಿದರೆ ಸಾಕು. ಅದಕ್ಕೋಸ್ಕರವೇ ತಮ್ಮ ಮುಂದೆ ಸೂಟ್ ವ್ಯಾಲ್ಯುಯೇಷನ್ ಮತ್ತು ಕೋರ್ಟ್ ಫೀ ಸ್ಟಾಂಪಿನ ಮಸೂದೆಯನ್ನು ತಂದಿದ್ದೇವೆ. ಸ್ವಲ್ಪ ಹೆಚ್ಚು ಕಡಮೆ ಬೊಂಬಾಯಿ ಮತ್ತು ಮದರಾಸು ಪ್ರಾಂತಗಳಲ್ಲಿರುವ ರೇಟಿಗೆ ಸಮನ್ವಯ ಮಾಡಿ ಮಸೂದೆಯನ್ನು ತಂದಿದ್ದೇವೆ. ಈ ಬಾಬಿನಲ್ಲಿ ಇನ್ನೂ ಸ್ವಲ್ಪ ಜಾಸ್ತಿ ಉತ್ಪತ್ತಿ ಬಂದರೆ ಮತ್ತು ರಿಟ್ರೆಂಚ್‌ಮೆಂಟ್ ಮಾಡಿದರೆ ಆದಾಯ ಖರ್ಚು ಸರಿದೂಗಬಹುದೆಂದು ತಿಳಿದಿದ್ದೇವೆ. ಈಗ ಒಂದೆರಡು ವರ್ಷಗಳಲ್ಲಿ ಎಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಮತ್ತು allied ಡಿಪಾರ್ಟ್‌ಮೆಂಟುಗಳಿಂದ ಸ್ವಲ್ಪ ಲಾಸ್ ಆಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಹೈಕೋರ್ಟ್ ಜಡ್ಜಿಗಳಿಗೆ ಒಂದು ಸಾವಿರ ರೂಪಾಯಿ ಇದ್ದುದನ್ನು ನಾಲ್ಕು ಸಾವಿರ ಮಾಡಿದ್ದು ಸರ್ವೀಸ್ at cost ಹೇಗೆ ಆಗುತ್ತದೆ?

ಶ್ರೀ ಟಿ. ಮರಿಯಪ್ಪ.—ಇತ್ತೀಚೆಗೆ ಖರ್ಚು ಜಾಸ್ತಿಯಾಗಿದೆ. ಆ ಬಾಬುಗಳು ಯಾವುವೆಂದರೆ: Not only administration of justice, but also maintenance of jails, convict settlements and salaries. ಒಂದೆರಡು ಮೂರು ವರ್ಷಗಳು ಖರ್ಚು ಕಡಮೆ ಮಾಡುವ ಪ್ರಯತ್ನ ಮಾಡಿದರೆ ಜನಗಳಿಗೆ ತೆರಿಗೆ ಭಾರ ಜಾಸ್ತಿ ಆಗದ ರೀತಿಯಲ್ಲಿ ತಮ್ಮ ಮನಸ್ಸು ನೋಯದ ರೀತಿಯಲ್ಲಿ ಜನರ ಮೇಲೆ ಬೀಳುವ ತೆರಿಗೆಯನ್ನು ಕಡಮೆ ಮಾಡಬಹುದು ಎಂದು ಹೇಳುತ್ತೇನೆ.

5-30 P.M.

ಶ್ರೀ ಯು. ಎಂ. ಮಾದಪ್ಪ.—ನಾನ್ ಜುಡಿಷಿಯಲ್ ಸ್ಟಾಂಪ್ ವಿಚಾರ ಹೇಳಿದರು. ಈಗ ಸ್ಟಾಂಪ್ ಖರೀದಿ ಹೆಚ್ಚಾಗಿರುವುದರಿಂದ ಆಸ್ತಿಯ ಬೆಲೆ ಕಡಮೆ ಹಾಕಿ ಸ್ಟಾಂಪ್ಸ್ ರೂಪವಾಗಿ ಸರ್ಕಾರಕ್ಕೆ ಸಲ್ಲಿಸಬೇಕಾದ್ದನ್ನು ಉಳಿಸಿಕೊಳ್ಳುತ್ತಿರುವುದು ಗಮನಕ್ಕೆ ಬಂದಿದೆಯೇ? ಇದರಿಂದ ಲಿಟಿಗೇಷನ್ ಸಹ ಹೆಚ್ಚುವುದಕ್ಕೆ ಕಾರಣವಾಗುವುದಿಲ್ಲವೆ?

ಶ್ರೀ ಟಿ. ಮರಿಯಪ್ಪ.—ಶ್ರೀ ವೆಂಕಟೇಗೌಡರು ಹೇಳಿದ್ದು ನಿಜ. ಅದನ್ನು ಬಾಕಿಯವರೂ ಹೇಳಿದ್ದಾರೆ ನ್ಯಾಯ ಬಹಳ ಕಡಮೆ ಖರೀದಿಯಲ್ಲಿ ದೊರೆಯಬೇಕು. ಬಡವರಿಗೆ ಇನ್ನು ಒಂದು ಕಡಮೆ ಸ್ಟೇಜ್‌ನಲ್ಲಿ ದೊರೆಯಬೇಕು ಎಂದು ಹೇಳಿದ್ದಾರೆ. ಜ್ಯುಡಿಷಿಯಲ್ ಸ್ಟಾಂಪ್ಸ್ ಮತ್ತು ನಾನ್-ಜ್ಯುಡಿಷಿಯಲ್ ಸ್ಟಾಂಪ್ಸ್ ಎಂದು ಮಾಡಿ, ಅದರಿಂದ ಬೇಕಾದರೆ ಸರ್ಕಾರಕ್ಕೆ ಆದಾಯ ಸಿಕ್ಕಲಿ ಎಂದು ಹೇಳಿದ್ದಾರೆ. ಆದರೆ ನ್ಯಾಯಾಡಳಿತಕ್ಕೆ ತಗಲುವ ವೆಚ್ಚಕ್ಕಿಂತ ಹೆಚ್ಚು ಆದಾಯವನ್ನು ಸರ್ಕಾರ ಸ್ಟಾಂಪ್ಸ್ ತೆರಿಗೆ ಮೂಲಕ ಸಂಪಾದಿಸುತ್ತಿದೆ ಎಂಬ ವಾದ ಸರಿಯಲ್ಲ. ಸ್ವಲ್ಪ ಭಾಗವನ್ನು ಸಾಮಾನ್ಯ ಆದಾಯದಿಂದ ಪೂರೈಸಲಾಗುತ್ತಿದೆ.

ಶ್ರೀ ಕೆ. ಕೆಂಚಪ್ಪ.—ನಾಳೆ ತಮ್ಮ ಆಫೀಸಿಗೆ ಬಂದು ಜ್ಯುಡಿಷಿಯಲ್ ಅಡ್ಮಿನಿಸ್ಟ್ರೇಷನ್ ಮತ್ತು ಸ್ಟಾಂಪ್ಸ್ ಬಾಬಿನಲ್ಲಿ ಹೆಚ್ಚಾಗಿದೆಯೆಂಬುದನ್ನು ತೋರಿಸುತ್ತೇನೆ.

ಶ್ರೀ ಟಿ. ಮರಿಯಪ್ಪ.—ಬಹಳ ಸಂತೋಷ. ಯಾವಾಗ ಬೇಕಾದರೂ ತಾವು ಬರಬಹುದು. Sri Kenchappa is always welcome. He was my classmate in the Law College. ಅದರೆ ಅವರು ಒಂದೇಪಟ್ಟು ಹಿಡಿದುಕೊಂಡು ಇದೇ ನ್ಯಾಯ ಎಂದು ಹೇಳಬಾರದು. ಅಪೋಜಿಟ್ ಪಾಯಿಂಟ್ ಆಫ್ ವ್ಯೂ ಇದೆಯೆಂದು ಯೋಚನೆ ಮಾಡಿ ಅವರು ತಮ್ಮ ಅಭಿಪ್ರಾಯ ಬದಲಾಯಿಸಿಕೊಳ್ಳುವುದಕ್ಕೆ ಸಿದ್ಧರಾಗಿರಬೇಕೆಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನೊಂದು ವಿಷಯ: ಅನೇಕರು ಹಳೆಯ ಮೈಸೂರಿನ ಅಂಕಿ ಅಂಶಗಳನ್ನು ಇಲ್ಲಿ ಪ್ರತಿಪಾದಿಸಿದರು. ಮಾನ್ಯ ಸ್ನೇಹಿತರು ಹಳೆಯ ಮೈಸೂರಿನ ವಿಚಾರ ಹೇಳಿದರು. ಈಗ ಹೊಸ ಮೈಸೂರಿನಲ್ಲಿ ಹಳೆಯ ಮೈಸೂರಿನ ವಿಚಾರ ಹೋಲಿಕೆ ಮಾಡುವುದಕ್ಕಾಗುವುದಿಲ್ಲ. ಈಗ ಹೊಸ ವಾತಾವರಣವಿದೆ. ಅನೇಕ ಬದಲಾವಣೆಗಳಾಗಿವೆ. ಜೊತೆಗೆ ಬೊಂಬಾಯಿ ಪ್ರಾಂತದ ಅಧಿಕಾರಿಗಳ ಸಂಬಳ ಬಹಳ ಜಾಸ್ತಿ; ಹಳೆಯ ಮೈಸೂರಿನವರ ಸಂಬಳ ಕಡಮೆ, ಇದೊಂದು ಕಷ್ಟ, ಆದ್ದರಿಂದ ಸ್ವಲ್ಪ ಕಡಮೆಯಿರುವವರಿಗೆ ಜಾಸ್ತಿ ಮಾಡಬೇಕೆಂದು ಮೊದಲಿನಿಂದಲೂ ಒತ್ತಾಯ ಮಾಡಿದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಮೇಲಿನವರಿಗೆ ಕಡಮೆ ಮಾಡಿ ಬಹಳ ಕಡಮೆ ಬರುವವರಿಗೆ ಜಾಸ್ತಿ ಮಾಡಬೇಕೆಂದು ನಾವು ಹೇಳುವುದು. ನಾಲ್ಕು ಸಾವಿರ ರೂಪಾಯಿ ಬರುವವರಿಗೆ ಹೆಚ್ಚಾಗಿ ಕೊಡಿ ಎಂದು ಹೇಳುವುದಿಲ್ಲ. ಅನೇಕರಿಗೆ ಕಡಮೆಯಿರುವಾಗ ಕೆಲವರಿಗೇಕೆ 2-3 ಸಾವಿರ ರೂಪಾಯಿ ಕೊಡಬೇಕು?

ಶ್ರೀ ಟಿ. ಮರಿಯಪ್ಪ.—ಆ ದಿವಸವೇ ಪ್ರತಿಪಾದನೆ ಮಾಡಿದ್ದೇನೆ. ಹೈಯರ್ ಸ್ಕೇಲ್ ಜಾಸ್ತಿ ಇರಬಾರದು

(ಶ್ರೀ ಟಿ. ಮರಿಯಪ್ಪ.)

1 : 30 ಇರುವುದನ್ನು 1 : 20 ಮಾಡಬೇಕು, ಕೊನೆಯಲ್ಲಿ 1:10 ಆಗಬೇಕು ಎಂಬುದನ್ನು ಒಪ್ಪುತ್ತೇನೆ. ಡಿಸ್ಪ್ಯಾರಿಟಿ ಇರಬಾರದೆಂಬುದನ್ನು ಒಪ್ಪಿಕೊಳ್ಳುತ್ತೇನೆ.

ಇನ್ನೊಂದು ಹೆಜ್ಜೆ ಮುಂದೆ ಹೋಗುತ್ತೇನೆ. ಹೇಳಬಾರದೆಂದಿದ್ದೆ. ಆದರೆ ಶ್ರೀ ರಾಜಯ್ಯಶೆಟ್ಟರು ಹಳೆಯ ಸಂಸ್ಥಾನದ ವಿಚಾರ ಹೇಳಿದರು. ಮಾಧವ ರಾವ್ ಫೈನಾನ್ಸ್ ಎನ್‌ಕ್ವೈರಿ ಕಮಿಟಿಯವರು ಸಹ ಆ ವಿಷಯ ಪ್ರಸ್ತಾಪ ಮಾಡಿದ್ದಾರೆ. ಅವರೂ ಕೂಡ ಮೈಸೂರಿನಲ್ಲಿ ಟ್ಯಾಕ್ಸೆಬಲ್ ಕಪಾಸಿಟಿ ರೀಚ್ ಆಗಿಲ್ಲ; ಇನ್ನೂ ಹೆಚ್ಚು ತೆರಿಗೆ ಹಾಕುವುದಕ್ಕೆ ಅವಕಾಶವಿದೆ, ಆದಷ್ಟು ಬೇಗ ತೆರಿಗೆ ಹೆಚ್ಚಿಸಬೇಕು ಎಂದು ಹೇಳಿದ್ದಾರೆ. ನಮ್ಮಲ್ಲಿ ಹೊಸ ಸನ್ನಿವೇಶಕ್ಕನುಗುಣವಾಗಿ ತೆರಿಗೆ ಮಸೂದೆಗಳನ್ನು ತಂದಿದೆ. ಬೇಕಾದರೆ ಸಮಿತಿ ವರದಿಯ ಕೆಲವು ಭಾಗವನ್ನು 39ನೆಯ ಪುಟದಲ್ಲಿ ತಾವು ನೋಡಬಹುದು. ಹಳೆಯ ಮೈಸೂರಿನಲ್ಲಿ ಒಂದು ಕೋಟಿ ರೂಪಾಯಿ ಕಡಮೆ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕಿಂತ ಜಾಸ್ತಿ ಕಡಮೆ ಮಾಡಿದ್ದೇವೆ. ರಾಷ್ಟ್ರದ ಆದಾಯದ ಶೇಕಡ ಏಳೆಂಟರಷ್ಟು ಮಾತ್ರ ಈಗ ತೆರಿಗೆ ವಿಧಿಸಲಾಗುತ್ತಿದೆ. ಸಮಿತಿಯ ಶಿಫಾರಸ್ಸಿನ ಪ್ರಕಾರ ಇನ್ನೂ ತೆರಿಗೆ ವಿಧಿಸಲು ಅವಕಾಶವಿದೆ. ಆದ್ದರಿಂದ ತೆರಿಗೆಯ ಹೊರೆ ಹೆಚ್ಚು ಎಂಬ ವಾದವನ್ನು ಪುಷ್ಟೀಕರಿಸಲು ಸಾಧ್ಯವಿಲ್ಲ.

ಇನ್ನೂ ಇತರ ತೆರಿಗೆಗಳ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಮುಖ್ಯವಾಗಿ ಮಾರಾಟ ತೆರಿಗೆಯ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಮಾರಾಟ ತೆರಿಗೆಯ ಮಸೂದೆಯನ್ನು ಈ ಸಭೆಯ ಮುಂದೆ ಇಡುವಾಗ ನಾನು ಏನು ಹೇಳಿದೆನೆಂಬುದನ್ನು ಸ್ವಲ್ಪ ಜ್ಞಾಪಕ ಮಾಡಿಕೊಳ್ಳಬೇಕು. ನಮ್ಮ ಅಕ್ಕಪಕ್ಕಗಳಲ್ಲಿರುವ ಪ್ರಾಂತಗಳ ಟ್ಯಾಕ್ಸೇಷನ್ ಸ್ಟ್ರಕ್ಚರ್ ಅಥವಾ ಲೆವಲ್ ಆಫ್ ಟ್ಯಾಕ್ಸೇಷನ್ ಏನಿದೆ ಅದನ್ನು ಮೀರಿರುವುದಿಲ್ಲ, ಮೀರಿದರೆ ತೊಂದರೆಯಿದೆ. ಒಂದುವೇಳೆ ಜಾಸ್ತಿಯಾದರೆ ನಮ್ಮ ವ್ಯಾಪಾರ ಬೇರೆ ಕಡೆಗೆ ಹೋಗುತ್ತದೆ. ಮಾರಾಟ ತೆರಿಗೆಯ ದರ ಕೂಡ ಮೈಸೂರಿನಲ್ಲಿ ಮದರಾಸಿಗಿಂತ ಕಡಮೆಯಿದೆ. ಇಲ್ಲಿರುವ ವ್ಯಾಪಾರಿಗಳಿಗೆ ಮತ್ತು ಜನರಿಗೆ ಅನಾವಶ್ಯಕವಾಗಿ ತೊಂದರೆಯಾಗಬಾರದೆಂದು ಸಾಧ್ಯವಾದ ಮಟ್ಟಿಗೆ ನೆರೆಹೊರೆಯ ಪ್ರಾಂತಗಳಲ್ಲಿರುವುದಕ್ಕೆ ಮೀರಬಾರದು, ಆ ಲೆವಲ್‌ಗೆ ಇರಬೇಕು ಅಥವಾ ಕಡಮೆ ಇರಬೇಕು ಎಂದು ಆ ದೃಷ್ಟಿಯಿಂದ ಮಾರಾಟ ತೆರಿಗೆ ಹಾಕಿದ್ದೇವೆ. ಮಾರಾಟ ತೆರಿಗೆಯಲ್ಲಿ ಹೆಚ್ಚು ಹೊರೆಯಿಲ್ಲ. ಪರ್ ಕ್ಯಾಪಿಟಾ ಟ್ಯಾಕ್ಸೇಷನ್ ಆಂಧ್ರದಲ್ಲೇನಿದೆ ಅದಕ್ಕಿಂತ ನಮ್ಮಲ್ಲಿ ಕಡಮೆಯಾಗುತ್ತದೆ. ಮದರಾಸ್ ಲೆವಲ್‌ಗೆ ಕೂಡ ಖಂಡಿತ ಬರುವುದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಕೇಂದ್ರದ ಸೇಲ್ಸ್ ಆಕ್ಟಿನಲ್ಲಿರುವ ಕೆಲವು ಅತ್ಯಾವಶ್ಯಕವಾದ ಪದಾರ್ಥಗಳಿಗೆ ವಿನಾಯಿತಿ ಕೊಡುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಡಿಕ್ಲೇರ್ಡ್ ಗುಡ್ಸ್ ಎಂದೂ ಇಂಥ ಕಡೆ ತೆರಿಗೆ ಹಾಕಬೇಕೆಂದೂ ಇದೆ. ಬಟ್ಟೆ, ಸಕ್ಕರೆ, ಹೊಗೆಸೊಪ್ಪು ಈ ಮೂರು ಪದಾರ್ಥಗಳಿಗೂ ಕೇಂದ್ರದವರು ತೆರಿಗೆ ಹಾಕುತ್ತಾರೆ. ಅಲ್ಲಿನ ಬಿಲ್ಲು ಪಾಸಾದ ತಕ್ಷಣ ನಾವು ಈ ಮೂರು ಪದಾರ್ಥಗಳ ಮೇಲೆ ತೆರಿಗೆ ಹಾಕುವುದಿಲ್ಲ. ಆ ಬಾಬತು ನಮಗೆ ಬರಬಹುದಾದ ಆದಾಯದ ಭಾಗ ಕಾನೂನು ಪ್ರಕಾರ ಆಮೇಲೆ ತೆಗೆದುಕೊಳ್ಳುತ್ತೇವೆ. ದ್ವಿಗುಣವಾಗಿ ತೆರಿಗೆ ಹಾಕುವುದಿಲ್ಲ. ಈ ಮೂರು ಪದಾರ್ಥಗಳಿಗೆ ಕೇಂದ್ರದವರು ತೆರಿಗೆ ವಿಧಿಸಿದ ಮೇಲೆ ಇಲ್ಲಿ ಹಾಕಿರುವ ತೆರಿಗೆ ಆಟೋಮ್ಯಾಟಿಕ್ಕಾಗಿ ಹೋಗುತ್ತದೆ.

ಇನ್ನೊಂದು ವಿಷಯ ಪ್ರಸ್ತಾಪ ಮಾಡಿದ್ದಾರೆ. ಕಂದಾಯ ವಸೂಲಿಯಲ್ಲಿ ಅನೇಕ ಅಧಿಕಾರಿಗಳು ತೊಂದರೆ ಮಾಡಿದ್ದಾರೆಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ಮಾರಾಟ ತೆರಿಗೆಯ ಇಲಾಖೆಯಲ್ಲಿ ಅಧಿಕಾರಿಗಳ ಇಂಟರ್‌ಸ್ಟೇಟ್ ಸೀನಿಯಾರಿಟಿ ಪಟ್ಟಿಯಲ್ಲಿ ವ್ಯತ್ಯಾಸವಾಗಿ ಸೀನಿಯಾರಿಟಿ ದೊರಕದೆ ಅವರು ಅತೃಪ್ತಿಗೊಂಡು ಜುಗುಪ್ಸೆಯಿಂದ ಸರಿಯಾಗಿ ತೆರಿಗೆ ವಸೂಲುಮಾಡಿಲ್ಲ, ತೆರಿಗೆ ವಸೂಲಿಯಲ್ಲಿ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದರು. ಅದೇಕೆ ಹಾಗೆ ಹೇಳಿದರೋ ನನಗೆ ಅರ್ಥವಾಗುತ್ತಿಲ್ಲ. ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟಿಗೂ ಸೇಲ್ಸ್‌ಟ್ಯಾಕ್ಸ್ ವಸೂಲಿಗೂ ಏನು ಸಂಬಂಧ ? ಇಂಟರ್ ಸ್ಟೇಟ್ ಸೀನಿಯಾರಟಿ ಲಿಸ್ಟ್ ವಿಚಾರ ಬಡ್ಜೆಟ್ ಭಾಷಣದಲ್ಲಿ ಆಗಲೇ ಹೇಳಿದ್ದೇನೆ. ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಂಡು ಕೂಡಲೇ ಆ ಲಿಸ್ಟ್ ಕಾಪಿಯನ್ನು ಸಂಬಂಧಪಟ್ಟವರಿಗೆ ಕಳುಹಿಸಿ ಆಕ್ಷೇಪಣೆಯೇನಾದರೂ ಇದ್ದರೆ ಸೂಚಿಸಲು ಅವಕಾಶಕೊಟ್ಟು ಅಮೂಲಾಗ್ರವಾಗಿ ಪರಿಶೀಲಿಸಿ ಸ್ಥಾನಗಳನ್ನು ನಿಗದಿಮಾಡುತ್ತೇವೆ. ಆದ್ದರಿಂದ ಯಾವ ಅಧಿಕಾರಿಯೂ ಕೂಡ ಆ ವಿಷಯದಲ್ಲಿ ಅನುಮಾನ, ಸಂಶಯ ಅಥವಾ ವ್ಯಥೆ ಪಡಬೇಕಾಗಿಲ್ಲ. ಎರಡನೆಯದು ಹೀಗೆ ಐದು ಭಾಗಗಳು ಸೇರಿ ಒಂದು ರಾಜ್ಯವಾಗಿರುವಾಗ ಹಳೆಯ ಮೈಸೂರಿನಲ್ಲಿದ್ದ ಅನುಕೂಲವಿರುವುದಿಲ್ಲ ವೆಂಬುದನ್ನು ಮನಸ್ಸಿನಲ್ಲಿಡಬೇಕು. ಎಲ್ಲಾ ಅನುಕೂಲವಿರುವುದಿಲ್ಲವೆಂಬುದನ್ನು ಮನಸ್ಸಿನಲ್ಲಿಡಬೇಕು. ಎಲ್ಲಾ ಅನುಕೂಲವೂ ಬೇಕೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇಂಟರ್ ಸ್ಟೇಟ್ ಲಿಸ್ಟ್ ಮಾಡುವಾಗ ಬೊಂಬಾಯಿನವರು ಮತ್ತು ಹೈದರಾಬಾದಿನವರು ಕೆಲವರು ಮೇಲೆ ಬಂದು ಸೀನಿಯರ್ಸ್ ಆದರೆ ಇತರರಿಗೆ ಪ್ರಮೋಷನ್ ಸಿಕ್ಕುವುದು ಕೆಲವು ಸಂದರ್ಭಗಳಲ್ಲಿ ನಿಧಾನವಾಗಬಹುದು. ಆದರೆ ಎಲ್ಲಾ ಕಡೆಯೂ ನಿಧಾನವಾಗುವುದಿಲ್ಲ. ಆದ್ದರಿಂದ ಆ ಕಾರಣದಿಂದ ಬಾಕಿ ನಿಂತಿದೆಯೆಂದು ಹೇಳುವುದಕ್ಕೆ ಅವಕಾಶವಿಲ್ಲ. ಮದರಾಸು, ಆಂಧ್ರ, ಬೊಂಬಾಯಿ, ಹೈದರಾಬಾದು ಪ್ರಾಂತಗಳಲ್ಲಿ ಪೀನಲ್ ಪ್ರಾವಿಷನ್ಸ್ ಸೇಲ್ಸ್‌ಟ್ಯಾಕ್ಸ್ ಆಕ್ಟಿನಲ್ಲಿ ಬಹಳ ಕಠಿಣವಾಗಿವೆ. ಆದ್ದರಿಂದ ಅಲ್ಲಿ ಜಾಸ್ತಿ ವಸೂಲಾಗುತ್ತಿದೆ. ಹಳೆಯ ಮೈಸೂರಿನಲ್ಲಿ 1948ನೆಯ ಇಸವಿಯ ಆಕ್ಟಿನಲ್ಲಿ ಆ ರೀತಿ ಇತ್ತು. 1955ರಲ್ಲಿ ಅದನ್ನು ತಿದ್ದುಪಡಿ ಮಾಡಿದಾಗ ಅನೇಕರು ಮಾರಾಟ ತೆರಿಗೆ ವಸೂಲಿಗೇಕೆ ಪೀನಲ್ ಪ್ರಾವಿಷನ್ ಎಂದು ಆಕ್ಷೇಪಿಸಿದ್ದರಿಂದ ಅದನ್ನು ತೆಗೆದು ಹಾಕಿ ಆಗ ಭೂಕಂದಾಯದ ಬಾಕಿಯನ್ನು ವಸೂಲುಮಾಡುವಂತೆ ಮಾರಾಟ ತೆರಿಗೆಯನ್ನೂ ವಸೂಲು ಮಾಡಬೇಕೆಂದು ಗೊತ್ತುಮಾಡಿದೆವು. ಆ ರೀತಿ ಪ್ರಾವಿಷನ್ ಕಾನೂನಿನಲ್ಲಿದ್ದರೆ ಆಟೊಮ್ಯಾಟಿಕ್ಕಾಗಿ ವಸೂಲಾಗುತ್ತಿತ್ತೆಂದು ಯಾರೋ ಹೇಳಿದರು. ನೆಪಮಾತ್ರಕ್ಕೆ ಪೀನಲ್ ಪ್ರಾವಿಷನ್ ವಿಧಿಯಿದ್ದರೆ ಸಾಕು, ಶಿಕ್ಷೆ ವಿಧಿಸಬೇಕಾಗಿಲ್ಲ. ತಾನಾಗಿಯೇ ವಸೂಲಾಗುತ್ತದೆ. ಸತ್ಯವಂತರು ಕೆಲವರು ಬಾಕಿ ಇಟ್ಟುಕೊಂಡಿದ್ದಾರೆ. ಅದಕಾಗಿ ಇತ್ತೀಚೆಗೆ ಸ್ಟ್ರಿಕ್ಟಾಗಿ ಇನ್‌ಸ್ಟ್ರಕ್ಷನ್ಸ್ ಕೊಟ್ಟು ಬಾಕಿ ಆದಷ್ಟು ಬೇಗ ವಸೂಲು ಮಾಡಬೇಕು, ಇಲ್ಲದಿದ್ದರೆ ಅಧಿಕಾರಿಗಳ ಕಾಂಡಕ್ಟ್ ಸೀರಿಯಸ್ಸಾಗಿ ನೋಟೀಸ್ ಮಾಡುತ್ತೇವೆ ಎಂದು ಹೇಳಿದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಮಿನರಲ್ ಪ್ರಾವಿನ್ಷಿಯಲ್ ಇದ್ದಾಗ ಕೆಲಸ ಹೇಗೆ ನಡೆಯಿತು? ಬಹಳ ಹಣ ಏಕೆ ನಿಂತಿದೆ?

ಶ್ರೀ ಟಿ. ಮರಿಯಪ್ಪ.—ನಿಂತಿಲ್ಲ, ಶೇಕಡ 85 ಭಾಗ ವಸೂಲಾಗಿದೆ. ಮೂರು ತಿಂಗಳಲ್ಲಿ ಒಂದು ಸ್ಟೇಟ್‌ಮೆಂಟ್ ಸಭೆ ಮುಂದಿಡುತ್ತೇನೆ. ತೆರಿಗೆ ಕೊಡುವುದಕ್ಕೆ ಯಾರಿಗೂ ಮನಸ್ಸು ಬರುವುದಿಲ್ಲ. ಆದಾಯ ತೆರಿಗೆಯ ವಿಚಾರದಲ್ಲೂ ಕೂಡ ಅಫಿಡೆವಿಟ್ ಫೈಲು ಮಾಡಬೇಕೆಂದಿದೆ.

ಶ್ರೀ ವಿ. ಎಲ್. ಪಾಟೀಲ್ (ರೈಬಾಗ್).—ಕ್ರಿಮಿನಲ್ ಲಯಬಿಲಿಟಿಗೆ ಬದಲಾಗಿ ಸಿವಿಲ್ ಲಯಬಿಲಿಟಿ ಮಾಡಬೇಕೆಂದು ವಿನಂತಿ.

ಶ್ರೀ ಟಿ. ಮರಿಯಪ್ಪ.—ತಿರುವಾಂಕೂರು, ಕೊಚ್ಚಿ, ಮದರಾಸು, ಆಂಧ್ರ, ಬೊಂಬಾಯಿ ಇದೇ ರೀತಿ ಇದೆ.

ಒಬ್ಬ ಸದಸ್ಯರು.—ಕ್ರಿಮಿನಲ್ ಲಯಬಿಲಿಟಿ ಇಟ್ಟರೆ ಬಹಳ ಅನ್ಯಾಯವಾಗುತ್ತದೆ ಎಂದು ನನ್ನ ಅಭಿಪ್ರಾಯವಿದೆ.

ಶ್ರೀ ಟಿ. ಮರಿಯಪ್ಪ.—ಇಲ್ಲಿಯವರೆಗೆ ಅನ್ಯಾಯವಾಗಿಲ್ಲ. ಇದನ್ನು ಆನೆಸ್ಟ್ ಟ್ರೇಡರ್ಸ್ ಮೇಲೆ ಅನಾವಶ್ಯಕವಾಗಿ ಉಪಯೋಗಿಸುವುದಿಲ್ಲ. ಕ್ರಿಮಿನಲ್ ಲಯಬಿಲಿಟಿ ಫಿಕ್ಸ್ ಮಾಡಬೇಕಾದರೆ ಯಾರಾದರೂ ಒಬ್ಬರು ರೆಸ್‌ಪಾನ್ಸಿಬಲ್ ಆಫೀಸರು ಆರ್ಡರು ಮಾಡುತ್ತಾರೆ. ಸಣ್ಣ ಪುಟ್ಟ ಆಫೀಸರುಗಳು ಇದನ್ನು ಮಾಡುವುದಕ್ಕಾಗುವುದಿಲ್ಲ. ಇಷ್ಟು safeguards ಇವೆ. ಎಕ್ಸೈಜು ರೆವೆನ್ಯೂ ಬಹಳ ಬಾಕಿ ಇದೆ ಎಂದು ಹೇಳಿದರು. ಒಂದು ಪ್ರಶ್ನೆಗೆ ಉತ್ತರವಾಗಿ ಕೊಟ್ಟಂತಹ ಅಂಕಿ ಅಂಶಗಳನ್ನು ತೆಗೆದುಕೊಂಡು ಎಲ್ಲಿ ದೊಡ್ಡ ಚರ್ಚೆ ಮಾಡಿದ್ದಾರೆ. ಅದೂ ಒಂದು ಟೀಕೆ ಎಂದು ಇಟ್ಟುಕೊಳ್ಳೋಣ. ಅರವತ್ತು ಲಕ್ಷ ರೂಪಾಯಿಗಳ ಬಾಕಿ ಹೈದರಾಬಾದಿನಿಂದ ಹೊಸದಾಗಿ ಬಂದಿರುವುದೇ ಹೊರತು ನಮ್ಮ ದೇಶದಲ್ಲಿ ಎಂಟು ಲಕ್ಷ ರೂಪಾಯಿಗಳಷ್ಟು ಮಾತ್ರ ಬಾಕಿಯಿದೆ. ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನೆಲ್ಲ ತೆಗೆದುಕೊಂಡಿದ್ದೇವೆ. ಅದರಲ್ಲೂ ಈ ಸಭೆಯಲ್ಲಿ ಚರ್ಚೆ ಆದಮೇಲೆ stringent action ತೆಗೆದುಕೊಳ್ಳಬೇಕು ಎಂದು instructions ಕೊಟ್ಟಿದೆ. ಹೀಗೆ ಇದು Legacy of Hyderabad. ನಾವೂ ಕೂಡ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಬಾಕಿ ಟ್ಯಾಕ್ಸುಗಳಲ್ಲಿ ಕೆಲವು ಸ್ಮಾಲ್ ಅಮೌಂಟ್ ಬಾಕಿ ಇದೆ. ಲ್ಯಾಂಡು ರೆವನ್ಯೂವಿನಲ್ಲಿ ಸ್ವಲ್ಪ ಬಾಕಿ ಇದೆ; ಈ ಮಧ್ಯದಲ್ಲಿ ಕೆಲವು ಕಡೆ ಲ್ಯಾಂಡು ರೆವೆನ್ಯೂ ಕಲೆಕ್ಷನ್ನುಗಳನ್ನು ಸಸ್ಪೆಂಡು ಮಾಡಿದ್ದಾರೆ. ಅವನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. Particularly famine areas ಗಳಲ್ಲಿ ಲ್ಯಾಂಡು ರೆವೆನ್ಯೂ ಕಲೆಕ್ಷನ್ನುಗಳನ್ನು ಸಸ್ಪೆಂಡು ಮಾಡಿದ್ದಾರೆ. ನಿನ್ನೆಯ ದಿವಸ ಗುಲ್ಬರ್ಗ ಜಿಲ್ಲೆಗೆ ಪುನಃ ನಾಲ್ಕು ಲಕ್ಷ ರೂಪಾಯಿಗಳನ್ನು ಕ್ಷಾಮ ನಿವಾರಣೆ ಕಾಮಗಾರಿಗಳಿಗಾಗಿ ಮಂಜೂರು ಮಾಡಿಲಾಯಿತು. ಅಲ್ಲದೆ, ಈಗಾಗಲೇ ಅಲ್ಲಿ Distress conditions are continuing ಎರಡು ವರದಿ ಬಂದಿದ್ದರ ಮೇಲೆ ಲ್ಯಾಂಡು ರೆವೆನ್ಯೂ ಕಲೆಕ್ಷನ್ನನ್ನು ನಿಲ್ಲಿಸಿದ್ದೇವೆ. ಇದನ್ನೆಲ್ಲ ತೆಗೆದು ಹಾಕಿದರೆ ಸರಕಾರಕ್ಕೆ ಬರಬೇಕಾದ ಬಾಕಿ ಇನ್ನೂ ಕಡಮೆಯಾಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ (ಅಫಜಲ್‌ಪುರ).—ನಾಲ್ಕು ಲಕ್ಷ ಫೈನಲ್ಲಾಗಿ ಮಂಜೂರು ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪ.—ಅಲ್ಲಿಗತಕ್ಕ ಪ್ರಜೆಗಳ ರಿಕ್ವೆಸ್ಟ್ ಮೇಲೆ ಎರಡು ಲಕ್ಷವನ್ನು ಕಾಮಗಾರಿಗೂ, ಎರಡು ಲಕ್ಷವನ್ನು ತಕಾವಿ ಸಾಲಗಳನ್ನು ಕೊಡುವುದಕ್ಕಾಗಿಯೂ ಕೊಟ್ಟಿದ್ದೇವೆ. ಸರ್ಕಾರದವರು ಕಷ್ಟಪಡತಕ್ಕ ಜನಗಳಿಗೆ ಆದಷ್ಟೂ ಸಹಾಯ ಮಾಡಬೇಕೆಂದಿದ್ದಾರೆ ಮತ್ತು ಅದಕ್ಕೆ ತಯಾರಾಗಿದ್ದೇವೆ.

ಅಧ್ಯಕ್ಷರು.—ಬಿಜಾಪುರದ ಕಡೆಯಲ್ಲೂ ಮಳೆಯಾಗಿಲ್ಲ.

ಶ್ರೀ ಟಿ. ಮರಿಯಪ್ಪ.—ಏನೋ ಬೇಗ ಮಳೆ ಬರಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿ, ತಾವೆಲ್ಲ ಸಂತೋಷವಾಗಿರುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಹೀಗೆ ತಾವು ಎತ್ತಿದಂಥ ಟ್ಯಾಕ್ಸೇಷನ್ ಡ್ಯೂಸ್ ವಿಷಯಗಳಿಗೆ ಉತ್ತರ ಕೊಟ್ಟಿದ್ದೇನೆ. ಹಿಂದೆ ಬಡ್ಜೆಟ್ಟು ಜನರಲ್ ಆಗಿ ಚರ್ಚೆ ಮಾಡುವಾಗಲೂ ಮತ್ತು ಪೋಲೀಸು ಡಿಮ್ಯಾಂಡು ಚರ್ಚೆ ಮಾಡುವಾಗಲೂ ಕೂಡ ಇದೇ ರೀತಿ ಟೀಕೆಗಳನ್ನು ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪೋಲೀಸಿನವರ ವಿಷಯ ಎರಡು ಮುಖ್ಯ ವಿಚಾರಗಳಿಗೋಸ್ಕರ ಬರುತ್ತದೆ. ಒಂದು ವೆಹಿಕಲ್ ಟ್ಯಾಕ್ಸೇಷನ್ನು, ಎರಡನೆಯದು ಪ್ರೋಹಿಬಿಷನ್ನು. ಇವುಗಳಿಗೋಸ್ಕರ ಅವರ ವಿಚಾರ ಹೇಳಬೇಕಾಯಿತು. ಅವರನ್ನು ದೂಷಣೆ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ಪಾನನಿರೋಧದ ವಿಚಾರದಲ್ಲಿ ಕೆಲವರು ತೀವ್ರವಾಗಿ ಹೇಳಿದ್ದಾರೆ. ಕೆಲವು ಕಡೆ ಇದು ಜಯಪ್ರದವಾಗಿಲ್ಲ. ತೆಗೆದು ಹಾಕುವುದು ಸೂಕ್ತ ಎಂದು ಸಲಹೆ ಕೊಟ್ಟಿದ್ದಾರೆ. ಆದರೆ ನಾವೂ ನೀವೂ Directive Principles of Constitution ಎಂಬುದನ್ನ ಮರೆಯಬಾರದು. ಅವು ಇಂಡಿಯಾ ದೇಶಕ್ಕೆ ಅನ್ವಯಿಸುವಂತೆ ರಾಜ್ಯಾಂಗದಲ್ಲಿ ಅಡಕವಾಗಿವೆ. ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಿ ಕೊನೆಗೆ ಸಾಧ್ಯವಾಗಿಲ್ಲವೆಂದು ಹೇಳಬಹುದು. ಇಂತಹ ಆ ನೀತಿಯುತರಾದ ಜನರನ್ನು ಮಾರಲ್ ಪಾಲಿಸೀಸ್ ಮುಖಾಂತರ ನೀತಿವಂತರನ್ನಾಗಿ ಮಾಡಲು ಬಹಳ ಬೇಗ ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಪ್ರಯೋಗ ಎನ್ನುವುದು ಒಂದು ಜನರೇಷನ್ನೇ ಪ್ರಯೋಗ ಮಾಡಬೇಕು. ಈ ಹೊತ್ತು ಜಾರಿಗೆ ತಂದು ಐದು ಹತ್ತು ವರ್ಷಗಳಲ್ಲಿ ಯಶಸ್ವಿಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಹೊತ್ತು ಸಂಪೂರ್ಣವಾಗಿ ಯಶಸ್ವಿಯಾಗಿದೆ ಎಂದು ಹೇಳುವ ಸಾಹಸಕ್ಕೆ ನಾನು ಹೋಗುವುದಿಲ್ಲ; ಅದು ಸಂಪೂರ್ಣವಾಗಿ ವಿಫಲವಾಗಿದೆ ಎಂದೂ ಹೇಳುವುದಕ್ಕೆ ಹೋಗುವುದಿಲ್ಲ. ಬನ್ನಿ ನಾನು ಅನೇಕ ಊರುಗಳಿಗೆ ಕರೆದುಕೊಂಡು ಹೋಗುತ್ತೇನೆ. ಎಷ್ಟೋ ಕಡೆ ಹರಿಜನರು, ಒಡ್ಡರು, ಪಾನನಿರೋಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದಾರೆ. ಅವರ ಮನೆಗಳನ್ನು ನೋಡಿ, ಅವರು ನಡೆಸುತ್ತಿರುವ ಜೀವನವನ್ನು ನೋಡಿ, ಇನ್ನು ಕೆಲವರು ದುಡ್ಡು ಸಂಪಾದನೆ ಮಾಡುವ ದೃಷ್ಟಿಯಿಂದ ಕೋಟ್ಯಾಂತರ ರೂಪಾಯಿಗಳನ್ನು ಮಾಡಿದ್ದಾರೆ. ಕೆ.ಜಿ.ಎಫ್. worst spot ಎಂದು ಹೇಳುತ್ತೇನೆ.

Sri C. M. ARUMUGHAM.—What is the remedy?

ಶ್ರೀ ಟಿ. ಮರಿಯಪ್ಪ.—ರೆಮಿಡಿ ನಿಮ್ಮ ಕೈಯಲ್ಲಿದೆ. ನಾವೂ ನೀವೂ ಸಮಾಜವನ್ನು ಉದ್ಧಾರ ಮಾಡಬೇಕು. ತೀರಾ ಕೆಳಕ್ಕೆ ಹೋಗಿರುವ ಹರಿಜನರ ಪ್ರತಿನಿಧಿಗಳಾಗಿ ಬಂದು ಇದನ್ನು ತೆಗೆದುಬಿಡಿ ಎಂದು ಹೇಳಿದರೆ it is

(ಶ್ರೀ ಟಿ. ಮರಿಯಪ್ಪ)

evidently an immature way of thinking ಎಂದು ಹೇಳಬೇಕಾಗುತ್ತದೆ. ಅವರು ತೀರಾ ಅಧೋಗತಿಗೆ ಹೋಗಿದ್ದಾರೆ, ತೀರಾ ಕೆಳಗೆ ಹೋಗಿದ್ದಾರೆ, ಅವರನ್ನು ಉದ್ಧಾರ ಮಾಡದೆ ಬೇರೆ ರಹವಿಲ್ಲ. ಸರಕಾರಿ ಅಂಗಡಿಗಳಲ್ಲಿ ಇಟ್ಟು ಮಾರಬೇಡಿ ಎಂದು ಮಹಾತ್ಮ ಗಾಂಧಿಯವರು ಹೇಳಿದ ಮಾತಿಗೆ ಮನ್ನಣೆ ಕೊಟ್ಟು ಈಗ ಈ ಪಾನನಿರೋಧವನ್ನು ದೇಶದಲ್ಲಿ ಜಾರಿಗೆ ತಂದಿದ್ದೇವೆ. ಅಲ್ಲಿ ಇಲ್ಲಿ ಒಬ್ಬ ಮನುಷ್ಯನು ಕದ್ದು ಮಾಡಬಹುದು. ಪಾನನಿರೋಧ ಪೂರ್ತಿಯಾಗಿ ಯಶಸ್ವಿಯಾಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾವೂ ನೀವೂ ವಿಚಾರ ಮಾಡಬೇಕು. As leaders of public opinion we must create healthy atmosphere in the country.

Sri M. C. NARASIMHAN.—What about the views of Rajkumari Amrit Kaur?

ಶ್ರೀ ಟಿ. ಮರಿಯಪ್ಪ.—ಪೂರ್ತಿಯಾಗಿ ತಾವು ಆರ್ಟಿಕಲ್ ಓದಿ. ಕೇರಳದಲ್ಲಿ ಈವೊತ್ತಿನ ಸ್ಟೇಟ್‌ಮೆಂಟ್ ನೋಡಿದರೆ, they have sought permission of the Government of India to extend it and the Government of India have said 'go slow.' ನಾವೂ ಹಾಗೆಯೇ ಮಾಡುತ್ತಿದ್ದೇವೆ. ಏನು ಕೆಲಸ ಮಾಡಿದ್ದೇವೋ ಅದನ್ನು consolidate ಮಾಡೋಣ. ಅನುಭವವನ್ನೂ ಪಡೆಯೋಣ ಎಂದು ಯೋಚನೆ ಮಾಡಿದ್ದೇವೆ. ಇದರಲ್ಲಿ ಮುಚ್ಚಿಕೊಳ್ಳಬೇಕಾದ ವಿಷಯವೇನಿಲ್ಲ.

ಎಕ್ಸೈಜ್ ಡಿಪಾರ್ಟ್‌ಮೆಂಟಿನಿಂದ ಪ್ರೊಹಿಬಿಷನ್ನನ್ನು ಜಾರಿ ಮಾಡೋಣ. ಅದು ಹೇಗೆ ಆಗುತ್ತದೆ ಎಂದು ನೋಡಿದೆವು. ಅದು ಸಾಧ್ಯವಾಗಲಿಲ್ಲ. ಅವರಿಗೆ ಕೊಟ್ಟರೆ ಏನಾಗುತ್ತದೆ ಎಂದರೆ, ಗೊತ್ತೇ ಇದೆ ನಾನಂತೂ ಹೇಳಬೇಕಾಗಿಲ್ಲ. ಮದರಾಸಿನಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟಿಗೆ ಕೊಟ್ಟು ನೋಡಿದ್ದಾರೆ. ಯಾವ ರೀತಿ ಎನ್‌ಫೋರ್ಸ್‌ಮೆಂಟ್ ಮಾಡಬೇಕು, ಸಪರೇಟ್ ಆಗಿ ನಾನ್‌ಅಫಿಸಿಯಲ್ ಸಪೋರ್ಟ್ ತೆಗೆದುಕೊಂಡು ಒಂದು ಇಂಡಿಪೆಂಡೆಂಟ್ ಸೆಕ್ಷನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನೋಡುತ್ತಿದ್ದೇವೆ. ಅಲ್ಲದೆ ತಾವು ಏನೇನು ಸಲಹೆಗಳನ್ನು ಕೊಟ್ಟಿದ್ದೀರೋ ಅವುಗಳೆಲ್ಲವನ್ನೂ ನೋಟು ಮಾಡಿಕೊಂಡಿದ್ದೇನೆ. Effective ಆಗಿ enforce ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಜಿ. ವೆಂಕಟೇಗೌಡ.—ಎಷ್ಟು ದಿವಸಗಳೊಳಗಾಗಿ ಪೂರ್ತಿಯಾಗಿ ಜಾರಿ ಮಾಡುತ್ತೀರಿ?

ಶ್ರೀ ಟಿ. ಮರಿಯಪ್ಪ.—ಇರುವ ಕಡೆ ಮೊದಲು effective ಆಗಿ enforce ಮಾಡಿ ಆಮೇಲೆ ಸ್ವಲ್ಪ ಸ್ವಲ್ಪವಾಗಿ ವಿಸ್ತರಣೆ ಮಾಡೋಣ ಎಂದಿದ್ದೇವೆ. ಹಾಗೆ ಮಾಡದೆ ಎಲ್ಲ ಕಡೆಗಳಲ್ಲಿಯೂ ಎಕ್ಸ್‌ಟೆಂಡು ಮಾಡಿದರೆ ಪಬ್ಲಿಕ್ ಟೀಕೆಗೆ ಗುರಿಯಾಗಬೇಕಾಗುತ್ತದೆ ಎಂದು ಎಲ್ಲವನ್ನೂ ಕನ್‌ಸಾಲಿಡೇಟ್ ಮಾಡಿಕೊಂಡು ಆಮೇಲೆ ಆಲೋಚನೆ ಮಾಡೋಣವೆಂದಿದ್ದೇವೆ. ಈಗ ಬಾಂಬೆ ಏರಿಯಾ ಮತ್ತು ಮದರಾಸು ಏರಿಯಾಗಳಲ್ಲಿ ಕಂಪ್ಲೀಟು ಪ್ರಾಹಿಬಿಷನ್ನು ಇದೆ, ಹೈದರಾಬಾದು ಏರಿಯಾ ವೆಟ್ ಏರಿಯಾ ಆಗಿದೆ.

ಶ್ರೀ ಕೆ. ಟಿ. ದಾಸಪ್ಪ (ಹಾಸನ).—ಹಾಸನ ಡಿಸ್ಟ್ರಿಕ್ಟಿನಲ್ಲಿಯಾದರೂ ಪೂರ್ತಿಯಾಗಿ ಜಾರಿ ಮಾಡಿ,

ಶ್ರೀ ಟಿ. ಮರಿಯಪ್ಪ.—Prohibition extend ಮಾಡಿ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಆದರೆ ತೆಗೆದುಬಿಡಿ ಎನ್ನುವ ಜನ ಕಡಮೆ. Opinion is in our favour. Therefore it is a partial success. ದಯವಿಟ್ಟು ದೇಶದಲ್ಲಿರತಕ್ಕ ಪಬ್ಲಿಕ್ ಒಪಿನಿಯನ್ನನ್ನು ತಾವೂ ಷೇಪ್ ಮಾಡಬೇಕು, ನಾವೂ ಷೇಪ್ ಮಾಡಬೇಕು.

ಈ ಸಭೆಯ ಮುಂದೆ ಸೂಚಿಸಿರುವ ಸಲಹೆಗಳನ್ನೆಲ್ಲ ನಾನು ನೋಟು ಮಾಡಿದ್ದೇನೆ. ಮತ್ತು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನೆಲ್ಲ ತಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ. ಯಾವ ಯಾವ ತಂಡದಲ್ಲಿ illicit distillation ಇದೆಯೋ ಅದನ್ನು ಪತ್ತೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಕೆ.ಜಿ.ಎಫ್.ನಲ್ಲಿ illicit distillation ಯಾವ ರೀತಿ ಇದೆ ಎಂದರೆ ದೊಡ್ಡವರೇ ಷರೀಕು ಆಗಿದ್ದಾರೆ. ಬಹಳ ಗೌರವ ಇದ್ದವರು ಇದರಿಂದ ಹಣಸಂಪಾದನೆ ಮಾಡುತ್ತಿದ್ದಾರೆ. ಅಲ್ಲದೆ illicit distillation product ತಾಂಡವಾಡುತ್ತಿದೆ. ಆಫೀಸರ್ಸ್ ನಾನ್ ಅಫಿಸಿಯಲ್ಲುಗಳನ್ನು ಇಟ್ಟುಕೊಂಡು ಇದನ್ನು ಹತೋಟಿಗೆ ತರಲು ಎಷ್ಟರಮಟ್ಟಿಗೆ ಸಾಧ್ಯವೆಂಬುದನ್ನು ಆಲೋಚನೆ ಮಾಡಿ ಪುನಃ ತಮಗೆ ವರದಿಯನ್ನು ಒಪಿಸುತ್ತೇವೆ.

ಆದುದರಿಂದ ಇಷ್ಟು ಹೇಳುತ್ತೇನೆ: ಅನೇಕ ಜನಳಿಗೆಗೆ ಪಾನನಿರೋಧದಿಂದ ಅನುಕೂಲವಾಗಿದೆ. ಕೆಲವರಿಗೆ ಆರೋಗ್ಯ ಕೆಟ್ಟಿದೆ, ಏಕೆಂದರೆ ಅವರು ಏನಾದರೂ ಕುಡಿಯುತ್ತಾರಂತೆ. ಬೂಟ್‌ಪಾಲಿಷ್‌ಗೆ ನಿಂಬೆಹುಳಿ ಹಾಕಿಕೊಂಡು ಕುಡಿಯುತ್ತಾರಂತೆ.

ಶ್ರೀ ಎಂ. ರಾಮಪ್ಪ (ಹರಿಹರ).—ಅಶ್ವಗಂಧಿ ಪಾನಕವೆಂದು ಹೆಸರು ಕೊಟ್ಟು ಮಾರುತ್ತಾರೆ.

ಶ್ರೀ ಟಿ. ಮರಿಯಪ್ಪ.—Tincture bucha ಎಂದು ಹೇಳಿದ್ದಾರೆ.

ಒಬ್ಬ ಸದಸ್ಯರು.—ಶೇಕಡ 90ರಷ್ಟು ಆಲ್-ಕೋಹಾಲ್ ಇರುವುದನ್ನು ಮೊರಬ್ಬ ಎಂದು ಹೇಳಿ ಮಾರುತ್ತಾರೆ.

ಶ್ರೀ ಎ. ಭೀಮಪ್ಪನಾಯಕ್ (ಚಳ್ಳಕೆರೆ).—ಇಂಥವರಿಗೆ ಮಾರಾಟ ಮಾಡುವುದಕ್ಕೆ ಇಡೀ ಸಂಸ್ಥಾನದಲ್ಲಿ ಲೈಸೆನ್ಸ್ ಕೊಟ್ಟಿದ್ದಾರೆ. ನಾನು ಈ ವಿಷಯವನ್ನು ಶ್ರೀ ಪೂಣಚ್ಚರವರಿಗೆ ತಿಳಿಸಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಈ ವಿಷಯಗಳನ್ನೆಲ್ಲ ನಮ್ಮ ಮನಸ್ಸಿನಲ್ಲಿಟ್ಟುಕೊಂಡು ಆದಷ್ಟು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

(*Interruption from Sri L. S. Venkaji Rao*)

Mr. SPEAKER.—Hon'ble Member must remember that there are certain limits to the debate. If the Minister says that he cannot yield, I cannot help the individual member. When he is so insistent and vehement, let him have his say.

Sri L. S. VENKAJI RAO.—I do not propose to take any part in this discussion.

Mr. SPEAKER.—The Hon'ble Member must know the procedure because he is a seasoned parliamentarian. After all, I must convince the

Finance Minister. If it is a point of order, I have a power . . . .

Sri L. S. VENKAJI RAO.—We need not interfere with the speech of the Finance Minister, but my friend sought a clarification and the Minister was not kind enough to yield. When another friend of mine, Sri Bheemappa Naik stood up and explained, the Minister was very good enough to yield.

Sri T. MARIAPPA.—I did not even then yield, but he incidentally explained the thing.

Mr. SPEAKER.—After all, whether the Minister yields or does not yield is not a matter for me; it is for him, and if it is in my power to allow another member to speak, I really allow; if it is a point of order, I do allow.

Sri H. M. CHANNABASAPPA (Krishnarajanagar).—I rise to a point of order. At the time when the Speaker was on his legs and speaking, the Finance Minister also was on his legs. It is not in order.

Mr. SPEAKER.—In such cases I hope the Hon'ble Member will leave the matter to me. I might not have caught him If I had seen him standing, I would have really asked him to take his seat.

ಶ್ರೀ ಟಿ. ಮರಿಯಪ್ಪ.—ಬಹಳ ಸಂತೋಷ, ಸ್ವಾಮಿ ಶ್ರೀ ಚನ್ನಬಸಪ್ಪನವರು ಒಂದು ಕ್ರಿಯಾಲೋಪವನ್ನೆತ್ತಿದ್ದರಿಂದ, there is break.

ಅನೇಕರು ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ ವಿಚಾರದಲ್ಲಿ ಮಾತನಾಡಿದವರಲ್ಲಿ ಟ್ಯಾಕ್ಸಿನ ವಿಚಾರದಲ್ಲಿ ಮಾತನಾಡಿದವರು ಕಡಮೆ. ರೋಡ್ ಟ್ರಾನ್ಸ್‌ಪೋರ್ಟ್ ಹೇಗೆ ನಡೆಯುತ್ತಿದೆ ಎನ್ನುವುದನ್ನು ಹೇಳಿದರು. ಕೆಲವು ಕಡೆ, ಅದರಲ್ಲಿಯೂ ಹೈದರಾಬಾದಿಗೆ ಸೇರಿದ್ದ ಪ್ರದೇಶದಲ್ಲಿ fair weather roadsನಲ್ಲಿ ಬಸ್ ನಡೆಸುವವರಿಗೆ ಹೆಚ್ಚು ಕಷ್ಟವಾಗುತ್ತದೆಂದು ಹೇಳಿದರು. ಆದರೆ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಮದರಾಸಿನಲ್ಲಿ ಏನು ದರವಿದೆಯೋ ಅದಕ್ಕಿಂತ ನಾವು ಹೊಸದಾಗಿ ನಿಗದಿ ಮಾಡಿರುವ ದರ ಕಡಮೆ ಇದೆ. ಬೊಂಬಾಯಿ ಹೈದರಾಬಾದಿನಲ್ಲಿಯೂ ಹೆಚ್ಚಾಗಿ ಕೊಡಬೇಕಾಗಿದೆ. ಬೊಂಬಾಯಿನಲ್ಲಿ ನ್ಯಾಷನಲೈಸ್ ಆಗಿದೆ; ಹೈದರಾಬಾದಿನಲ್ಲಿಯೂ ಆಗಿದೆ. ಎಲ್ಲೆಲ್ಲಿ ನ್ಯಾಷನಲೈಸ್ ಆಗಿದೆಯೋ ಅಲ್ಲೆಲ್ಲಾ ಸರ್ಕಾರದವರೇ ಟ್ಯಾಕ್ಸ್ ಕೊಡ ಬೇಕಾಗುತ್ತದೆ. ಪ್ರಾಯಶಃ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣವಾದ ಮೇಲೆ ಸರ್ಕಾರ ಹೆಚ್ಚು ಕಡಮೆ 30 ಲಕ್ಷ ರೂಪಾಯಿ ಜಾಸ್ತಿ ಕೊಡಬೇಕಾಗಿದೆ. ಆದುದರಿಂದ ಸರ್ಕಾರದ ಮೇಲೆ ತೆರಿಗೆ ಬಿದ್ದಿದೆ. ಬಾಕಿಯದ್ದು ಖಾಸಗಿಯವರ ಮೇಲೆ ಬಿದ್ದಿದೆ. ಮೈಸೂರು ದೇಶದಲ್ಲಿ short distance ಬಸ್ಸುಗಳನ್ನಿಟ್ಟಿರುವವರಿಗೆ ತೊಂದರೆಯಾಗಬಹುದು. ಇದನ್ನು ಯೋಚನೆ ಮಾಡುತ್ತೇವೆ.

ಶ್ರೀಮಾನ್ ಮುಕ್ಕಣ್ಣಪ್ಪನವರು, ಕೆಲವರು ವೆಹಿಕಲ್ ಟ್ಯಾಕ್ಸ್ ಕೊಡದೆ ತಪ್ಪಿಸಿಕೊಂಡಿದ್ದಾರೆ, ಜಾತ್ರೆಗಳಲ್ಲಿ ಮೂರು ಟ್ರಿಪ್‌ಗಳಿಗೆ ಕೊಟ್ಟು 30 ಟ್ರಿಪ್‌ಗಳನ್ನು ಮಾಡುತ್ತಾರೆಂದು ಹೇಳಿದರು. ಯಾರು ಹೀಗೆ ಮಾಡಿದ್ದಾರೆಂಬುದನ್ನು ಅವರು ನನಗೆ ಬರೆದರೆ ವಿಚಾರ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಇತ್ತೀಚೆಗೆ ನಾವು ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯನ್ನು ಏರ್ಪಾಡು ಮಾಡಿದ ಮೇಲೆ ಅನೇಕರಿಗೆ ತೊಂದರೆಯಾಗಿದೆ ಎಂದು ಹೇಳಿದರು, ನಿಜ. ಮೊದಲು ಹಿಂದಿನ ಮೈಸೂರಿನಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಇತ್ತು. ಈಗ ದೊಡ್ಡ ರಾಜ್ಯವಾದ ಮೇಲೆ ಪ್ರತಿ ಜಿಲ್ಲೆಯಲ್ಲಿಯೂ ಮಾಡಬೇಕಾದರೆ ಬಹಳ ಹೆಚ್ಚು ಖರ್ಚಾಗುತ್ತದೆ. ಒಂದೊಂದು ಕಡೆ ಆ ಬಗೆಯ ಏರ್ಪಾಡು ಮಾಡಲು 38 ಸಾವಿರ ರೂಪಾಯಿಗಿಂತ ಹೆಚ್ಚು ಖರ್ಚಾಗುತ್ತದೆ. ಆಯಾ ಪ್ರದೇಶದಲ್ಲಿ ಒಟ್ಟು ಎಷ್ಟೆಷ್ಟು 'ವೆಹಿಕಲ್ಸ್' ಇವೆ ಎಂಬುದನ್ನು ನೋಡಿಕೊಂಡು ಮಾಡಿದ್ದೇವೆ. ಬೆಂಗಳೂರಿನಲ್ಲಿ ದೂರದಲ್ಲಿರುವ ಪ್ರದೇಶದಲ್ಲಿ ಈ ಕಚೇರಿಯನ್ನು ಏರ್ಪಾಡು ಮಾಡಿರುವುದರಿಂದ ಅಲ್ಲಿಗೆ ಜನರು ಹೋಗಿ ಬರುವುದಕ್ಕೆ ತೊಂದರೆಯಾಗಿದೆ ಎಂದು ಹೇಳಿದರು. ಇದು ಪರಿಶೀಲಿಸಬೇಕಾದ ವಿಷಯ. ಯಾರು ತೆರಿಗೆ ಕೊಡುತ್ತಾರೋ ಅವರಿಗೆ ಅನುಕೂಲವಾಗಬೇಕು. ಸಾಧ್ಯವಾದಷ್ಟು ಅನುಕೂಲಗಳನ್ನು ಮಾಡಬೇಕೆಂಬ ಮನಸ್ಸಿದೆ. ಇದೇ ರೀತಿ ಮೈಸೂರಿನಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟ್ ಕಚೇರಿ 'ಲೇಕ್‌ವ್ಯೂ' ನಲ್ಲಿದೆ. ಅಲ್ಲಿಂದ ತೆಗೆದು ಬೇರೆ ಕಡೆ ಹಾಕಿ ಎಂದು ಹೇಳಿದರು. ಅದಕ್ಕೂ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಒಟ್ಟಿನಲ್ಲಿ ತೆರಿಗೆ ಹೆಚ್ಚೇನೂ ಅಲ್ಲ. ಯಾರು ಕೊಡುವುದಿಲ್ಲವೋ ಅವರಿಂದ ವಸೂಲುಮಾಡುತ್ತೇವೆ. ವಸೂಲು ಮಾಡಲು ಬರುವ ಅಧಿಕಾರಿಗಳು ಲಂಚ ತೆಗೆದುಕೊಂಡು ವಾಪಸ್ಸು ಹೋಗುತ್ತಾರೆಂದು ಹೇಳಿದರು. ಹೀಗೆ sweeping ಆಗಿ ಹೇಳುವುದು ಸರಿಯಲ್ಲ. ಲಂಚ ತೆಗೆದುಕೊಳ್ಳುವವರೂ ಇದ್ದಾರೆ. ತೆಗೆದು ಕೊಳ್ಳದೇ ಇರುವವರೂ ಇದ್ದಾರೆ. ಹೀಗಿರುವಾಗ ಎಲ್ಲರಿಗೂ ಅನ್ವಯಿಸುವಂತೆ ಹೀಗೆ ಅಪಾದನೆ ಮಾಡಿದರೆ, ಲಂಚ ತೆಗೆದುಕೊಳ್ಳದೆ ಪ್ರಾಮಾಣಿಕತೆಯಿಂದ ಕೆಲಸ ಮಾಡುವವರ ಮನಸ್ಸಿಗೆ ಬೇಸರವಾಗುತ್ತದೆ. . . .

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೆಸರು ಹೇಳಬಾರದೆಂದು ಹೇಳುತ್ತಾರೆ. ಹೀಗಿರುವಾಗ ಯಾರು ತೆಗೆದುಕೊಳ್ಳುವವರೆಂದು ತಿಳಿಸುವುದು ಹೇಗೆ?

ಶ್ರೀ ಟಿ. ಮರಿಯಪ್ಪ.—ಖಚಿತವಾಗಿಯೂ ಇಂಥವರು ಮಾಡಿದರೆಂದು ಗೊತ್ತಿದ್ದರೆ ಬರೆದು ತಿಳಿಸಿ, ನಾವು ಕ್ರಮ ತೆಗೆದು ಕೊಳ್ಳುತ್ತೇವೆ. ಈ ಮೋಟಾರು ಇಲಾಖೆ ಬೆಲ್ಲ ಇದ್ದ ಹಾಗೆ. ನನಗೆ ಅನುಭವವಿದೆ. ಕಣ್ಣಿಗೆ ಎಣ್ಣೆ ಹಾಕಿಕೊಂಡು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕು. ಬ್ರೇಕ್ ಇನ್‌ಸ್ಪೆಕ್ಟರೇ ಹಣ ತೆಗೆದು ಕೊಳ್ಳುತ್ತಾರೆ. ಈ ಕಾರ್ಯಕ್ಕೆ ದೊಡ್ಡ ಅಧಿಕಾರಿಗಳನ್ನು ನೇಮಿಸಿ ಪುನರ್ರಚಿಸಬೇಕೆಂದು ಸಲಹೆ ಮಾಡಿದ್ದಾರೆ. ರಾಜ್ಯಗಳ ಪುನರ್ವಿಂಗಡಣೆಯಾದ ತಕ್ಷಣ ಅನೇಕ ತೊಂದರೆಗಳು ಬಂದಿವೆ. ಆದಷ್ಟು ಬೇಗ ಇವುಗಳನ್ನು ಸರಿಪಡಿಸುತ್ತೇವೆ.

Sri U. M. MADAPPA.—What about the payment of compensation to local bodies?

ಶ್ರೀ ಟಿ. ಮರಿಯಪ್ಪ.—ಮೂರು ವರ್ಷಗಳ ಸರಾಸರಿ ಆದಾಯವನ್ನು ಲೆಕ್ಕ ಹಾಕಿಕೊಡಬೇಕೆಂದು ಮಾಡಿದ್ದೇವೆ.

Sri V. P. DEENDAYALU NAIDU (Cubbonpet).—Compensation to the local body is based on the rate prevailing as early as in 1936. Even granting that three years' average is taken it will only relate to the years 1933, 1934 and 1935. It must be revised according to the present rate.

Sri T. MARIAPPA.—My friend is entirely mistaken. He was a Mayor of a big Corporation. He must know that compensation can only be given on the basis of existing circumstances. When we acquire property, we only value it at that particular time. Therefore, compensation can only be given on the basis of circumstances then existing, but we don't deny extra help to the local bodies in view of the increased amenities that are needed.

Sri A. BHEEMAPPA NAIK (Challakere).—He says that compensation should be given on the basis of 1936 in respect of motor vehicles that are registered in particular municipalities. It is not that Hon'ble the Minister ought to pay on the basis of three years' average. Hon'ble the Minister is explaining something else.

Sri T. MARIAPPA.—I am not explaining anything else. The compensation is based on the right of the local bodies for a particular quantum of taxation. The tax that we were deriving at that particular time had to be acquired by the Government. Under the enactment it was acquired and therefore compensation has to be determined on the basis of earnings for the last three years.

6 P.M.

Sir, the present proposition is that compensation should be based on the number of vehicles that are now plying It cannot be so. They can even claim. grants. It cannot be called compensation. I lay emphasis on the word 'compensation'. Compensation can only be for acquisition of a right which the local body had at that particular time. Suppose, Sir, we pass a law with regard to the acquisition of a right which the local body had, you must give reasonable compensation at the rates prevailing at that particular time. Therefore compensation based on the number of vehicles that are now plying cannot be given. That cannot be the basis. In view of the increased wear and tear per mile, they are entitled to increased grants.

Sri V. P. DEENADAYALU NAIDU.—One point. Does the Financial Code admit of giving grants like that ?

Sri T. MARIAPPA.—I am not prepared to yield. ಸ್ವಾಮಿ, ಆದುದರಿಂದ ಈ ಲೋಕಲ್ ಬಾಡೀಸ್‌ಗಳಿಗೆ ಸರ್ಕಾರದವರು ಆಗಿಂದಾಗ್ಗೆ ಗ್ರ್ಯಾಂಟನ್ನು ಕೊಡುತ್ತಲೇ ಬಂದಿದ್ದಾರೆ. ಆದಕಾರಣ ತಾವೀಗ ಆ ಕಾಂಪೆನ್‌ಸೇಷನ್ನನ್ನು ತಂದು ಈ ಗ್ರ್ಯಾಂಟಿಗೆ ಗಂಟು ಹಾಕಬಾರದೆಂದು ಹೇಳುತ್ತೇನೆ.

ಶ್ರೀ ಸಿ. ಕೆ. ರಾಜ್ಯಯಸೆಟ್ಟಿ.—ಛಾರ್ಜ್ಡ್ ಅಮೌಂಟನ್ನು ತಾವೇಕೆ ಕೊಟ್ಟಿಲ್ಲ ?

ಶ್ರೀ ಟಿ. ಮರಿಯಪ್ಪ.—ಅದು ನ್ಯಾಯವಾಗಿದೆ. ಆದರೆ ಎಲ್ಲಿ ತಾವು ಹಾಗೆ ಆ ಛಾರ್ಜ್ಡ್ ಅಮೌಂಟನ್ನು ಸರ್ಕಾರದವರು ಕೊಟ್ಟಿಲ್ಲವೆಂದು ಹೇಳುತ್ತಿರೋ ಅದನ್ನು ಸರ್ಕಾರದವರು ಕೊಡುವುದಕ್ಕೆ ಸದಾ ತಯಾರಾಗಿದ್ದಾರೆ. ಆದರೆ ಅದನ್ನು ಸರ್ಕಾರದವರು ಯಾವ ಯಾವ ಭಾಗದಲ್ಲಿ ಪಾವತಿ ಮಾಡಿಲ್ಲವೆಂಬುದನ್ನು ಪರಿಶೀಲನೆ ಮಾಡಿ ಪಾವತಿ ಮಾಡಬೇಕಾಗಿರುತ್ತದೆಂದು ಇಷ್ಟು ಹೇಳಿ ಸರ್ಕಾರದವರು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಿಗೆ ಸಭೆಯವರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That a sum not exceeding Rs. 27,000 be granted to the Government to defray the charges which will come in course of payment during the year ending 31st day of March 1958 in respect of 'Taxes other than Corporation Tax and Estate Duty'."

The motion was adopted.

Mr. SPEAKER.—The question is:

"That a sum not exceeding Rs. 30,97,000 be granted to the Government to defray the charges which will come in course of payment during the year ending 31st day of March 1958, in respect of 'State Excise'."

The motion was adopted.

Mr. SPEAKER.—The question is :

"That a sum not exceeding Rs. 2,35,000 be granted to the Government to defray the charges which will come in course of payment during the year ending 31st day of March 1958, in respect of 'Stamps'."

The motion was adopted.

Mr. SPEAKER.—The question is :

"That a sum not exceeding Rs. 17,83,500 be granted to the Government to defray the charges which will come in course of payment during the year ending 31st day of March 1958 in respect of 'Taxes on Vehicles'."

The motion was adopted.

Mr. SPEAKER.—The question is :

"That a sum not exceeding Rs. 65,06,400 be granted to the Government to defray the charges which will come in course of payment during the year ending 31st day of March 1958, in respect of 'Other Taxes and Duties'."

The motion was adopted.

Mr. SPEAKER.—Now the House rises and will meet tomorrow at 1 P.M.

The House adjourned at Five Minutes past Six of the Clock to meet again on Tuesday, the 23rd July 1957 at One of the Clock.